ಸಂಚಿಕೆ 7 • ಸಂಪುಟ 1 • ಜೂನ್ 2024 • ಬೆಲೆ ರೂ. 18/–

ಕನ್ನಡ ಮಾಸಿಕ

ಕನ್ನಡ ಮಾಸಿಕ



# ಹುಡುಕಾಟ
## ವಿಶೇಷಾಂಕ



LINEN PARK®

SHIRTS • TROUSERS • FABRICS

By

RAMRAJ

# It's A Summer to Chill with Linen Park

Let the summer style roll and the cool breezes flow with Linen Park, pure linen shirts from Ramraj Cotton, your go-to choice for staying cool and stylish from sunup to sundown.



SCAN QR CODE FOR STORE LOCATION

Shop Online @ www.ramrajcotton.in


RAMRAJ
ಜೀವನದಲ್ಲಿ ಮುಟ್ಟಬೇಕಾದ ಗುರಿಗಳು...
ಅದಕ್ಕಾಗಿ ನಾವು ಮಾಡಬೇಕಾದ ಹುಡುಕಾಟಗಳು...
ಆ ಹುಡುಕಾಟ ಹೇಗಿರಬೇಕು...
ಇತ್ಯಾದಿಗಳನ್ನು ತಿಳಿಸುವ
ಹುಡುಕಾಟ
ವಿಶೇಷಾಂಕ
ಎನ್ನುವ ಈ ಸುಮಧುರ ಸಂಚಿಕೆಯನ್ನು ನಿಮಗೆ ನೀಡಲು
ನಾವು ಹೆಮ್ಮೆ ಪಡುತ್ತೇವೆ.

# ಗೌರವಾನ್ವಿತರಿಗೆ...

**ನಮಸ್ಕಾರ.**

ಹುಡುಕಾಟ ಎಂಬುದು ಇಲ್ಲದೆ ಹೋಗಿದ್ದರೆ, ಮನುಷ್ಯ ಸಂಕುಲವು ಇತರ ಜೀವ ಸಂಕುಲಗಳನ್ನು ಮೀರಿ, ಇಷ್ಟೊಂದು ದೂರ ಬೆಳೆಯಲು ಸಾಧ್ಯವೇ ಆಗುತ್ತಿರಲಿಲ್ಲ. ಮಕ್ಕಳ ಕಣ್ಣುಗಳು ಸದಾ ಹೊಸಹೊಸತನ್ನು ಹುಡುಕಾಡುತ್ತಲೇ ಇರುತ್ತವೆ. ಕೈಗಳೂ, ಕಾಲುಗಳೂ ಹುಡುಕಾಟದ ದೃಷ್ಟಿಕೋನದಲ್ಲಿ ಯಾವಾಗಲೂ ಚಲಿಸುತ್ತಿರುತ್ತವೆ. ಮಗುವಿನ ಪ್ರತಿಯೊಂದು ಪ್ರಯತ್ನವೂ ಹುಡುಕಾಟದ ಆರಂಭ ಎಂದೇ ಹೇಳಬಹುದು. 'ಹುಡುಕಾಡಿ, ಕಂಡು ಹಿಡಿಯುವಿರಿ' ಎನ್ನುವ ಬೈಬಲ್‌ನ ನುಡಿಯೂ ಕೂಡ, ಯಾವುದಾದರೂ ಒಂದನ್ನು ಹುಡುಕಾಡಿ ಕಂಡು ಹಿಡಿಯಬೇಕಾದುದರ ಅಗತ್ಯವನ್ನು ಮನವರಿಕೆ ಮಾಡುತ್ತದೆ.

ಒಂದು ಸಾಮಾನ್ಯ ಕುಟುಂಬದಲ್ಲಿ ಜನಿಸಿ, ತನ್ನ ಸ್ವಪ್ರಯತ್ನದಿಂದಲೇ ಮೇಲೇರಿದ ಒಬ್ಬ ಉದ್ಯಮಿಗೆ ಯಾರೂ ವಾರಸುದಾರರು ಇರಲಿಲ್ಲ. ತಾನು ಕಟ್ಟಿದ ಇಷ್ಟೊಂದು ದೊಡ್ಡ ಸಾಮ್ರಾಜ್ಯವನ್ನು ತನ್ನ ನಂತರ, ಯಾರು ನಿರ್ವಹಣೆ ಮಾಡುತ್ತಾರೆ ಎಂಬ ತಮ್ಮ ಪ್ರಶ್ನೆಗೆ ಉತ್ತರವನ್ನು ಹುಡುಕಲು ಅವರು ಬಯಸಿದರು. ತಮ್ಮ ಈ ಪ್ರಶ್ನೆಗೆ ಸರಿಯಾದ ಉತ್ತರ ದೊರಕದೇ ಹೋದರೆ, ತಾನು ಜೀವನವಿಡೀ ಯಾವುದಕ್ಕಾಗಿ ಕಷ್ಟಪಟ್ಟು ದುಡಿದೆನೋ ಅದಕ್ಕೆ ಇನ್ನು ಯಾವ ಅರ್ಥವೂ ಇರುವುದಿಲ್ಲ ಎಂದು ಅವರು ಅರಿತುಕೊಂಡರು.

ಒಂದು ದಿನ, ತಮ್ಮ ಸಂಸ್ಥೆಯ ಪ್ರಧಾನ ಹುದ್ದೆಯಲ್ಲಿದ್ದ ನೌಕರರನ್ನು ಕರೆದು ಒಂದು ಸಭೆ ನಡೆಸಿದರು. ಪ್ರಧಾನ ನಿರ್ವಾಹಕ ಹುದ್ದೆಗೆ ಅಗತ್ಯ ಅರ್ಹತೆಗಳನ್ನು ಹೊಂದಿದ್ದ 30 ಜನರನ್ನು ಅವರು ಈ ಸಭೆಗೆ ಆಹ್ವಾನಿಸಿದ್ದರು. ಅವರೆಲ್ಲರೂ ಇವರಂತೆಯೇ ಒಂದು ಸಾಮಾನ್ಯ ಕುಟುಂಬದಿಂದ ಬಂದು, ತಮ್ಮ ದುಡಿಮೆಯ ಮೂಲಕವೇ ಈ ಹಂತವನ್ನು ತಲುಪಿದ್ದವರು. ಇವರುಗಳಲ್ಲಿ ಯಾರಾದರೂ ಒಬ್ಬರನ್ನು ಆಯ್ಕೆ ಮಾಡಿ, ಅವರ ಕೈಗೆ ಇಡೀ ಸಂಸ್ಥೆಯ ಜವಾಬ್ದಾರಿಯನ್ನು ನೀಡಬಹುದು ಎಂದು ಅವರು ಯೋಚಿಸಿದ್ದರು.

'ನಿಮ್ಮಲ್ಲಿ ಯಾರೋ ಒಬ್ಬರು ಮುಂದಿನ ವರ್ಷ ಈ ದೊಡ್ಡ ಕಂಪನಿಯ ನಿರ್ವಹಣೆಯನ್ನು ವಹಿಸಿಕೊಳ್ಳಲಿದ್ದೀರಿ. ನಿಮ್ಮಲ್ಲಿ ಯಾರು ಆ ಅರ್ಹತೆಯನ್ನು ಹೊಂದಿದ್ದೀರಿ ಎಂಬುದನ್ನು ತಿಳಿಯುವುದಕ್ಕಾಗಿ ಒಂದು ಸ್ಪರ್ಧೆಯನ್ನು ನಡೆಸುತ್ತೇನೆ. ನಿಮ್ಮ ಕೈಗಳನ್ನು ಮುಂದೆ ಚಾಚಿರಿ...' ಎಂದು ಅವರು ಹೇಳಿದರು. ಪ್ರತಿಯೊಬ್ಬರೂ ತುಂಬ ಸಂತೋಷದಿಂದ ತಮ್ಮ ಮಾಲೀಕ ಹೇಳಿದಂತೆ ಕೈಗಳನ್ನು ಮುಂದೆ ಚಾಚಿದರು. ಪ್ರತಿಯೊಬ್ಬರಿಗೂ ಅವರ ಕೈಗೆ, ಒಂದೊಂದು ಬೀಜವನ್ನು ನೀಡಲಾಯಿತು. 'ಈ ಬೀಜ ತುಂಬ ಶಕ್ತಿಯುತವಾದುದು. ನೀವು ಇದನ್ನು ನಿಮ್ಮ ಮನೆಯ ತೋಟದಲ್ಲೋ, ಹೂತೊಟ್ಟಿಯಲ್ಲೋ ನೆಟ್ಟು ನೀರು ಸುರಿದು, ಗೊಬ್ಬರ ಹಾಕಿ ಚೆನ್ನಾಗಿ ಬೆಳೆಸಬೇಕು. ಮುಂದಿನ ವರ್ಷ ನಿಮ್ಮಲ್ಲಿ ಯಾರು ನೆಟ್ಟ ಬೀಜ ಚೆನ್ನಾಗಿ ನಳನಳಿಸಿ ಸೊಂಪಾಗಿ ಗಿಡವಾಗಿ ಬೆಳೆದಿರುತ್ತದೆ ಎಂದು ಪರಿಶೀಲಿಸುತ್ತೇನೆ. ಪ್ರತಿ ತಿಂಗಳೂ ಆ ಗಿಡದ ಬೆಳವಣಿಗೆಗಾಗಿ ನೀವೇನು ಮಾಡಿದ್ದೀರಿ ಎಂಬ ವಿವರವನ್ನು ನನಗೆ ಬರೆದು ನೀಡಬೇಕು. ಆದರೆ ಒಂದು ನಿಬಂಧನೆ. ಈ ಬೀಜ ಮೊಳೆತು ಚಿಗುರಿ ಗಿಡವಾಗಿ ಬೆಳೆಯುತ್ತಿರುವ ರೀತಿಯನ್ನು ಯಾರೂ ಯಾರೊಂದಿಗೂ ಚರ್ಚಿಸಬಾರದು. ಇದರ ಬಗ್ಗೆ ನನ್ನ ಜೊತೆ ಕೂಡ ಚರ್ಚಿಸಬಾರದು. ಹಾಗೆ ಮಾತನಾಡಿದರೆ ನಿಮ್ಮನ್ನು ಕೆಲಸದಿಂದ ತೆಗೆದು ಹಾಕಲಾಗುವುದು' ಎಂದು ಎಚ್ಚರಿಕೆಯನ್ನೂ ಹೇಳಿದರು.

ಎಲ್ಲರೂ ತಮಗೆ ನೀಡಿದ ಬೀಜವನ್ನು ತೆಗೆದುಕೊಂಡು ಹೊರಟರು. 'ಈ ಒಂದು ಬೀಜದಿಂದ ತಮ್ಮ ಇಡೀ ಜೀವನವೇ ಬದಲಾಗಲಿದೆ' ಎಂಬ ನಂಬಿಕೆಯೊಂದಿಗೆ ಆ ಬೀಜವನ್ನು ನೆಟ್ಟರು. ಅವರ ಕುಟುಂಬದ ಇತರ ಸದಸ್ಯರೂ ಕೂಡ ಬೀಜ ಮೊಳೆತು ಚಿಗುರಿ ಗಿಡವಾಗಿ ಚೆನ್ನಾಗಿ ಬೆಳೆಯಬೇಕು ಎಂಬ ಆಶಯದಿಂದ ಅವರೊಂದಿಗೆ ಸಹಕರಿಸಿದರು.

ಅವರಲ್ಲಿ ಒಬ್ಬ ವ್ಯಕ್ತಿಯ ಕೈಯಲ್ಲಿದ್ದ ಬೀಜ ಮಾತ್ರ ಎಷ್ಟು ನೀರು ಸುರಿದರೂ, ಗೊಬ್ಬರ ಹಾಕಿದರೂ, ಎಷ್ಟೇ ಚೆನ್ನಾಗಿ ಪರಾಮರ್ಶಿಸಿದರೂ ಚಿಗುರಲೇ ಇಲ್ಲ. ಬೀಜ ಚಿಗುರಿ, ಗಿಡವಾಗಿ ಚೆನ್ನಾಗಿ ಬೆಳೆಯಲು ಏನು ಮಾಡಬೇಕು ಎಂದು ಅವನು ಹಲವು ಪುಸ್ತಕಗಳನ್ನು ಓದಿ ನೋಡಿ, ಅದರಲ್ಲಿರುವ ಸೂಚನೆಗಳನ್ನು ಪಾಲಿಸಿದ. ಈತ ತುಂಬಾ ಶೋಕದಲ್ಲಿರುವುದನ್ನು ಗಮನಿಸಿದ ಸಹೋದ್ಯೋಗಿಗಳು ಅವನು ಹೇಳದಿದ್ದರೂ ಕೂಡ ಅವನ ಗಿಡ ಚೆನ್ನಾಗಿ ಬೆಳೆಯುತ್ತಿಲ್ಲ ಎಂಬುದನ್ನು ಅರ್ಥ ಮಾಡಿಕೊಂಡರು. ಆದರೆ ಉಳಿದವರ ಮುಖದಲ್ಲಿದ್ದ ಸಂತೋಷವೇ ಅವರ ಗಿಡಗಳು ಚೆನ್ನಾಗಿ ಬೆಳೆಯುತ್ತಿವೆ ಎಂಬುದನ್ನು ತಿಳಿಸುತ್ತಿದ್ದವು.

'ಪ್ರತಿಯೊಬ್ಬರೂ ಮುಂದಿನ ವರ್ಷ ಆ ಸಂಸ್ಥೆಯ ನಿರ್ವಾಹಕ ಹುದ್ದೆ ತನಗೇ ಸಿಗಲಿದೆ' ಎಂಬ ಭಾವನೆಯಿಂದ ಕೆಲಸ ಮಾಡುತ್ತಿದ್ದುದನ್ನು ಕಂಡು ಇವನ ಮನಸ್ಸು ಸಂಕಟಗೊಂಡಿತು. ತಾನು ಅದೃಷ್ಟ ಹೀನ ಎಂದು ತನ್ನೊಳಗೆ ತಾನೇ ನೊಂದುಕೊಂಡ. 'ಒಂದು ಬೀಜವನ್ನು ನೆಟ್ಟು ಬೆಳೆಸುವುದೂ, ಒಂದು ಸಂಸ್ಥೆಯ ನಿರ್ವಹಣೆಯನ್ನು ಮಾಡುವುದೂ ಎರಡೂ ಒಂದೇ ಬಗೆಯ ಕೆಲಸಗಳೇನು? ಸಂಸ್ಥೆಯ ನಿರ್ವಹಣೆಗೆ ಸಂಬಂಧಿಸಿದಂತೆ ಬೇರೆ ಯಾವುದಾದರೂ ಸ್ಪರ್ಧೆಯನ್ನು ಇಟ್ಟಿದ್ದರೆ ನಾನು ಖಂಡಿತವಾಗಿಯೂ ಅದರಲ್ಲಿ ಜಯಿಸುತ್ತಿದ್ದೆ' ಎಂದು ಅವನು ತನ್ನೊಳಗೇ ಅಂದುಕೊಂಡನೇ ಹೊರತು ತನ್ನ ಮಾಲೀಕನ ಬಗ್ಗೆ ಮಾತ್ರ ತಪ್ಪಾಗಿ ಯೋಚಿಸಲಿಲ್ಲ.

ಹೀಗೇ ದಿನಗಳು ಕಳೆದವು. ಅವನ ಯಾವ ಬಗೆಯ ಪ್ರಯತ್ನಕ್ಕೂ ಸರಿಯಾದ ಪ್ರತಿಫಲ ಸಿಗಲಿಲ್ಲ. ಆದರೂ ಅವನ ತನ್ನ ಪ್ರಯತ್ನವನ್ನು ಮಾತ್ರ ಕೈಬಿಡಲಿಲ್ಲ. ದಿನವೂ ನೀರನ್ನೂ, ಗೊಬ್ಬರವನ್ನೂ ಹಾಕಿ ಆ ಗಿಡವನ್ನು ಪರಾಮರ್ಶನ ಮಾಡುತ್ತಿದ್ದ. ತಾನೇನು ಮಾಡುತ್ತಿದ್ದೇನೆ ಎಂಬುದನ್ನು ದಿನವೂ ಬರೆದು ದಾಖಲಿಸುತ್ತಿದ್ದ.

ಹನ್ನೊಂದನೇ ತಿಂಗಳು ಆ ಗಿಡ ನಿಧಾನವಾಗಿ ಮೊಳಕೆಯೊಡೆಯತೊಡಗಿತು! 'ಇಷ್ಟು ಹೊತ್ತಿಗೆ ಉಳಿದವರ ಗಿಡಗಳು ಚೆನ್ನಾಗಿ ಬೆಳೆದು ಹೂಬಿಡಲು ಆರಂಭಿಸಿರಬಹುದು. ಈಗ ಇದು ಮೊಳೆತು ಚಿಗುರಿದರೆ ಏನು ಪ್ರಯೋಜನ?' ಎಂದು ಅವನೊಳಗೆ ಒಂದು ಬೇಸರ ಮೂಡಿತು. ಆದರೂ ಅವನು ಆ ಗಿಡವನ್ನು ಪರಾಮರ್ಶಿಸುವುದನ್ನು ಮಾತ್ರ ಬಿಡಲೇ ಇಲ್ಲ.

ಕಡೆಗೆ ಒಂದು ವರ್ಷ ಕಳೆಯಿತು. ಎಲ್ಲರೂ ತಾವು ಹೂತೊಟ್ಟಿಯಲ್ಲಿ ಬೆಳೆಸಿದ್ದ ತಮ್ಮ ತಮ್ಮ ಗಿಡಗಳನ್ನು ಮಾಲೀಕನಿಗೆ ತೋರಿಸಲು ತೆಗೆದು–ಕೊಂಡು ಬಂದರು. ಒಂದು ತಿಂಗಳ ಹಿಂದಷ್ಟೇ ಚಿಗುರಿದ ಪುಟ್ಟ ಗಿಡವನ್ನು ಮಾಲೀಕರಿಗೆ ತೋರಿಸಲು ಅವನಿಗೆ ತುಂಬಾ ಸಂಕೋಚವಾಯಿತು. ಆದರೂ ಒಂದು ವರ್ಷ, ತಾನು ಅವಿರತ ಪ್ರಯತ್ನ ಮಾಡಿದುದನ್ನು ಅವರಿಗೆ ವಿವರಿಸಿ, ತಾನು ಬರೆದಿಟ್ಟಿದ್ದ ಅದರ ಬಗೆಗಿನ ವಿವರಗಳನ್ನೂ

ಅವರಿಗೆ ಒಪ್ಪಿಸಿದ. ಉಳಿದವರಿಗೆ ಇವನನ್ನು ನೋಡಿ ನಗು ಬಂತು. 'ಇವನನ್ನು ಹೊರತು ಪಡಿಸಿ ಉಳಿದ ನಾವೆಲ್ಲರೂ ಗಿಡಗಳನ್ನು ಎಷ್ಟು ಚೆನ್ನಾಗಿ ಬೆಳೆಸಿದ್ದೇವೆ. ನಮ್ಮಲ್ಲಿ ಯಾರಾದರೂ ಒಬ್ಬರನ್ನು ಈ ಸಂಸ್ಥೆಯ ಮುಂದಿನ ಪ್ರಧಾನ ನಿರ್ವಾಹಕರಾಗಿ ಆಯ್ಕೆ ಮಾಡುವುದು ನಮ್ಮ ಮಾಲೀಕರಿಗೆ ತುಂಬಾ ಕಷ್ಟವಾಗಿರುತ್ತದೆ. ಯಾವುದನ್ನೇ ಆಗಲಿ ಶೀಘ್ರವಾಗಿ ನಿರ್ಣಯ ತೆಗೆದುಕೊಳ್ಳುವ ನಮ್ಮ ಮಾಲೀಕರು ಇದಕ್ಕೆ ಮಾತ್ರ ಕೆಲವಾರು ದಿನಗಳನ್ನೇ ತೆಗೆದುಕೊಳ್ಳಬಹುದು' ಎಂದು ಅವರು ತಮ್ಮೊಳಗೇ ಮಾತನಾಡಿಕೊಂಡರು.

ಎಲ್ಲಾ ಗಿಡಗಳನ್ನೂ ಪರಿಶೀಲಿಸಿದ ಸಂಸ್ಥೆಯ ಮಾಲೀಕ ಅವರೆಲ್ಲರನ್ನೂ ತನ್ನ ಕೊಠಡಿಗೆ ಆಹ್ವಾನಿಸಿದ. ಹೆಚ್ಚು ಸಮಯವಾಗಲಿಲ್ಲ. ಹತ್ತೇ ನಿಮಿಷಗಳಲ್ಲಿ ಸಭೆ ಮುಗಿಯಿತು. '11 ತಿಂಗಳವರೆಗೂ ಮೊಳಕೆಯೊಡೆಯದಿದ್ದ ಬೀಜವನ್ನು ಪರಾಮರ್ಶಿಸಿ, ಅದನ್ನು ಚಿಕ್ಕ ಗಿಡವಾಗಿ ಬೆಳೆಸಿ ತೆಗೆದುಕೊಂಡು ಬಂದಿರುವ ವ್ಯಕ್ತಿಯೇ ಈ ಸಂಸ್ಥೆಯ ಮುಂದಿನ ಪ್ರಧಾನ ನಿರ್ವಾಹಕ' ಎಂದು ಮಾಲೀಕ ಘೋಷಿಸಿದ! ಮರುದಿನವೇ ಪದವಿ ಪ್ರದಾನ ಸಮಾರಂಭ ಎಂಬುದೂ ನಿರ್ಣಯವಾಯಿತು. ಅದಕ್ಕಿಂತಲೂ ಹೆಚ್ಚಾಗಿ, ಎಲ್ಲರಿಗೂ ತುಂಬಾ ಆಶ್ಚರ್ಯವಾದುದೆಂದರೆ, ಉಳಿದ 29 ಜನರನ್ನೂ ಕೆಲಸದಿಂದ ತೆಗೆದುಹಾಕುವುದಾಗಿ ಹೇಳಿದ್ದು!

'ಗಿಡವನ್ನು ಇಷ್ಟೊಂದು ಚೆನ್ನಾಗಿ ಬೆಳೆಸಿ ತೆಗೆದುಕೊಂಡು ಬಂದಿರುವ ನಮಗೇಕೆ ಶಿಕ್ಷೆ ನೀಡುತ್ತೀರಿ?' ಎಂದು ಅವರೆಲ್ಲರೂ ಕೇಳಿದರು. ಅದಕ್ಕೆ ಸಂಸ್ಥೆಯ ಮಾಲೀಕ, 'ಯಾವುದೇ ಬಗೆಯ ಸವಾಲು ಎದುರಾದರೂ ಅದನ್ನು ಎದುರಿಸಿ, ಸಂಸ್ಥೆಯನ್ನು ಯಶಸ್ಸಿನ ಹಾದಿಯಲ್ಲಿ ತೆಗೆದು–ಕೊಂಡು ಹೋಗುವ ನಾಯಕ ಬೇಕೆಂದು ನಾನು ಹುಡುಕಾಡಿದೆ. ಅದಕ್ಕಾಗಿಯೇ ಒಂದು ವರ್ಷ ಸಮಯವನ್ನು ನಾನು ತೆಗೆದುಕೊಂಡೆ. ಸಾವಿರಾರು ಕಾರ್ಮಿಕರ ದುಡಿಮೆಯಲ್ಲಿ, ಗ್ರಾಹಕರ ನಂಬಿಕೆಯ ಅಡಿಯಲ್ಲಿ ಗಂಭೀರವಾಗಿ ಬೆಳೆದು ನಿಂತಿರುವ ಈ ಸಂಸ್ಥೆಯನ್ನು ಪ್ರಾಮಾಣಿಕವಾಗಿಯೂ, ನ್ಯಾಯಯುತವಾಗಿಯೂ ಮುನ್ನಡೆಸುವ ಒಬ್ಬ ವ್ಯಕ್ತಿಯನ್ನೇ ನಾನೀಗ ಆಯ್ಕೆ ಮಾಡಿದ್ದೇನೆ.

ಹೇಗೆ ಎಂದು ಕೇಳುತ್ತಿದ್ದೀರಾ? ನಾನು 30 ಜನರ ಕೈಗೂ ಕೊಟ್ಟದ್ದು, 11 ತಿಂಗಳ ನಂತರ ಮೊಳೆತು ಚಿಗುರೊಡೆಯುವ, ಅದೂ 11 ತಿಂಗಳ ಕಾಲವೂ ಅದನ್ನು ಚೆನ್ನಾಗಿ ಸರಿಯಾಗಿ ಪರಾಮರ್ಶಿಸುವ ಕೆಲಸ ಮಾಡಿದರೆ ಮಾತ್ರವೇ ಚಿಗುರುವಂತಹ ಗಿಡದ ಬೀಜ. 30 ಜನರಲ್ಲಿ ಒಬ್ಬ ವ್ಯಕ್ತಿ ಮಾತ್ರ ಅದನ್ನು ನಿರಂತರವಾಗಿ ಎಡೆಬಿಡದೆ ಪರಾಮರ್ಶಿಸಿ, ಅದು ಚಿಗುರಲು ಅಗತ್ಯವಾದ ಕೆಲಸವನ್ನು ವರ್ಷವಿಡೀ ಮಾಡಿದ್ದಾರೆ. ಉಳಿದವರು ನಾನು ನೀಡಿದ ಬೀಜದ ಹಾಗೆಯೇ ಕಾಣುವ ಶಕ್ತಿಯುತವಾದ ಬೇರೊಂದು ಬೀಜವನ್ನು ತೆಗೆದುಕೊಂಡು ಬಂದು, ಬಿತ್ತಿ ಗಿಡ ಬೆಳೆಸಿದ್ದಾರೆ. ಅಧಿಕಾರ ಕೈಗೆ ಸಿಕ್ಕುವ ಮುನ್ನವೇ ಹೀಗೆ ಪ್ರಾಮಾಣಿಕತೆಯನ್ನೂ ನ್ಯಾಯವನ್ನೂ ಕೈಬಿಟ್ಟು ನಡೆದುಕೊಳ್ಳುವವರು, ಸಂಸ್ಥೆಯು ಇಕ್ಕಟ್ಟಾದ ಪರಿಸ್ಥಿತಿಯೊಳಗೆ ಸಿಲುಕಿಕೊಂಡ ಸಮಯದಲ್ಲಿ ತುಂಬಾ ಸ್ವಾರ್ಥದಿಂದ ನಡೆದುಕೊಳ್ಳುತ್ತಾರೆ.

ಆದರೆ ಇವರು ಎಂತಹ ಸಂದರ್ಭದಲ್ಲೂ ತಮ್ಮ ಪ್ರಯತ್ನವನ್ನು ಕೈಬಿಡದೆ, ಹಲವಾರು ಸಾಧ್ಯತೆಗಳನ್ನು ಸಂಶೋಧಿಸುತ್ತಾ, ಬೀಜ ಮೊಳೆಯುವಂತೆ ನೋಡಿಕೊಂಡಿದ್ದಾರೆ. ಇದೇ ರೀತಿ ಪ್ರಾವಾಣಿಕವಾಗಿಯೂ, ಸಮರ್ಥವಾಗಿಯೂ ನಮ್ಮ ಸಂಸ್ಥೆಯನ್ನು ಮುನ್ನಡೆಸುವಂತಹ ಒಬ್ಬ ವ್ಯಕ್ತಿಯನ್ನೇ ನಾನು ಹುಡುಕಾಡಿದ್ದು' ಎಂದು ಅವರು ಹೇಳಿದರು.

ಈ ಕಥೆಯನ್ನು ಓದಿದಾಗ, ಇದರಲ್ಲಿರುವ, 'ತನ್ನ ನಂತರ ಯಾರು?' ಎನ್ನುವ ಪ್ರಶ್ನೆಗೆ ಸಂಬಂಧಿಸಿದ ಉತ್ತರಾದ ಹುಡುಕಾಟದ ರೀತಿಯೇ ಹೊಸ ಬಗೆಯದಾಗಿದೆ ಎನ್ನಿಸಿತು. ಮನುಷ್ಯ ಜೀವನ ಒಗಟುಗಳಿಂದ ಕೂಡಿದುದು. ಹುಡುಕಾಟವೇ ಆ ಒಗಟುಗಳನ್ನು ಒಂದೊಂದಾಗಿ ಬಿಡಿಸುತ್ತದೆ. ಹುಡುಕಾಟವೇ ಇಲ್ಲದವರು ಮಡುಗಟ್ಟಿ ಹೋಗುತ್ತಾರೆ. ಹುಡುಕಾಟದ ಗುಣ ಇರುವವರು ಹೊಸ ಹೊಸ ದರ್ಶನಗಳನ್ನು ಯಾವಾಗಲೂ ಕಾಣುತ್ತಾರೆ. ಹೊಸ ಹೊಸ ಅನುಭವಗಳನ್ನು ಹುಡುಕಾಡೋಣ. ಹೊಸ ಹೊಸ ದರ್ಶನಗಳನ್ನು ದರ್ಶಿಸೋಣ.



**ಗುರುಕೃಪೆ**

**ಬಾಳ್ಗೆ ಭೂಮಂಡಲ -ಬಾಳ್ಗೆ ಸಮೃದ್ಧಿಯೊಂದಿಗೆ!**

**ಕೆ.ಆರ್. ನಾಗರಾಜನ್**

**ಸಂಸ್ಥಾಪಕರು - ರಾಮ್‌ರಾಜ್ ಕಾಟನ್**

ಒಂದು ಸಣಕಲು ನಾಯಿಯನ್ನು ಒಂದು ತೋಳ ಕೊಲ್ಲಲು ನೋಡಿತು. ನಾಯಿ ಜೀವ ಉಳಿಸಿಕೊಳ್ಳುವುದಕ್ಕಾಗಿ ಅಲ್ಲಿಂದ ಓಡಿ, ಕಾಡಿನಲ್ಲಿ ಧ್ಯಾನ ನಿರತನಾಗಿದ್ದ ಒಬ್ಬ ಋಷಿಯ ಬಳಿ ಹೋಗಿ ರಕ್ಷಣೆ ಬೇಡಿತು. ಋಷಿ ತನ್ನ ತಪಃಶಕ್ತಿಯಿಂದ ಅದನ್ನೂ ತೋಳವನ್ನಾಗಿ ಬದಲಾಯಿಸಿ ಬಿಟ್ಟ! ಈಗ ಶಕ್ತಿಶಾಲಿ ತೋಳವಾಗಿದ್ದ ಅದು, ತನ್ನನ್ನು ಕೊಲ್ಲಲು ಬಂದ ತೋಳವನ್ನು ಬೆದರಿಸಿ ಅಲ್ಲಿಂದ ಓಡಿಸಿ ಬಿಟ್ಟಿತು. ನಂತರ ಅದು ಋಷಿಯ ಬಳಿ ತುಂಬಾ ವಿನಯದಿಂದ ಕುಳಿತುಕೊಂಡಿತು.

ಸ್ವಲ್ಪ ಸಮಯದ ನಂತರ ಒಂದು ಆನೆ ಆ ದಾರಿಯಲ್ಲಿ ಗಂಭೀರವಾಗಿ ನಡೆದುಕೊಂಡು ಬಂದಿತು. ತೋಳದ ರೂಪದಲ್ಲಿದ್ದ ನಾಯಿಯನ್ನು ನೋಡಿದ ಕೂಡಲೇ ಅದನ್ನು ತುಳಿಯಲು ಹತ್ತಿರ ಓಡಿ ಬಂದಿತು. ಕೂಡಲೇ ಋಷಿ ಇದನ್ನೂ ಒಂದು ಆನೆಯನ್ನಾಗಿ ಬದಲಾಯಿಸಿದ. ಅದನ್ನು ನೋಡಿದ ಆನೆ ಗೊಂದಲಗೊಂಡು, ಬಂದ ದಾರಿಯಲ್ಲೇ ಹಿಂದಕ್ಕೆ ಓಡಿ ಹೋಯಿತು. ಅದರ ನಂತರ ಒಂದು ಚಿರತೆ ಆ ದಾರಿಯಲ್ಲಿ ಬಂದಿತು. ಅದು ಆನೆಯ ಮೇಲೆ ಹರಿಹಾಯಲು ನೋಡಿದಾಗ ಅದು ಮತ್ತೆ ಋಷಿಯ ರಕ್ಷಣೆ ಕೋರಿತು. ಈಗ ಋಷಿ ಇದರ ಮೇಲೆ ತೀರ್ಥ ಪ್ರೋಕ್ಷಿಸಿ ಇದನ್ನೂ ಚಿರತೆಯನ್ನಾಗಿ ಬದಲಾಯಿಸಿದ. ಅದನ್ನು ನೋಡಿದ ಚಿರತೆ, 'ಇದು ನನ್ನಂತೆಯೇ ಇದೆಯಲ್ಲಾ!' ಎಂದು ಯೋಚಿಸಿ ಅಲ್ಲಿಂದ ಹೊರಟು ಹೋಯಿತು. ಚಿರತೆಯನ್ನು ಕೊಲ್ಲಲು ಒಂದು ಹುಲಿ ನೋಡಿತು. ಇದನ್ನೂ ಋಷಿ ಹುಲಿಯನ್ನಾಗಿ ಬದಲಾಯಿಸಿದ. ಹುಲಿಯನ್ನು ಕೊಲ್ಲಲು ಸಿಂಹ ಬಂದಿತು. ಋಷಿ ಈಗ ಆ ನಾಯಿಯನ್ನು ಸಿಂಹವಾಗಿಸಿ ಬಿಟ್ಟ.

# ಯಾವುದನ್ನು ನೀವು ಹುಡುಕುತ್ತಿದ್ದೀರಿ?



ಸಿಂಹವಾಗಿ ಬದಲಾದ ಆ ಸೊಣಕಲು ನಾಯಿಗೆ ಈಗ ಒಂದು ವಿಪರೀತವಾದ ಯೋಚನೆ ಮೂಡಿತು. 'ಇನ್ನು ಮೇಲೆ ನಾನು ಸಿಂಹವಾಗಿಯೇ ಇರಬೇಕು. ಒಂದು ವೇಳೆ ಈ ಋಷಿ ನನ್ನನ್ನು ಮತ್ತೆ ನಾಯಿಯನ್ನಾಗಿ ಮಾಡಿ ಬಿಟ್ಟರೆ, ನಾನು ಪಡಬಾರದ ಪಾಡು ಪಡಬೇಕು. ಆದುದರಿಂದ ಈತನನ್ನೇ ಕೊಂದು ಬಿಟ್ಟರೆ, ನಾನು ಸಿಂಹವಾಗಿಯೇ ಇದ್ದು ಬಿಡಬಹುದು' ಎಂದು ಯೋಚಿಸಿ ಅವನನ್ನೇ ಕೊಲ್ಲಲು ಅದು ನೋಡಿತು. ಇದನ್ನು ಕೂಡಲೇ ತಿಳಿದು ಕೊಂಡ ಋಷಿ, ಆ ಕ್ಷಣವೇ ಅದರ ಮೇಲೆ ತೀರ್ಥ ಪ್ರೋಕ್ಷಿಸಿ, 'ಹೊರಟು ಹೋಗು ನಾಯೇ!' ಎಂದು ಅದನ್ನು ಓಡಿಸಿಬಿಟ್ಟ. ಈಗ ಅದು ಮತ್ತೆ ಸೊಣಕಲು ನಾಯಿಯಾಗಿ ಬದಲಾಗಿ ಅಳುತ್ತಾ ಅಲ್ಲಿಂದ ಹೊರಟು ಹೋಯಿತು.

ನಾಯಿಯ ಹುಡುಕಾಟದ ಚಿಂತನೆ ಅಡ್ಡಹಾದಿಯಲ್ಲಿದ್ದುದರಿಂದ ಅದು ಮೊದಲಿದ್ದ ಸ್ಥಳಕ್ಕೇ ಮತ್ತೆ ಬಂದು ನಿಂತುಕೊಂಡಿತು. 'ಜೀವನದಲ್ಲಿ ಯಾವುದನ್ನು ನಾವು ಹುಡುಕಾಡುತ್ತಿದ್ದೇವೆ' ಎಂಬ ಪ್ರಶ್ನೆಗೆ ಉತ್ತರ ತಿಳಿದಿರಬೇಕು. ನಿರಂತರ ಹುಡುಕಾಟವೇ ಬದುಕು. ಬಾಲ್ಯದಲ್ಲಿ ಜೀವನದ ಬಗೆಗಿನ ಹುಡುಕಾಟದಿಂದ ಆರಂಭಿಸಿ, ಶಿಕ್ಷಣ, ಉದ್ಯೋಗ, ಹಣ, ಮದುವೆ, ಮನೆ, ಮಕ್ಕಳು, ಅವರ ಅವಶ್ಯಕತೆಗಳು... ಇತ್ಯಾದಿಗಳ ಹುಡುಕಾಟ ನಡೆಸಿ, ವಿಶ್ರಾಂತಿ ತೆಗೆದುಕೊಳ್ಳುವ ವಯಸ್ಸಿನಲ್ಲಿ 'ಈಗ ನಾವಿನ್ನೇನು ಹುಡುಕಾಡಬೇಕಾಗಿದೆ?' ಎಂದು ನಿರಾಸಕ್ತಿ ಮೂಡುತ್ತದೆ.



ಪ್ರತಿಯೊಂದು ಸಂದರ್ಭದಲ್ಲೂ ಸನ್ನಿವೇಶದಲ್ಲೂ ಸಮಯದಲ್ಲೂ ನಮ್ಮ ಹುಡುಕಾಟ ಬದಲಾಗುತ್ತಲೇ ಇರುತ್ತದೆ. ವಸ್ತುಗಳನ್ನೂ, ಅನುಕೂಲಗಳನ್ನೂ ಹುಡುಕಾಡುವಾಗ ಅವು ನಮಗೆ ಸಂತೃಪ್ತಿಯನ್ನು ನೀಡಲಾರವು. ಒಂದು ದೊರಕಿದ ಕೂಡಲೇ, 'ಅದಕ್ಕಿಂತ ದೊಡ್ಡದಾಗಿ ಇನ್ನೊಂದು ಬೇಕು' ಎಂದು ನಮ್ಮ ಮನಸ್ಸು ಯೋಚಿಸತೊಡಗುತ್ತದೆ. ಆ ಭಾವನೆ ಬಂದರೆ ತೃಪ್ತಿ ಇಲ್ಲದಾಗಿ ಹೋಗುತ್ತದೆ.

ಸಾವಿರಾರು ವರ್ಷಗಳ ಮುನ್ನ ಗುಹೆಗಳಲ್ಲಿ ವಾಸಿಸುತ್ತಿದ್ದ ನಮ್ಮ ಹಿರಿಯರು ಇಂತಹವುಗಳ ಹುಡುಕಾಟದಲ್ಲೇನೂ ತೊಡಗಿರಲಿಲ್ಲ. ನಾಗರಿಕತೆಯೊಳಗೆ

ಇನ್ನೂ ಕಾಲಿಡದಿದ್ದ ಅವರು ಹುಡುಕಾಡಿದ್ದು ಕೇವಲ ನೆಮ್ಮದಿಯನ್ನು ಮಾತ್ರವೇ! 'ಯಾವ ಸಮಯದಲ್ಲಿ ಯಾವ ಪ್ರಾಣಿ ನಮ್ಮನ್ನು ಹೊಡೆದು ಕೊಂದು ಬಿಡಬಹುದೋ!?' ಎಂಬ ಭಯದಲ್ಲಿ ಗುಹೆಗಳಲ್ಲೂ, ಮರಗಳಲ್ಲೂ ಮರೆಯಾಗಿ ಬದುಕುತ್ತಿದ್ದ ಅವರು, ಅಂತಹ ಭಯವಿಲ್ಲದ ನೆಮ್ಮದಿಯಾದ ಜೀವನವನ್ನು ಮಾತ್ರವೇ ಹುಡುಕಾಡಿದರು. ಕಲ್ಲುಗಳಿಂದ ಆಯುಧಗಳನ್ನು ಮಾಡುವುದನ್ನು ಕಲಿತುಕೊಂಡರು. ನಂತರ ಲೋಹಗಳನ್ನು ಬಳಸುವುದನ್ನು ಕಲಿತುಕೊಂಡರು. ಪ್ರಾಣಿಗಳು ತಮಗಾಗಿ ಕೆಲಸ ಮಾಡುವುದನ್ನು ರೂಢಿ ಮಾಡಿಸಿದರು. ಕಾಡನ್ನು ಕಡಿದು ಹೊಲವನ್ನಾಗಿ ಮಾಡಿದರು. ಬೇಸಾಯ ಮಾಡಲು ಅಭ್ಯಾಸ ಮಾಡಿಕೊಂಡರು. ಮನೆಗಳನ್ನು ಕಟ್ಟುವುದನ್ನು ಕಲಿತುಕೊಂಡರು. ಹೀಗೆ ಹಂತಹಂತವಾಗಿ ನಾಗರಿಕ ಜೀವನವನ್ನು ರೂಢಿ ಮಾಡಿಕೊಂಡರು. ನೆಮ್ಮದಿಯ ಜೀವನದ ಹುಡುಕಾಟವೇ ಮನುಷ್ಯ ಸಂಕುಲವನ್ನು ನಾಗರಿಕರನ್ನಾಗಿಸಿದ್ದು.

ಈಗ ನೆಮ್ಮದಿಯಾದ ಜೀವನವನ್ನೂ ದಾಟಿ, ಹಲವು ಬಗೆಯ ಅನುಕೂಲಗಳ ಹುಡುಕಾಟವೇ ಜೀವನವನ್ನು ಇನ್ನಷ್ಟು ಗೋಜಲುಗೊಳಿಸುತ್ತಿದೆ. ಸಂತೋಷ, ಶಾಂತಿ, ತೃಪ್ತಿ ಇತ್ಯಾದಿಗಳನ್ನು ಹುಡುಕಾಡುವವರು ನೆಮ್ಮದಿಯ ಜೀವನವನ್ನು ನಡೆಸುತ್ತಾರೆ. ಉಳಿದವರಿಗೆ ಯಾವಾಗಲೂ ಇಂತಹ ಸಂತೃಪ್ತಿ ದೊರಕುವುದೇ ಇಲ್ಲ.

ಹುಡುಕಾಟವೇ ಮನುಷ್ಯನಿಗೆ ಹಲವು ಬಗೆಯ ಅನುಕೂಲಗಳನ್ನು ತಂದುಕೊಟ್ಟದ್ದು. ಎತ್ತಿನ ಗಾಡಿಯ ವೇಗ ಸಾಲದು ಎಂದು ಯೋಚಿಸಿದ್ದರ ಫಲವೇ ನೀರಾವಿ ಎಂಜಿನ್ ಅನ್ನು ಕಂಡು ಹಿಡಿದದ್ದು. ಇದರಿಂದಾಗಿ ರೈಲು, ಬಸ್ಸುಗಳು ಬಂದವು. ಕಡೆಯಲ್ಲಿ ವಿಮಾನವೂ ಕೂಡ ಬಂದುಬಿಟ್ಟಿತು.

ನಮ್ಮ ಹಿಂದಿನ ಹಲವು ತಲೆಮಾರಿನವರು ಕೈಗಳ ಮೂಲಕವೇ ಮಾಡಿದ ಹಲವು ಕೆಲಸಗಳನ್ನು ಮಾಡಲು ಈಗ ಯಂತ್ರಗಳು ಬಂದು ಬಿಟ್ಟಿವೆ. ವಿಜ್ಞಾನಿಗಳ ಹುಡುಕಾಟದ ಫಲವಾಗಿಯೇ ಇಂತಹ ಹಲವು ಯಂತ್ರಗಳು ನಮಗೆ ದೊರೆತದ್ದು. ಅವರಿಗೆ ಅದು ಅಗತ್ಯ, ಹೌದು. ಆದರೆ, ಸಾಮಾನ್ಯ ಮನುಷ್ಯರಿಗೆ ಇಂತಹ ಅಂತ್ಯವೇ ಇಲ್ಲದ ಹುಡುಕಾಟಗಳ ಅಗತ್ಯವೇನೂ ಇರುವುದಿಲ್ಲ.

ನಾವು ಯಾವುದನ್ನು ಹುಡುಕಾಡುತ್ತಿದ್ದೇವೆ ಎಂಬುದು ಕೂಡ ತಿಳಿಯದೆ ಇರುವವರು ಯಾವುದನ್ನೂ ಹುಡುಕಿ ಕಂಡುಕೊಳ್ಳುವುದಿಲ್ಲ. 'ನಾವು ಯಾರು? ನಾವೇನು ಮಾಡುತ್ತಿದ್ದೇವೆ? ಅದರ ಪರಿಣಾಮಗಳೇನು...? ಇಂತಹ ಹುಡುಕಾಟ ಪ್ರತಿಯೊಬ್ಬರಿಗೂ ಇರಬೇಕು' ಎನ್ನುತ್ತಾನೆ ತತ್ವಜ್ಞಾನಿ ಸಾಕ್ರೆಟೀಸ್. ಜೀವನದಲ್ಲಿ ಯಾವುದು ನಮಗೆ ಸವಾಲಾಗಿದೆ? ಯಾವುದು ನಮ್ಮನ್ನು ಬಲಹೀನರನ್ನಾಗಿ ಮಾಡುತ್ತದೆ? ಯಾವುದು ನಮ್ಮನ್ನು ಶಕ್ತಿವಂತರನ್ನಾಗಿಸುತ್ತದೆ? ಹೀಗೆ ಜೀವನವನ್ನು ಸ್ವಪರಿಶೋಧನೆ ಮಾಡಿಕೊಳ್ಳಬೇಕು. ಇದು ಜೀವನವನ್ನು ಅರ್ಥಪೂರ್ಣವನ್ನಾಗಿ ಬದಲಾಯಿಸುತ್ತದೆ.



ಆಪಲ್ ಸಂಸ್ಥೆಯ ಸಂಸ್ಥಾಪಕರಾದ ಸ್ಟೀವ್ ಜಾಬ್ಸ್ ಆ ಕುರಿತು ಹೇಳುವುದು ಹೀಗೆ: 'ಕಳೆದ ದಿನಗಳಲ್ಲಿ ನಾವು ಹೇಗಿದ್ದೆವು ಎಂಬುದನ್ನು ಪುನರಾವಲೋಕನ ಮಾಡಿಕೊಳ್ಳುವ ಮೂಲಕವೇ ನಮ್ಮ ಭವಿಷ್ಯವನ್ನು ಉತ್ತಮವಾದುದನ್ನಾಗಿ ರೂಪಿಸಿಕೊಳ್ಳಲು ಸಾಧ್ಯ. ಜೀವನ ಎನ್ನುವ ಮಾಯಾ ಒಗಟಿಗೆ ನಾವು ಉತ್ತರ ಹುಡುಕಾಡಬೇಕಾಗಿದೆ. ನಮ್ಮ ಆಸಕ್ತಿ, ಪ್ರಯತ್ನ, ಸಾಮರ್ಥ್ಯ ಇತ್ಯಾದಿಗಳಿಂದ ಅವುಗಳನ್ನು ಸಾಧಿಸಬಹುದು' ಎನ್ನುತ್ತಾರೆ ಅವರು.

ಮನುಷ್ಯರ ಮೂಲಭೂತ ಅಗತ್ಯಗಳೆಂದರೆ ಆಹಾರ, ವಸತಿ ಹಾಗೂ ಉಡುಗೆ. ಜೊತೆಗೆ ಜೀವನದ ಭದ್ರತೆಗೆ ಒಂದು ಕೆಲಸ ಅಥವಾ ಉದ್ಯಮ; ವಾಸಿಸಲು ಒಂದು ಮನೆ. ಸಾಮಾಜಿಕ ರಕ್ಷಣೆಗಾಗಿ ಬಂಧುಗಳೂ ಗೆಳೆಯರೂ ಅವಶ್ಯಕ. ಜೊತೆಗೆ ನಮ್ಮ ಮೇಲೆ ಪ್ರೀತಿ ತೋರಿಸುವ ಜೀವನ ಸಂಗಾತಿಯೂ, ಕುಟುಂಬವೂ ಅಗತ್ಯ. ಮನುಷ್ಯ ಒಬ್ಬ ಸಮಾಜ ಜೀವಿ. ಇವೆಲ್ಲವೂ ಇರುವುದರಿಂದಲೇ ಅವನು ಕಾಡಿನಲ್ಲಿರುವ ಬೇಟೆಯಾಡುವ ಪ್ರಾಣಿಯಂತೆ ಜೀವಿಸುತ್ತಿಲ್ಲ. ಇದೆಲ್ಲವನ್ನೂ ಮೀರಿ ಸಾಮಾಜಿಕ ಅಂತಸ್ತು ದೊರಕಲು ಅವನಿಗೆ ಕೆಲವು ಗೌರವಗಳೂ ಅಗತ್ಯ. ವೈಯಕ್ತಿಕ ಜೀವನದಲ್ಲಿ ತೃಪ್ತಿಯಿಂದಿರಲು ಶಾಂತಿ, ತಿಳಿವಳಿಕೆ, ಪ್ರೀತಿ...ಗಳೂ ಅಗತ್ಯ. ಒಬ್ಬ ವ್ಯಕ್ತಿಯ ಹುಡುಕಾಟದಲ್ಲಿ ಇವೆಲ್ಲವೂ ದೊರೆತುಬಿಟ್ಟರೆ ಅದುವೇ ಸಂತೃಪ್ತಿಯ ಜೀವನ. ●



# ಸಂಗಾತಿಯ ಹುಡುಕಾಟ!



ಪ್ರತಿಯೊಬ್ಬ ಮನುಷ್ಯರೂ ಹುಡುಕಾಡುವುದು ತಮಗೆ ಆಪ್ತವಾದ ಒಬ್ಬ ಸಂಗಾತಿಯನ್ನೇ! 'ಇವರ ಜೊತೆಯಿರುವುದು ನಮಗೆ ಸುರಕ್ಷಿತ, ಇವರ ಜೊತೆ ಮಾತನಾಡುವುದು ನಮಗೆ ಸಂತೋಷದಾಯಕ, ಇವರು ಪಕ್ಕದಲ್ಲಿದ್ದರೆ ನಮಗೆ ನೆಮ್ಮದಿಯಾಗಿರುತ್ತದೆ' ಎಂಬಂತಹ ಭಾವನೆಯನ್ನು ಮೂಡಿಸುವ ಒಬ್ಬ ಸಂಗಾತಿಯನ್ನೇ ಎಲ್ಲರೂ ನಿರೀಕ್ಷಿಸುವುದು. ಅವರು ನಿಮ್ಮ ಜೀವನ ಸಂಗಾತಿ, ಗೆಳೆಯರು, ಆತ್ಮೀಯ ಸಂಗಾತಿಗಳು, ಕುಟುಂಬದ ಸದಸ್ಯರು ಹೀಗೆ ಯಾರು ಬೇಕಾದರೂ ಆಗಿರಬಹುದು.

ಎಲ್ಲರೂ ಯಶಸ್ಸಿಗಾಗಿ ಹಂಬಲಿಸುತ್ತಾರೆ, ಹಣವನ್ನು ಬಯಸುತ್ತಾರೆ. ಆದರೆ, ಅಂತಹ ವಿಷಯಗಳು ನೀಡದ ಒಂದು ಬಗೆಯ ಮಾನಸಿಕ ನೆಮ್ಮದಿಯನ್ನು ಒಬ್ಬ ಆಪ್ತ ಸಂಗಾತಿ ನೀಡಬಹುದು. ಸಾಕಷ್ಟು ಹಣ ಸಂಪಾದಿಸಿದ ವ್ಯಕ್ತಿಗಳು ಕೂಡ, ಅದನ್ನು ಬಿಟ್ಟು ನೆಮ್ಮದಿಯನ್ನು ಹುಡುಕಾಡಿಕೊಂಡು ಪ್ರಯಾಣ ಮಾಡುವುದನ್ನು ನಾವು ನೋಡುತ್ತೇವೆ. ಒಳ್ಳೆಯ ಸಂಗಾತಿ ದೊರೆತಿದ್ದರೆ ಅವರು ಹೀಗೆ ಮಾಡುತ್ತಿರಲಿಲ್ಲ.

# ಅರ್ಥವನ್ನು ಹುಡುಕುತ್ತಾರೆ!



ನಾನು ಈ ಜೀವನವನ್ನು ಏಕೆ ಜೀವಿಸುತ್ತಿದ್ದೇನೆ? ನಾನು ಜೀವನದಲ್ಲಿ ಏನನ್ನು ಹುಡುಕಲು ಬಯಸುತ್ತೇನೆ' ಎಂದು ಹಲವರು ಜೀವನದ ಅರ್ಥವನ್ನು ಹುಡುಕಾಡುತ್ತಾರೆ. ಸಾಮಾನ್ಯವಾದ ಒಂದು ಜೀವನ ಶೈಲಿಯಲ್ಲಿ ಯಾವುದೇ ಸ್ವಾರಸ್ಯವೂ ಇರುವುದಿಲ್ಲ. ಪ್ರೀತಿಯನ್ನು ತೋರಿಸುವುದು, ಇತರರಿಂದ ಪ್ರೀತಿಸಲ್ಪಡುವುದು, ಯಾವುದಾದರೂ ಒಂದನ್ನು ಸಾಧಿಸಲು ಬಯಸುವುದು, ಒಂದು ಸಂಗತಿಯನ್ನು ಬದಲಾಯಿಸಲು ನೋಡುವುದು... ಹೀಗೆ ಪ್ರತಿಯೊಬ್ಬರ ಜೀವನಕ್ಕೂ ಒಂದು ಕಾರಣ ಇದ್ದೇ ಇರುತ್ತದೆ. ಆ ಕಾರಣವನ್ನು ಹುಡುಕಾಡಿ, ಅದರ ಪ್ರಕಾರ ಜೀವಿಸುವುದೇ ಅರ್ಥಪೂರ್ಣವಾದ ಜೀವನ.

ದಿನವೂ ಬೆಳಿಗ್ಗೆ ಎದ್ದ ಕೂಡಲೇ ಅವಸರ ಅವಸರವಾಗಿ ಸಿದ್ಧವಾಗಿ, ಕೆಲಸಕ್ಕೆ ಹೋಗಿ, ದಿನವೂ ಒಂದೇ ಬಗೆಯ ಕೆಲಸವನ್ನು ಜೀವನವಿಡೀ ಮಾಡುತ್ತಾ, ಯಾವುದೇ ಪ್ರತ್ಯೇಕವಾದ ಖಾಸಗಿಯಾದ ಇಷ್ಟಾನಿಷ್ಟಗಳೂ ಇಲ್ಲದೆ, ಸಮಯಕ್ಕೆ ಸರಿಯಾಗಿ ಊಟ ನಿದ್ರೆ ಮಾಡಿ, ವಿವಿಧ ಬಗೆಯ ಉಡುಪುಗಳನ್ನು ಧರಿಸಿ, ವಿಧಿಯನ್ನು ಬೈದುಕೊಂಡು ಜೀವನ ನಡೆಸುವವರಿಗೆ ಯಾವುದೇ ಹುಡುಕಾಟವೂ ಇರುವುದಿಲ್ಲ. ಅವರು ಮಾನಸಿಕ ತೃಪ್ತಿಯನ್ನೂ ಹೊಂದುವುದಿಲ್ಲ.


# ತೃಪ್ತಿಕರ ಜೀವನ



'ಜೀವನದಲ್ಲಿ ಯಾವಾಗ ಸೆಟಲ್ ಆಗ್ಬೇಕೂಂತಿದೀಯಾ?' ಇಂದಿನ ಯುವಕರನ್ನು ಆತಂಕಕ್ಕೀಡು ಮಾಡುವ ಇಂತಹ ಪ್ರಶ್ನೆಯಂತಹ ಮತ್ತೊಂದು ಪ್ರಶ್ನೆ ಬೇರಾವುದೂ ಇಲ್ಲ. ಈ ವಯಸ್ಸಿನಲ್ಲಿ ಅಂತಹ ಒಂದು ಸ್ಥಿರವಾದ, ನೆಮ್ಮದಿಯಾದ ಜೀವನ ದೊರಕುತ್ತದೆ ಎಂದು ಹಲವರಿಗೆ ತಿಳಿಯುವುದೇ ಇಲ್ಲ.

ಹಲವು ಬಗೆಯ ಸ್ಪರ್ಧೆಗಳ ನಡುವೆ, ಒಂದು ಒಳ್ಳೆಯ ಶಾಲೆಯಲ್ಲಿ ಚೆನ್ನಾಗಿ ಓದಿ, ಒಳ್ಳೆಯ ಅಂಕಗಳನ್ನು ಗಳಿಸಿ, ಉತ್ತಮವಾದ ಕಾಲೇಜಿಗೆ ಸೇರಿ, ಕ್ಯಾಂಪಸ್ ಇಂಟರ್‌ವ್ಯೂನಲ್ಲಿ ಒಂದು ದೊಡ್ಡ ಕಂಪನಿಯಲ್ಲಿ ಕೆಲಸಕ್ಕೆ ಸೇರಿ, ಲಕ್ಷಗಟ್ಟಲೆ ಸಂಬಳ ತೆಗೆದುಕೊಂಡರೂ ಕೂಡ, ಜೀವನದಲ್ಲಿ ಸೆಟಲ್ ಆದಂತಹ ತೃಪ್ತಿ ಮೂಡುವುದಿಲ್ಲ, ಹಲವರಿಗೆ! ಒಳ್ಳೆಯ ಕೆಲಸಕ್ಕೆ ಸೇರಿಕೊಂಡರೂ, ಅದನ್ನು ಉಳಿಸಿಕೊಳ್ಳಲು ಮತ್ತೆ ಓದುತ್ತಲೇ ಇರಬೇಕು. ದಿನದಿನವೂ ನಡೆಯುತ್ತಿರುವ ಹಲವಾರು ಬದಲಾವಣೆಗಳಿಗೆ ಒಗ್ಗಿಕೊಳ್ಳಬೇಕು. ಮುಂದಿನ ತಲೆಮಾರಿನೊಂದಿಗೆ ಸೆಡ್ಡು ಹೊಡೆಯಬೇಕು. 'ನಮಗಿಂತಲೂ ಹೆಚ್ಚು ಸಮರ್ಥರಾದವರು ಮುಂದಿನ ವರ್ಷಗಳಲ್ಲಿ ಬರುತ್ತಲೇ ಇದ್ದಾರೆ' ಎಂಬ ಭಾವನೆಯೇ ಅವರಲ್ಲಿ ಆತಂಕವನ್ನು ತುಂಬುತ್ತದೆ. ಇದೇ ಹಲವರ ನೆಮ್ಮದಿಯನ್ನು ಹಾಳು ಮಾಡುತ್ತದೆ. ಸ್ಥಿರವಾದ ಜೀವನವನ್ನು ಹುಡುಕುವಂತೆ ಪ್ರೇರೇಪಿಸುತ್ತದೆ.

# ಒಪ್ಪಿಕೊಳ್ಳುವಿರಾ?



ಮನುಷ್ಯನ ಮನಸ್ಸು ಅಂಗೀಕಾರಕ್ಕಾಗಿ, ಗುರುತಿಸುವಿಕೆಗಾಗಿ ಹಂಬಲಿಸುತ್ತದೆ. 'ನಿಮ್ಮಂತೆಯೇ ನನ್ನನ್ನೂ ಭಾವಿಸುವಿರಾ?' ಎಂದು ಪ್ರತಿಯೊಬ್ಬರೂ ತಮ್ಮ ಸುತ್ತಲೂ ಇರುವವರ ಬಳಿ ಮಾನಸಿಕವಾಗಿ ಕೇಳಿಕೊಳ್ಳುತ್ತಾರೆ. ಇಂತಹ ಅಂಗೀಕಾರವೇ ಯಾವಾಗಲೂ ಹಲವರ ಹುಡುಕಾಟವಾಗಿರುತ್ತದೆ. ಒಬ್ಬ ವ್ಯಕ್ತಿಯ ಅನುಕೂಲ, ಸ್ವರೂಪ, ಸಾಮಾಜಿಕ ಅಂತಸ್ತು, ಅವರ ಸಾಮಾಜಿಕ ಪ್ರತಿಷ್ಠೆ ಇತ್ಯಾದಿಗಳನ್ನು ಪಕ್ಕಕ್ಕಿಟ್ಟು, ಎಲ್ಲರನ್ನೂ ಸಮವಾಗಿ ಗೌರವಿಸುವ ಸಹಜತೆ ಇಲ್ಲಿಲ್ಲ.

ಶಾಲೆಗೆ ಹೋಗುವ ದಿನಗಳಿಂದಲೇ ಈ ಬೇಧಭಾವ ಬಂದು ಬಿಡುತ್ತದೆ. ಚೆನ್ನಾಗಿ ಓದುವ ವಿದ್ಯಾರ್ಥಿಗಳು ಯಾರೂ ಕಡೆಯ ಬೆಂಚ್‌ನ ವಿದ್ಯಾರ್ಥಿಗಳೊಡನೆ ಸೇರುವುದಿಲ್ಲ. ಇನ್ನು ಕಾಲೇಜಿನಲ್ಲಿ, ಚೆನ್ನಾಗಿ ಓದುವ ವಿದ್ಯಾರ್ಥಿಗಳಿಗಾಗಿ ಎಂದೇ ಪ್ರತ್ಯೇಕ ಕಾಲೇಜುಗಳು ಬಂದು ಬಿಟ್ಟಿವೆ. ಒಬ್ಬರು ಓದಿದ ಕಾಲೇಜಿನ ಹೆಸರಿನ ಆಧಾರದಿಂದಲೇ ಅವರ ಅರ್ಹತೆಯನ್ನು ಲೆಕ್ಕ ಹಾಕುವುದೂ ಉಂಟು. ಅದರ ನಂತರ ಕೆಲಸ, ವೈವಾಹಿಕ ಜೀವನ ಹೀಗೆ ಎಲ್ಲಾ ಸ್ಥಳಗಲ್ಲೂ ಈ ವ್ಯತ್ಯಾಸ ಹೆಚ್ಚುತ್ತಲೇ ಹೋಗುತ್ತದೆ. ಈ ವ್ಯತ್ಯಾಸಗಳನ್ನೂ ಮೀರಿ, ಗೌರವವನ್ನು ಗಳಿಸುವಾಗ ಅವರ ಹಂಬಲ ಪೂರ್ಣವಾಗುತ್ತದೆ.

# ಹುಡುಕಾಟವನ್ನು ಉದ್ದೀಪಿಸುವ ಆಸೆಗಳು!

ಪ್ರತಿಯೊಬ್ಬರೂ ತಮ್ಮ ಜೀವನ ಶೈಲಿಯನ್ನು ಹೆಚ್ಚು ಅನುಕೂಲಕರವಾಗಿಸಿಕೊಳ್ಳುವುದಕ್ಕಾಗಿ ತುಂಬಾ ವಸ್ತುಗಳನ್ನು ಕೊಂಡು–ಕೊಂಡು ತೆಗೆದಿಟ್ಟುಕೊಳ್ಳುವ ಕಾಲ ಇದು. ವಾಹನಗಳಿಂದ ಹಿಡಿದು, ಮನೆಗೆ ಅಗತ್ಯವಾದ ಎ.ಸಿ., ಯವರೆಗೆ ಅನುಕೂಲಕರ ಜೀವನಕ್ಕೆ ಅಗತ್ಯವಾದ ವಸ್ತುಗಳು ಅನೇಕ. ಅ ವಸ್ತುಗಳ ಮೇಲಿನ ಆಸೆಯೇ ಹಲವರ ಹುಡುಕಾಟಕ್ಕೆ ಕಾರಣವಾಗಿದೆ. ಆಸೆಗಳೇ ಇಲ್ಲದ ಮನುಷ್ಯರು ಮಡುಗಟ್ಟಿದ ನೀರಿನಂತಾಗಿ ಹೋಗುತ್ತಾರೆ. ಆಸೆಯಿರುವ ಮನುಷ್ಯರು ಅಪಾರ ವೇಗದಲ್ಲಿ ಹುಡುಕಾಡಿ ಹುಡುಕಾಡಿ ವಸ್ತುಗಳನ್ನು ಸಂಗ್ರಹಿಸಿಟ್ಟುಕೊಳ್ಳುತ್ತಾರೆ. ಒಂದನ್ನು ಪಡೆದುಕೊಂಡ ಕೂಡಲೇ ಇನ್ನೊಂದಕ್ಕೆ ಆಸೆ ಪಡುತ್ತಾರೆ.

# ಹುಡುಕಾಟದ ರಿಲೇ ರೇಸ್!

ಒಂದು ಮರದ ಮೇಲೆ ಬಂದು ಕುಳಿತುಕೊಳ್ಳುವ ಹಕ್ಕಿ, ತುಂಬ ಹೊತ್ತು ಅಲ್ಲಿಯೇ ಕುಳಿತುಕೊಳ್ಳುವುದಿಲ್ಲ. ರೆಂಬೆಯಿಂದ ರೆಂಬೆಗೆ ಹಾರುತ್ತದೆ, ಬೇರೊಂದು ಮರದಲ್ಲಿ ಹೋಗಿ ಕುಳಿತುಕೊಳ್ಳುತ್ತದೆ. ಅಲ್ಲಿ ಅದು ಯಾವುದೇ ಆಹಾರವನ್ನೂ ಇಟ್ಟಿರುವುದಿಲ್ಲ ಅಥವಾ ಯಾವುದಾದರೂ ಒಂದು ಮರದಲ್ಲಿ ಕುಳಿತುಕೊಂಡರೂ ಅದಕ್ಕೆ ಯಾವುದೇ ಅಪಾಯವೂ ಇಲ್ಲ. ನಿಮಿಷಕ್ಕೆ ನಿಮಿಷ ಜಾಗ ಬದಲಾಯಿಸುತ್ತಲೇ ಇರುವ ಹಕ್ಕಿಯಂತೆಯೇ ಕೆಲವು ಮನುಷ್ಯರ ಹುಡುಕಾಟವೂ ಇರುತ್ತದೆ. ಕಷ್ಟಪಟ್ಟು ಹುಡುಕಾಡಿ ಯಾವುದಾದರೂ ಒಂದನ್ನು ಪಡೆದುಕೊಳ್ಳುತ್ತಾರೆ. ಮರುಕ್ಷಣವೇ ಅವರ ಗುರಿ ಬೇರೊಂದಾಗಿ ಬದಲಾಗಿರುತ್ತದೆ. ಇದೇ ಬೆಳವಣಿಗೆಯನ್ನು ತರುತ್ತದೆ ಎಂದು ಹಲವರು ವಾದವನ್ನೂ ಮಾಡುತ್ತಾರೆ.





ಇದು ನಿಜ. ಕಲಿತುಕೊಳ್ಳುವುದೂ, ಕಲಿತದ್ದನ್ನಿಟ್ಟುಕೊಂಡು ಬೆಳವಣಿಗೆಯನ್ನು ಹೊಂದುವುದೂ ಬದುಕಿನ ಗುರಿ. ಆದರೆ, ಅದು ಎಂತಹ ಬೆಳವಣಿಗೆ ಎಂಬುದನ್ನೂ ಗಮನಿಸಬೇಕು. ಶಿಖರವನ್ನು ಮುಟ್ಟುವ ಒಬ್ಬ ವ್ಯಕ್ತಿ ಅಲ್ಲಿಯೇ ಇರುವುದರಲ್ಲಿ ಅರ್ಥವಿಲ್ಲ. ಅವರು ಅಲ್ಲಿಂದ ಇಳಿದು ಬರಲೇ ಬೇಕು. ಆದರೆ, ಆ ಶಿಖರವನ್ನು ಮುಟ್ಟಿದ್ದರಲ್ಲಿ ದೊರಕಿದ ಸಂತೋಷವನ್ನು ಅವರು ನಿಧಾನವಾಗಿ ಅನುಭವಿಸಬೇಕು. ಅವರ ಮುಂದಿನ ಗುರಿ ಇನ್ನೊಂದು ಶಿಖರವಾಗಿರಬೇಕು. ಆದರೆ ಅದಕ್ಕಾಗಿ ಕಡಲಿನಾಳವನ್ನು ಮುಟ್ಟುತ್ತೇನೆ ಎಂದು ಅಸಾಧ್ಯವಾದುದಕ್ಕೆ ಹೊರಡಬಾರದು. ಹೀಗಿರುವುದು ಎಂತಹವರಿಗೇ ಆಗಲಿ ತೃಪ್ತಿಯನ್ನು ತರುತ್ತದೆ. ●

# ಇಂದು ಹುಡುಕಾಡಿ!



'ಹುಡುಕು... ಹುಡುಕು... ಹುಡುಕಾಡಿಕೊಂಡೇ ಇರು. ಹುಡುಕಿದರೆ ದೊರಕದುದು ಯಾವುದೂ ಇಲ್ಲ' ಎಂದು ಒಂದು ಚಲನಚಿತ್ರದಲ್ಲಿ ಹೀರೋನ ಬಳಿ ಒಬ್ಬ ಹೇಳುತ್ತಲೇ ಇರುತ್ತಾನೆ. ಹುಡುಕಾಡುವ ಒಂದು ವಿಷಯ ಅನಿರೀಕ್ಷಿತವಾಗಿ ದೊರಕಿದರೆ ಅದು ಒಂದು ಬಗೆಯ ಸಂತೋಷವನ್ನು ನೀಡುತ್ತದೆ. ದೀರ್ಘವಾದ ಹುಡುಕಾಟದ ನಂತರ ಯಶಸ್ಸನ್ನು ರುಚಿಸುವುದೂ ಇನ್ನೊಂದು ಬಗೆಯ ಸುಖ. ಒಟ್ಟಿನಲ್ಲಿ ಹುಡುಕಾಡುವವರಿಗೇ ಯಾವುದೇ ಆದರೂ ದೊರಕುವುದು. 'ಆಮೇಲೆ ನೋಡಿಕೊಂಡರಾಯಿತು' ಎಂದು ಸುಮ್ಮನೆ ಇರುವವರ ಬಾಗಿಲು ಹುಡುಕಿಕೊಂಡೇನೂ ಯಶಸ್ಸುಗಳು ಬಂದು ಬಿಡುವುದಿಲ್ಲ.



ಪ್ರತಿ ದಿನವೂ ಇಷ್ಟಿಷ್ಟೇ ಹುಡುಕಾಟವನ್ನು ಮುಂದುವರೆಸಲು ಕೆಲವು ಸಲಹೆಗಳು :

➲ ಒಂದು ಚಲನಚಿತ್ರದಲ್ಲಿ ಒಬ್ಬ ಹಾಸ್ಯನಟ, 'ನಾನು ಎಲ್ಲೋ, ಹೇಗೋ ಇರಬೇಕಾಗಿದ್ದವನು, ಗೊತ್ತಾ?' ಎಂದು ಕೇಳುತ್ತಾನೆ. ತುಂಬಾ ಜನ ಇಂತಹ ನೆನಪಿನಲ್ಲೇ ಇರುತ್ತಾರೆ. 'ಅದು ಮಾತ್ರ ನಡೆದಿದ್ದರೆ ನಾನು ಹೀಗಿರುತ್ತಿದ್ದೆನಾ?' ಎಂದು ಹಲುಬುತ್ತಿರುತ್ತಾರೆ. ಸರಿಯಾದ ಶಿಕ್ಷಣವನ್ನು ಆಯ್ಕೆ ಮಾಡದೆ ಹೋದುದು, ಸರಿಯಾದ ಕೆಲಸವನ್ನು ನಿರ್ಣಯಿಸದೇ ಹೋದುದು, ಬೆಲೆ ಕಡಿಮೆ ಇರುವಾಗಲೇ ಮನೆಯನ್ನೋ, ನಿವೇಶನವನ್ನೋ ಆಭರಣವನ್ನೋ ಕೊಂಡುಕೊಳ್ಳದೇ ಹೋದುದು... ಹೀಗೆ ಹಲುಬುವುದಕ್ಕೆ ಸಾವಿರ ಕಾರಣಗಳು ಅವರಿಗಿರುತ್ತವೆ. ಇಂತಹ ಹಲುಬುವಿಕೆಗಳಿಂದ ಆಗುವುದು ಯಾವುದೂ ಏನೂ ಇಲ್ಲ. ಕಾಲಚಕ್ರದಲ್ಲಿ ಹತ್ತಿಕೊಂಡು, ಕಳೆದ ಕಾಲವನ್ನು ಹುಡುಕಾಡಿ ಅದನ್ನು ಬದಲಾಯಿಸಲು ಯಾರಿಂದಲೂ ಸಾಧ್ಯವಿಲ್ಲ. ನಮ್ಮ ಹುಡುಕಾಟ ಭವಿಷ್ಯವನ್ನು ಕುರಿತದ್ದಾಗಿರಬೇಕು.

➲ ಕಳೆದ ಕಾಲದಲ್ಲಿ ನಡೆದ ತಪ್ಪುಗಳನ್ನೇ ಕೆಲವರು ಮನಸ್ಸಿನ ತುಂಬ ತುಂಬಿಕೊಂಡಿರುತ್ತಾರೆ. ಒಂದು ಸೋಲನ್ನು ನೆನಪಿಸಿಕೊಂಡು ಅದಕ್ಕಾಗಿಯೇ ಚಿಂತಿಸುವ ಮನುಷ್ಯರು, ಸೋಲಿನ ಆ ಕ್ಷಣದಲ್ಲೇ ಮತ್ತೆ ಮತ್ತೆ ಜೀವಿಸುತ್ತಿರುತ್ತಾರೆ. ನೆರವೇರದ ಕನಸನ್ನು ನೆನಪಿಸಿಕೊಂಡು ಅದಕ್ಕಾಗಿ ಹಂಬಲಿಸುವ ಮನುಷ್ಯರು, ಆ ನಿರಾಸೆಯನ್ನು ಮತ್ತೆ ಮತ್ತೆ ಅನುಭವಿಸುತ್ತಾರೆ. ಯಾರೋ ಒಬ್ಬ ಬಂಧುಗಳು ಹೇಳಿದ ಅವಮರ್ಯಾದೆಯ ಮಾತುಗಳನ್ನು ಪದೇಪದೇ ನೆನಪಿಸಿಕೊಳ್ಳುವ ಮನುಷ್ಯರು, ಆ ಮಾತನ್ನು ತಮ್ಮೊಳಗೇ ಮತ್ತೆ ಮತ್ತೆ ಕೇಳುತ್ತಿರುತ್ತಾರೆ. ಇದು ಅವರನ್ನು ಇನ್ನೂ ಕುಗ್ಗಿಸಿ ಬಿಡುತ್ತದೆ. ವಾಹನಗಳಲ್ಲಿ ಹಿಂದೆ ಹೋಗುವುದಕ್ಕೆ ರಿವರ್ಸ್ ಗೇರ್ ಇರುತ್ತದೆ. ಜೀವನದಲ್ಲಿ ಅದು ಇರುವುದಿಲ್ಲ. ಅದುದರಿಂದಲೇ ಹಿಂದೆ ಹೋಗಲು ಆಸೆ ಪಡಬೇಡಿ!

➲ ಕಳೆದ ಕಾಲದ ಕಹಿಗಳ ಹಾಗೆಯೇ ಸಿಹಿ ನೆನಪುಗಳೂ ಒಂದು ಮಟ್ಟಿಗಿಂತ ಹೆಚ್ಚಾಗಿರಬೇಕಾಗಿಲ್ಲ. 'ನನಗೆ ದೊರೆತಂತಹ ಸಿಹಿಯಾದ ಬಾಲ್ಯ ಯಾರಿಗೂ ದೊರೆತಿರಲು ಸಾಧ್ಯವಿಲ್ಲ. ಹಾಗೆ ನನ್ನನ್ನು ಸುಖವಾಗಿ ಬೆಳೆಸಿದ್ದಾರೆ' ಎಂದು ಯೋಚಿಸುವುದು ಸಂತೋಷ ನೀಡಬಹುದು. ಆದರೆ ಮರುಕ್ಷಣವೇ, 'ಮಗುವಾಗಿಯೇ ಇದ್ದಿರಬೇಕಿತ್ತು. ಯಾಕೆ ತಾನೇ ಬೆಳೆದೆವೋ!' ಎಂಬ ಭಾವವೂ ಮೂಡಬಹುದು. ಶಾಲಾ ದಿನಗಳು, ಯೌವನದ ದಿನಗಳು ಹೀಗೆ ಯಾವುದನ್ನು ನೆನಪಿಸಿಕೊಂಡರೂ ಇಂತಹ ಬಯಕೆಗಳನ್ನು ಮೀರಲು ಸಾಧ್ಯವಿಲ್ಲ. ಕೆಲವು ನಿಮಿಷಗಳ ಸಿಹಿಯೂ ಬೇಕಾಗಿಲ್ಲ, ದೀರ್ಘ ಕಾಲದ ಹಂಬಲವೂ ಇರಬೇಕಾಗಿಲ್ಲ.

➲ ಕಳೆದ ಕಾಲವನ್ನೇ ನೆನಪಿಸಿಕೊಂಡು ಹಗಲುಗನಸು ಕಾಣುವವರು, ವರ್ತಮಾನದ ಸಮಯವನ್ನು ಹಾಳು ಮಾಡುತ್ತಾರೆ. ಈ ನಿಮಿಷ ಮಾಡಬೇಕಾದುದನ್ನು ಮಾಡಿದರೆ ಮಾತ್ರವೇ, ಇಂದಿನ ಕೆಲಸವನ್ನು ಮಾಡಿ ಮುಗಿಸಲು ಸಾಧ್ಯ. ಅದೇ ನೆಮ್ಮದಿಯಾದ ಜೀವನವನ್ನು ನೀಡುವುದು.





ಕುಟುಂಬದ ಖರ್ಚುಗಳು, ಸಾಲದ ಕಂತು, ಶಾಲೆ ಹಾಗೂ ಕಾಲೇಜು ಫೀಸ್ ಹೀಗೆ ಎಷ್ಟೆಷ್ಟೋ ಸಮಸ್ಯೆಗಳನ್ನು ನಿಭಾಯಿಸಬೇಕಾದ ಸಮಯದಲ್ಲಿ ಕಳೆದ ಕಾಲವನ್ನು ಕುರಿತ ಹಗಲುಗನಸು ಅಗತ್ಯವಿಲ್ಲ. ಕಳೆದ ಕಾಲವನ್ನೇ ಹೆಚ್ಚು ನೆನಪಿಸಿಕೊಳ್ಳುವವರು, ವರ್ತಮಾನದ ಮೇಲೆ ತಮ್ಮ ಹಿಡಿತವನ್ನು ಕಳೆದುಕೊಳ್ಳುತ್ತಾರೆ.

ಏನು, ಹೇಗೆ, ಯಾವಾಗ... ಈ ಪ್ರಶ್ನೆಗಳೇ ಹಲವರ ನೆಮ್ಮದಿಯನ್ನು ಕೆಡಿಸುವುದು. 'ನನ್ನೊಂದಿಗೆ ಓದಿದ ತುಂಬ ಜನರಿಗೆ ಒಳ್ಳೆಯ ಕೆಲಸ ದೊರೆತು ಜೀವನದಲ್ಲಿ ನೆಮ್ಮದಿಯಾಗಿ ಸೆಟಲ್ ಆಗಿಬಿಟ್ಟಿದ್ದಾರೆ. ನನಗೆ ಮಾತ್ರ ಕಡಿಮೆ ಸಂಬಳದಲ್ಲಿ ಸುಮಾರಾದ ಕೆಲಸ ಸಿಕ್ಕಿದೆ. ನನಗೆ ಮಾತ್ರ ಏಕೆ ಹೀಗೆ?' ಈ ಪ್ರಶ್ನೆ ತುಂಬಾ ಜನರ ಮನಸ್ಸಿನಲ್ಲಿ ಕೊರೆಯುತ್ತಿರುತ್ತದೆ. 'ನನ್ನೊಂದಿಗೆ ಕೆಲಸ ಮಾಡುವ ತುಂಬಾ ಜನರು ಸ್ವಂತ ಮನೆ ಕಟ್ಟಿದ್ದಾರೆ. ಆದರೆ ನಾನು ಮನೆ ಯಾವಾಗ ಕಟ್ಟುವೆನೋ ಏನೋ?' ಎಂದು ಯೋಚಿಸಿ ಕೊರಗುತ್ತಾರೆ ಹಲವರು. ಒಂದು ಬೀಜ ಮೊಳೆತು, ಚಿಗುರಿ, ಸಸಿಯಾಗಿ, ಗಿಡವಾಗಿ, ಮರವಾಗಿ ಬೆಳೆಯಲು ತುಂಬಾ ಕಾಲ ಬೇಕು. ಇದಕ್ಕೆ ಪ್ರಕೃತಿಯ ಕರುಣೆಯೂ ಇರಬೇಕು. ಅದಕ್ಕಾಗಿ ಆ ಬೀಜದ ಪ್ರಯತ್ನವನ್ನು ಕಡಿಮೆಯಾಗಿ ಲೆಕ್ಕ ಹಾಕಬೇಕಾಗಿಲ್ಲ. ಪ್ರಯತ್ನವನ್ನೇ ಮಾಡದೆ ಪ್ರಶ್ನೆಗಳನ್ನು ಮಾತ್ರ ಕೇಳುವುದರಲ್ಲಿ ಅರ್ಥವಿಲ್ಲ.



ಹಲಕೆಲವು ಯೋಜನೆಗಳನ್ನು ರೂಪಿಸುವುದರಲ್ಲೇ ಹಲವರ ಭವಿಷ್ಯ ಅಡಗಿರುತ್ತದೆ. ದೇಹದ ತೂಕವನ್ನು ಕಡಿಮೆ ಮಾಡಬೇಕೆಂದುಕೊಂಡರೆ ಅದನ್ನು ಒಂದೆರಡು ದಿನಗಳಲ್ಲೇ ಮಾಡಲು ಸಾಧ್ಯವಿಲ್ಲ. ಅದಕ್ಕಾಗಿ ಪ್ರತಿದಿನವೂ ಶ್ರಮಿಸಬೇಕು, ಸಮಯವನ್ನು ಮೀಸಲಿಡಬೇಕು. ದಿನವೂ ವ್ಯಾಯಾಮ ಮಾಡಿ, ಆಹಾರದಲ್ಲಿ ನಿಯಂತ್ರಣವನ್ನು ಸಾಧಿಸಿದರೆ ನಿಧಾನವಾಗಿ ಗುರಿ ಮುಟ್ಟಬಹುದು. ಹೊಸದಾಗಿ ಒಂದು ವಿಷಯವನ್ನು ಕಲಿತುಕೊಳ್ಳುವುದು, ಮನೆ ಖರೀದಿಸುವುದು, ಕೆಲಸದಲ್ಲಿ ಬಡ್ತಿ ಹೊಂದುವುದು ಹೀಗೆ ಪ್ರತಿಯೊಂದಕ್ಕೂ ಯೋಜನೆಯನ್ನು ರೂಪಿಸಿಕೊಳ್ಳುವುದು ಅವಶ್ಯಕ. ಹುಡುಕಾಟದ ಗುಣ ಇರುವವರೇ ಸ್ಪಷ್ಟವಾಗಿ ಯೋಜನೆಯನ್ನೂ ರೂಪಿಸಬಲ್ಲರು.

ಒಬ್ಬ ವ್ಯಕ್ತಿ ತನ್ನನ್ನು ತುಂಬ ಕೇವಲವಾಗಿ ತಾನೇ ಅವಮಾನ ಪಡಿಸಿಕೊಳ್ಳುವುದೆಂದರೆ, ಇತರರ ಜೊತೆಯಲ್ಲಿ ತನ್ನನ್ನು ಹೋಲಿಸಿ ನೋಡಿಕೊಳ್ಳುವುದೇ ಆಗಿದೆ. ಅದರಲ್ಲೂ ತಪ್ಪಾಗಿ ಹೋಲಿಸಿಕೊಳ್ಳುವುದನ್ನೇ ಕೆಲವರು ಮಾಡುತ್ತಿರುತ್ತಾರೆ. 'ಪಕ್ಕದ ಮನೆಯವರು ಕಾರ್ ಕೊಂಡುಕೊಂಡುಬಿಟ್ಟರು. ನಾನಿನ್ನೂ ಅದೇ ಹಳೆಯ ಬೈಕ್ ಅನ್ನೇ ಓಡಿಸುತ್ತಿದ್ದೇನೆ' ಎಂದು ಕೆಲವರು ಹೊಟ್ಟೆಯುರಿ ಪಡುತ್ತಾರೆ. ಹೀಗೆ ಇತರರ ಬಳಿ ಇರುವ ವಸ್ತುಗಳು ಹಲವರ ಮನ ನೆಮ್ಮದಿಯನ್ನು ಕೆಡಿಸುತ್ತವೆ. ಹುಡುಕಾಟದ ಮಾರ್ಗವನ್ನು ಸರಿಯಾಗಿ ಅರಿತಿರುವವರು ಇದನ್ನು ಬೇರೆ ದೃಷ್ಟಿಕೋನದಲ್ಲಿ ನೋಡುತ್ತಾರೆ: 'ಪಕ್ಕದ ಮನೆಯ ವ್ಯಕ್ತಿಗೆ ಹೇಗೆ ಕಾರು ಕೊಳ್ಳಲು ಸಾಧ್ಯವಾಯಿತು? ನಾನು ದಿನವೂ 8 ಗಂಟೆಗಳ ಕಾಲ ಕಷ್ಟ ಪಟ್ಟು ದುಡಿದರೆ, ಆತ 10 ಗಂಟೆಗಳ ಕಾಲ ಕೆಲಸ ಮಾಡುತ್ತಾನೆ. ವಾರದ ಕಡೆಯಲ್ಲಿ ನಾನು ವಿಶ್ರಾಂತಿ ತೆಗೆದುಕೊಂಡರೆ ಆತ ತನ್ನ ಕೆಲಸಕ್ಕೆ ಸಂಬಂಧಿಸಿದಂತೆ ಹೊಸದಾಗಿ ಒಂದು ಕೋರ್ಸ್‌ಗೆ ಸೇರಿಕೊಂಡು ಕಲಿಯಲು ಹೋಗುತ್ತಿದ್ದಾನೆ...' ಹೀಗೆ ಅವರ ದುಡಿಮೆಯನ್ನು ನೋಡುವ ಕಣ್ಣುಗಳಿಗೆ, ತಾವೂ ಬೇಗನೆ ಕಾರು ಕೊಳ್ಳುವ ಮಾರ್ಗಗಳು ಕಾಣಿಸತೊಡಗುತ್ತವೆ.

ಹುಡುಕಾಟದಲ್ಲಿ ಸ್ಪಷ್ಟತೆ ಇರುವವರು ಆ ಕ್ಷಣಕ್ಕೆ ಮಾತ್ರ ಅಂಟಿಕೊಳ್ಳುವುದಿಲ್ಲ. ಅವರು ಸೋಲುಗಳಿಂದ ಕುಗ್ಗಿ ಹೋಗುವುದೂ ಇಲ್ಲ. ಯಶಸ್ಸಿನಲ್ಲಿ ಆರ್ಭಟಿಸುವುದೂ ಇಲ್ಲ. 'ಒಂದು ಸೋಲು ಎನ್ನುವುದು ಆ ನಿಮಿಷದ ಪರಿಣಾಮ ಮಾತ್ರವೇ ಆಗಿರುತ್ತದೆ. ಅದನ್ನು ಬದಲಾಯಿಸಲು ಸಾಧ್ಯವಿದೆ' ಎಂಬುದನ್ನು ಅವರು ಅರ್ಥ ಮಾಡಿಕೊಂಡಿರುತ್ತಾರೆ. 'ಯಶಸ್ಸು ಎನ್ನುವುದು ಆ ಸಮಯದ ಸಾಧನೆ ಮಾತ್ರ. ನಾವು ಅದನ್ನೇ ನೆನಪಿಸಿಕೊಂಡಿದ್ದರೆ ನಂತರ ಯಾವುದನ್ನೂ ಮಾಡಲು ಸಾಧ್ಯವಾಗದೇ ಹೋಗಬಹುದು' ಎಂಬುದೂ ಅವರಿಗೆ ಗೊತ್ತು. ನಿರಂತರವಾಗಿ ಸಾಲುಸಾಲು ಯಶಸ್ಸುಗಳನ್ನು ಕಾಣುವುದು ಮಾತ್ರವೇ ಸಂತೋಷವನ್ನು ನಿರಂತರವಾಗಿಟ್ಟುಕೊಳ್ಳುವ ಹಾದಿ ಎನ್ನುವುದನ್ನು ಅರಿತು ಹುಡುಕಾಟವನ್ನು ಅವರು ಮುಂದುವರೆಸುತ್ತಾರೆ.


# ಹುಡುಕಿರಿ ದೊರೆಯುತ್ತದೆ!


**ತಾವು ಹುಡುಕಾಡಿದ್ದನ್ನು ಪಡೆದುಕೊಂಡ ನಾಲ್ಕು ಜನರ ಬದುಕಿನಲ್ಲಿ ನಡೆದ ಘಟನೆಗಳು ನಮಗೆ ತುಂಬ ವಿಷಯಗಳನ್ನು ಹೇಳಿಕೊಡುತ್ತವೆ!**

**ಜ**ಗತ್ತಿನ ಅತಿ ಶ್ರೇಷ್ಠ ಬರಹಗಾರರಲ್ಲಿ ಒಬ್ಬರೆಂದು ಪರಿಗಣಿಸಲ್ಪಡುವವರು ಪಾವ್ಲೋ ಕೊಹಿಲೋ. ಬ್ರೆಜಿಲ್ ಮೂಲದವರು. ಪೋರ್ಚುಗೀಸ್, ಸ್ಪ್ಯಾನಿಷ್ ಹಾಗೂ ಆಂಗ್ಲ ಭಾಷೆಗಳ ಪ್ರಸಿದ್ಧ ಸಾಹಿತಿ. ಇಂದು ಇವರು ಏನನ್ನೇ ಬರೆದರೂ ಅದು ವಿಶ್ವದ ನೂರಕ್ಕಿಂತ ಹೆಚ್ಚಿನ ಭಾಷೆಗಳಿಗೆ ಕೂಡಲೇ ಅನುವಾದಗೊಳ್ಳುತ್ತದೆ. ಇವರು ರಚಿಸಿದ 'ದಿ ಅಲ್‌ಕೆಮಿಸ್ಟ್' ಎಂದರೆ, 'ರಸವಾದಿ' ಎನ್ನುವ ಕಾದಂಬರಿ ಜಗತ್ಪ್ರಸಿದ್ಧವಾದುದು. ಅದನ್ನು ರಚಿಸಿದಾಗಲೇ, 'ಹೊಸದಾದ ಬರವಣಿಗೆಯ ಶೈಲಿಯಿಂದಾಗಿ ಓದಿ ಮುಗಿಸಿದ ಕೂಡಲೇ ಓದುಗರಲ್ಲಿ ಆತ್ಮವಿಶ್ವಾಸ ಮೂಡಿಸಿ, ಈ ಕೃತಿ ಯಾವ್ಯಾವುದೋ ಮಾಯಾಜಾಲಗಳನ್ನು ಮಾಡುತ್ತದೆ' ಎಂದು ಅವರು ಭಾವಿಸಿದರು.

30 ವರ್ಷಗಳ ಮುನ್ನ ಅದನ್ನು ಮೊದಲ ಬಾರಿಗೆ ಮುದ್ರಿಸಿದಾಗ, ಮೊದಲ ವಾರದಲ್ಲಿ ಅದರ ಒಂದೇ ಒಂದು ಪ್ರತಿ ಮಾತ್ರ ಮಾರಾಟವಾಯಿತು. ಅದರ ನಂತರ ಆರು ತಿಂಗಳಾದ ಮೇಲೆ ಎರಡನೆಯ ಪ್ರತಿ ಮಾರಾಟವಾಯಿತು. ಒಂದು ವರ್ಷ ಕಳೆಯಿತು. ಬೇರ್‍ಯಾರೂ ಅದನ್ನು ಕೊಂಡುಕೊಳ್ಳಲು ಮುಂದೆ ಬರಲಿಲ್ಲ. ಪ್ರಕಾಶಕರು ನಿರಾಶೆಯಿಂದ ಇವರ ಜೊತೆಗಿನ ಕಾಂಟ್ರಾಕ್ಟ್ ಅನ್ನು ರದ್ದು ಪಡಿಸಿಕೊಂಡು ಬಿಟ್ಟರು. ಆದರೆ, ಪಾವ್ಲೋ ಕೊಹಿಲೋ ಮಾತ್ರ ನಂಬಿಕೆ ಕಳೆದುಕೊಳ್ಳಲಿಲ್ಲ. ಕೆಲವು ವರ್ಷಗಳ ನಂತರ ಮತ್ತೊಂದು ಪ್ರಕಾಶನ ಸಂಸ್ಥೆಯ ಮೂಲಕ ಅದನ್ನು ಮರು ಮುದ್ರಿಸಿದರು. ಅದು ಒಂದು ಪ್ರಸಿದ್ಧ ಪ್ರಕಾಶನ ಸಂಸ್ಥೆಯಾಗಿದ್ದ ಕಾರಣದಿಂದ ಕೊಂಚಕೊಂಚವೇ ಈ ಕಾದಂಬರಿಯ ಪ್ರತಿಗಳು ಮಾರಾಟವಾಗತೊಡಗಿದವು. ಓದಿದವರು ಅದನ್ನು ಮೆಚ್ಚಿಕೊಂಡು ಮಾತನಾಡಿದ್ದರಿಂದ ಇನ್ನೂ ಕೆಲವರು ಬಂದು ಪ್ರತಿಗಳನ್ನು ಕೊಂಡು-ಕೊಂಡರು. ಹೀಗೆ ಮಾರಾಟ ಹೆಚ್ಚಿತು. ಇಂದು ಜಗತ್ತಿನಾದ್ಯಂತ ಹಲವು ಭಾಷೆಗಳಲ್ಲಿ 15 ಕೋಟಿ ಪ್ರತಿಗಳು ಮಾರಾಟವಾಗಿರುವ ಕೃತಿಯಾಗಿದೆ ಇವರ 'ರಸವಾದಿ' ಕಾದಂಬರಿ!

ತನ್ನ ಹುಡುಕಾಟವನ್ನು ಪಾವ್ಲೋ ಕೊಹಿಲೋ ಕೈಬಿಟ್ಟು ಬಿಟ್ಟಿದ್ದರೆ ಇದು ಸಾಧ್ಯವಾಗುತ್ತಿರಲಿಲ್ಲ. 'ಒಂದು ಕನಸು ನಿಜವಾಗುವಾಗಲೇ ಜೀವನ ಸ್ವಾರಸ್ಯಕರವಾಗುವುದು' ಎನ್ನುತ್ತಾರೆ ಅವರು.




**ಬ್ಯಾ**ಸ್ಕೆಟ್ ಬಾಲ್ ಕ್ರೀಡೆಯ ಹೆಸರು ಹೇಳಿದ ಕೂಡಲೇ ನಮಗೆ ನೆನಪಾಗುವುದೇ ಮೈಕೆಲ್ ಜೋರ್ಡಾನ್ ಎಂಬ ಹೆಸರು. ಈ ಕ್ರೀಡೆಯ ಇತಿಹಾಸದಲ್ಲಿ ಅವರ ಮಟ್ಟಿಗೆ ಆಡುವ ಅತ್ಯುತ್ತಮ ಆಟಗಾರ ಮತ್ತೊಬ್ಬನಿಲ್ಲ. ಮೈದಾನದ ಯಾವುದೇ ಮೂಲೆಯಲ್ಲಿ ನಿಂತುಕೊಂಡು ಬೇಕಾದರೂ ಬುಟ್ಟಿಯೊಳಗೆ ಸರಿಯಾಗಿ ನಿಖರವಾಗಿ ಚೆಂಡನ್ನು ಹಾಕುವ ಸಾಮರ್ಥ್ಯವುಳ್ಳವರು ಅವರು.

ಆದರೆ, ಶಾಲೆಯಲ್ಲಿ ಓದುವಾಗ ಅವರನ್ನು ಬ್ಯಾಸ್ಕೆಟ್ ಬಾಲ್ ತಂಡದೊಳಗೆ ಸೇರಿಸಿಕೊಳ್ಳಲು ನಿರಾಕರಿಸಲಾಯಿತು. ಅದಕ್ಕೆ, 'ಇವನಿಗೆ ಸರಿಯಾಗಿ ಆಡಲು ಬರುವುದಿಲ್ಲ' ಎಂಬ ಕಾರಣವನ್ನು ಬೇರೆ ಹೇಳಲಾಯಿತು. ಮನೆಗೆ ಹೋದ ಮೇಲೆ ಅಂದು ಇಡೀ ರಾತ್ರಿ ಕೋಣೆಯ ಬಾಗಿಲನ್ನು ಮುಚ್ಚಿಕೊಂಡು ಅಳುತ್ತಲೇ ಇದ್ದ ಬಾಲಕ ಜೋರ್ಡಾನ್. ಆದರೂ ಆತ ಕುಗ್ಗಿ ಹೋಗಲಿಲ್ಲ. ಮರುದಿನವೇ ಹೋಗಿ ಒಂದು ತರಬೇತಿ ಕೇಂದ್ರದಲ್ಲಿ ಸೇರಿಕೊಂಡ. ಒಂದು ವರ್ಷ ಕಾಲ ತೀವ್ರವಾಗಿ ತರಬೇತಿ ತೆಗೆದುಕೊಂಡ. ಆತನ ತರಬೇತಿ ಆವೇಶಭರಿತವಾಗಿರುತ್ತಿತ್ತು. ಇದೆಲ್ಲದರ ಫಲವಾಗಿ ಅವನು ನಾಲ್ಕು ಅಂಗುಲ ಉದ್ದ ಬೆಳೆದಿದ್ದ. ಮುಂದಿನ ವರ್ಷ ಶಾಲೆಯಲ್ಲಿ ಬ್ಯಾಸ್ಕೆಟ್ ಬಾಲ್ ಆಟಗಾರರ ಆಯ್ಕೆ ನಡೆದಾಗ ಅದರಲ್ಲಿ ಇವನೂ ಆಯ್ಕೆಯಾಗಿದ್ದ. ಬಹುಬೇಗ ಆ ತಂಡದ ಅತ್ಯುತ್ತಮ ಆಟಗಾರ ಎಂಬ ಹೆಸರೂ ಇವನಿಗೆ ದೊರೆಯಿತು.

ಜೋರ್ಡಾನ್‌ನ ಬ್ಯಾಸ್ಕೆಟ್‌ಬಾಲ್ ಆಡುವ ಸಾಮರ್ಥ್ಯದಿಂದಲೇ ಆತನಿಗೆ ಕಾಲೇಜಿನಲ್ಲಿ ಪ್ರವೇಶವೂ ದೊರೆಯಿತು. ಅಂತರಕಾಲೇಜು ಬ್ಯಾಸ್ಕೆಟ್‌ಬಾಲ್ ಸ್ಪರ್ಧೆಗಳಲ್ಲಿ ಈತನ ಆಟದ ವೈಖರಿಯನ್ನು ಕಂಡು, ಅಮೇರಿಕಾ ದೇಶದ ತಂಡದಲ್ಲಿ ಆತನನ್ನು ಸೇರಿಸಿಕೊಂಡರು. ಅದರ ನಂತರ ಆತನ

ಕೈಗಳಿಗೆ ವಿಶ್ರಾಂತಿಯೇ ಇರಲಿಲ್ಲ. ಆರು ಸಲ ರಾಷ್ಟ್ರೀಯ ಚಾಂಪಿಯನ್, ಐದು ಬಾರಿ ಅತಿ ಶ್ರೇಷ್ಠ ಆಟಗಾರ ಇತ್ಯಾದಿ ಪ್ರಶಸ್ತಿಗಳೊಂದಿಗೆ, ಆತ ತನ್ನ ಕ್ರೀಡಾ ಜೀವನಕ್ಕೆ ವಿಶ್ರಾಂತಿ ಘೋಷಿಸಿದಾಗ ಇಡೀ ಅಮೇರಿಕಾ ದೇಶವೇ ಕಣ್ಣೀರಿನಿಂದ ಆತನಿಗೆ ಬೀಳ್ಕೊಡುಗೆ ನೀಡಿತು.

ಮೊಟ್ಟಮೊದಲ ಸಲ ಆಟದಲ್ಲಿ ತನ್ನನ್ನು ನಿರಾಕರಿಸಿದಾಗ ತನ್ನ ಹುಡುಕಾಟವನ್ನು ಜೋರ್ಡಾನ್ ಅಲ್ಲಿಗೇ ನಿಲ್ಲಿಸಿ ಬಿಟ್ಟಿದ್ದರೆ, ಇದೆಲ್ಲ ನಡೆಯಲು ಸಾಧ್ಯವೇ ಇರುತ್ತಿರಲಿಲ್ಲ. 'ಜಯಿಸಲು ಯೋಚಿಸುವವರು ಮೊದಲಿಗೆ ಸೋಲುವುದನ್ನೂ ಕಲಿತುಕೊಳ್ಳಬೇಕು' ಎನ್ನುತ್ತಾರೆ ಜೋರ್ಡಾನ್.

ಜುರಾಸಿಕ್ ಪಾರ್ಕ್ ಚಿತ್ರದ ಮೂಲಕ ಜಗತ್ತಿನಾದ್ಯಂತ ಪರಿಚಿತವಾದವರು ಹಾಲಿವುಡ್ ಚಲನಚಿತ್ರ ನಿರ್ಮಾಪಕ ಸ್ಟೀವನ್ ಸ್ಪೀಲ್‌ಬರ್ಗ್. ಅಮೇರಿಕಾದ ಜಗತ್ಪ್ರಸಿದ್ಧವಾದ ಕ್ಯಾಲಿಫೋರ್ನಿಯಾ ಚಲನಚಿತ್ರ ವಿಶ್ವವಿದ್ಯಾಲಯದಲ್ಲಿ ವಿದ್ಯಾಭ್ಯಾಸ ಮಾಡಬೇಕು ಎನ್ನುವುದು ಆತನ ಕನಸು. ಆದರೆ, 'ಚಲನಚಿತ್ರವನ್ನು ಕುರಿತ ಶಿಕ್ಷಣ ಗಳಿಸಲು ಬೇಕಾದ ಅರ್ಹತೆ ಇಲ್ಲ' ಎಂಬ ಕಾರಣದಿಂದ ಮೂರು ಸಲ ಅವರ ಪ್ರವೇಶವನ್ನು ನಿರಾಕರಿಸಲಾಯಿತು. ಇದರಿಂದಾಗಿ ಆತ ಬೇರೊಂದು ಸಾಮಾನ್ಯ ಕಾಲೇಜಿಗೆ ಸೇರಿಕೊಳ್ಳಬೇಕಾಯಿತು. ಕಾಲೇಜಿಗೆ ಸೇರಿದ ಕೆಲ ದಿನಗಳಲ್ಲಿ 'ಯೂನಿವರ್ಸಲ್ ಸ್ಟುಡಿಯೋ' ಎಂಬ ಸಂಸ್ಥೆಯಲ್ಲಿ ತರಬೇತಿ ತೆಗೆದುಕೊಳ್ಳಲು ಅವಕಾಶ ದೊರೆತ ಕೂಡಲೇ ಆತ ತನ್ನ ಕಾಲೇಜು ವ್ಯಾಸಂಗವನ್ನು ನಿಲ್ಲಿಸಿದ.

ಒಂದು ಚಲನಚಿತ್ರವನ್ನು ನಿರ್ಮಿಸುವುದು ಹೇಗೆ ಎಂಬುದನ್ನು ತರಬೇತಿಯಲ್ಲಿ ಕಲಿತುಕೊಂಡ ಮೇಲೆ, ಮೊದಲಿಗೆ ಒಂದು ಸಣ್ಣ ಚಲನಚಿತ್ರವನ್ನು ಆತ ನಿರ್ಮಿಸಿದ. ಯೂನಿವರ್ಸಲ್ ಸ್ಟುಡಿಯೋದ ಮುಖ್ಯಾಧಿಕಾರಿಗಳಿಗೆ ಅದನ್ನು ಹಾಕಿ ತೋರಿಸಬೇಕೆಂದು ಆತ ಬಯಸಿದ. ಅವರುಗಳಾದರೋ, 'ಬೇರೆ ಮಾದರಿಯಲ್ಲಿ ಇದನ್ನು ನಿರ್ಮಿಸಿದರೆ ಮಾತ್ರ ನೋಡುತ್ತೇವೆ' ಎಂದು ನಿರಾಕರಿಸಿ ಬಿಟ್ಟರು. ಹೀಗೆ ಎರಡು ಸಲ ಅವರ ಚಿತ್ರಗಳನ್ನು ನಿರಾಕರಿಸಲಾಯಿತು. ಮೂರನೇ ಸಲ ಆತ ಅದೇ ಚಲನಚಿತ್ರವನ್ನು ಬೇರೊಂದು ಸ್ವರೂಪದಲ್ಲಿ ನಿರ್ಮಿಸಿ ತೆಗೆದುಕೊಂಡು ಬಂದ. 'ಈತ ಮತ್ತೆ ಮತ್ತೆ ತಂದು ನೀಡುತ್ತಿದ್ದಾನಲ್ಲ' ಎಂದು ಬೇಸರದಿಂದಲೇ ಬೇಕಾಬಿಟ್ಟಿಯಾಗಿ ಆತನ ಚಿತ್ರವನ್ನು ಅವರು ವೀಕ್ಷಿಸಲು ಸಮ್ಮತಿಸಿದರು. ಚಿತ್ರ ನೋಡಿದ ಮೇಲೆ ದಿಗ್ಭ್ರಮೆಗೊಂಡ ಅವರು ಆತನ ಜೊತೆ ಏಳು ವರ್ಷಗಳ ಅವಧಿಯವರೆಗಿನ ಒಪ್ಪಂದವನ್ನು ಮಾಡಿಕೊಂಡರು. ಒಬ್ಬ ಜಗತ್ಪ್ರಸಿದ್ಧ ನಿರ್ದೇಶಕ ಹೊರಪ್ರಪಂಚಕ್ಕೆ ಮೊದಲು ಪರಿಚಯವಾದದ್ದು ಹೀಗೇ!

'ಕೆಲವೊಮ್ಮೆ ಒಂದು ಕನಸು ಮೆಲುದನಿಯಲ್ಲಿ ನಿಮ್ಮ ಕಿವಿಗಳ ಬಳಿ ಬಂದು ಮಾತಿಗೆ ತೊಡಗುತ್ತದೆ. ಅದನ್ನು ಎಚ್ಚರಿಕೆಯಿಂದ ಕೇಳಿ, ಜೀವನದಲ್ಲಿ ಮುಂದೆ ಬರಬೇಕು ಎಂದಾದರೆ ಪ್ರತಿದಿನವೂ ನಾವು ಹುಡುಕಾಟದಲ್ಲಿ ತೊಡಗಬೇಕು' ಎನ್ನುತ್ತಾರೆ ಸ್ಪೀಲ್ ಬರ್ಗ್.





ಕಾಲ್ಚೆಂಡಾಟದಲ್ಲಿ ಅತಿ ಹೆಚ್ಚು ಹಣ ಸಂಪಾದಿಸಿದವರು ಎಂದು ಅರ್ಜೆಂಟೈನಾ ದೇಶಕ್ಕೆ ಸೇರಿದ ಲಯನಲ್ ಮೆಸ್ಸಿ ಅವರನ್ನು ಗುರುತಿಸಲಾಗುತ್ತದೆ. ಈಗಲೂ ಕಾಲ್ಚೆಂಡಾಟದಲ್ಲಿ ಅತಿ ಹೆಚ್ಚು ಸಂಬಳ ಪಡೆಯುವವರು ಅವರೇ. ಜಗತ್ತಿನ ಅತಿ ಶ್ರೇಷ್ಠ ಆಟಗಾರನೆಂಬ ಬಿರುದನ್ನು ಐದು ಸಲ ಗಳಿಸಿದವರು ಇವರು. ಆದರೆ, ಈ ಅಂತಸ್ತು ಅಷ್ಟೊಂದು ಸುಲಭವಾಗಿ ಅವರಿಗೆ ದೊರೆತದ್ದೇನೂ ಅಲ್ಲ.

ಶಾಲಾ ದಿನಗಳಿಂದಲೂ ಕಾಲ್ಚೆಂಡು ಮಾತ್ರವೇ ತನಗೆ ಗತಿ ಎಂಬಂತೆ ಅದರಲ್ಲೇ ಮುಳುಗಿದ್ದವರು ಮೆಸ್ಸಿ. 11ನೇ ವಯಸ್ಸಿನಲ್ಲಿ ಶಾಲೆಯ ತಂಡದಿಂದ ಅವರನ್ನು ತೆಗೆದು ಹಾಕಿಬಿಟ್ಟರು. ಅದಕ್ಕೆ ಕಾರಣ ಬಾಲಕ ಮೆಸ್ಸಿ ತುಂಬ ಕುಳ್ಳಗೂ, ಕೃಶವಾಗಿಯೂ ಇದ್ದುದೇ ಆಗಿತ್ತು. ಬೆಳವಣಿಗೆಯ ಹಾರ್ಮೋನಿನ ಕೊರತೆಯ ಕಾರಣದಿಂದ ತನ್ನ ಸಹಪಾಠಿಗಳಿಗಿಂತ ಮೆಸ್ಸಿ ಕುಳ್ಳಗಿದ್ದ. ಇದರಿಂದ ಮನ ನೊಂದ ಆತ, ಪ್ರತಿ ದಿನವೂ ಬೆಳವಣಿಗೆಗೆ ಪೋಷಕವಾಗುವ ಹಾರ್ಮೋನ್ ಇಂಜೆಕ್ಷನ್ ಅನ್ನು ಹಾಕಿಸಿಕೊಳ್ಳಲು ನಿರ್ಧರಿಸಿದ. ನೋವಿನಿಂದ ಮುಕ್ತಿ ಪಡೆಯುವುದಕ್ಕಾಗಿ ಅದನ್ನು ಏಳು ದಿನಗಳು ಒಂದು ಕಾಲಿನಲ್ಲೂ, ಮತ್ತೆ ಏಳು ದಿನಗಳು ಇನ್ನೊಂದು ಕಾಲಿನಲ್ಲೂ ಹಾಕಿಸಿಕೊಳ್ಳಬೇಕಿತ್ತು. ಹೀಗೆ ಆರು ವರ್ಷಗಳ ಕಾಲ ನಿರಂತರವಾಗಿ ಎಡೆಬಿಡದೆ ಇಂಜೆಕ್ಷನ್ ತೆಗೆದುಕೊಂಡ ಕಾರಣದಿಂದಾಗಿ ಆತ ಸಹಜವಾದ ಎತ್ತರಕ್ಕೆ ಬೆಳೆದು, ಮತ್ತೆ ತಂಡದಲ್ಲಿ ಸೇರಿಕೊಂಡ. ನಿರಂತರ ಪ್ರಯತ್ನವೆಂಬುದು ಆತನಿಗೆ ವಿಶ್ವರೂಪದ ಯಶಸ್ಸನ್ನು ನೀಡಿತು.

ಪ್ರಕೃತಿಯೇ ತನಗೆ ಎದುರಾಗಿದ್ದರೂ ಕೂಡ ತನ್ನ ಅವಿರತ ಪ್ರಯತ್ನದ ಮೂಲಕ ಅದನ್ನೂ ಮೀರಿ, ಸಾಧಿಸಿ ತೋರಿಸಿದವರು ಮೆಸ್ಸಿ. 'ಒಂದು ವಿಷಯವನ್ನು ನೀವು ತುಂಬ ಪ್ರೀತಿಸಿದರೆ, ಯಾವ ಬಗೆಯ ತಡೆ ಎದುರಾದರೂ ಅದನ್ನು ಖಂಡಿತ ಪಡೆದುಕೊಳ್ಳಬಹುದು' ಎನ್ನುತ್ತಾರೆ ಮೆಸ್ಸಿ.




# ಹುಡುಕಾಟಕ್ಕೆ ನೆರವಾಗುವ 8 ಗುಣಗಳು!

**ಶಿಕ್ಷಣ, ಕೆಲಸ, ಉದ್ಯಮ, ವ್ಯಾಪಾರ, ಜೀವನ ಹೀಗೆ ಯಾವ ವಿಷಯದಲ್ಲಿ ನಿಮ್ಮ ಹುಡುಕಾಟ ಯಾವ ಬಗೆಯದಾಗಿದ್ದರೂ ಅದನ್ನು ಪಡೆಯಲು ಎಂಟು ಬಗೆಯ ಗುಣಗಳು ಅವಶ್ಯಕ. ಅವುಗಳು ಇದೋ ಇಲ್ಲಿ ನಿಮಗಾಗಿ...**




**1. ಕ್ರಿಯೆಯಲ್ಲಿ ನಿಮ್ಮ ಸಾಮರ್ಥ್ಯ:** ಪ್ರತಿಯೊಬ್ಬರೂ ಯಾವುದೋ ಒಂದು ವಿಷಯದಲ್ಲಿ ಉಳಿದವರಿಗಿಂತ ಹೆಚ್ಚು ಸಮರ್ಥರಾಗಿರುತ್ತಾರೆ. ಇದನ್ನು ಕೆಲವರು ನಂಬದೆಯೂ ಇರಬಹುದು. ಕಾರಣ, ತಮ್ಮ ಸಾಮರ್ಥ್ಯ ಯಾವುದು ಎಂಬುದನ್ನು ಅವರು ಇದುವರೆಗೂ ಕಂಡುಕೊಂಡಿರುವುದೇ ಇಲ್ಲ. ಆ ಪ್ರತ್ಯೇಕ ಸಾಮರ್ಥ್ಯವನ್ನು ಗುರುತು ಹಿಡಿದು, ಅದನ್ನು ತಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಬೇಕು. ಆ ಸಾಮರ್ಥ್ಯಕ್ಕೆ ತಕ್ಕ ಕೆಲಸ ಅಥವಾ ಉದ್ಯಮವನ್ನು ರೂಪಿಸಿಕೊಳ್ಳಬೇಕು. ತಮ್ಮ ಸಾಮರ್ಥ್ಯ ಮತ್ತು ಆಸಕ್ತಿಗೆ ಸಂಬಂಧವೇ ಇಲ್ಲದ ಕ್ಷೇತ್ರದಲ್ಲಿ ಕೆಲಸ ಮಾಡುತ್ತಿದ್ದರೆ ಅದರಲ್ಲಿ ನಿಮ್ಮ ಸಂಪೂರ್ಣ ಸಾಮರ್ಥ್ಯವನ್ನು ಉಪಯೋಗಿಸಲು ಸಾಧ್ಯವಾಗದೇ ಹೋಗಬಹುದು. ಇದರಿಂದ ನಿಮಗೂ ಅಲ್ಲಿ ಗೌರವ ದೊರಕುವುದಿಲ್ಲ.

**2. ಸಾಧ್ಯ ಎನ್ನುವ ನಂಬಿಕೆ :** ನೀವು ಏನನ್ನೇ ಮಾಡುವುದಾಗಿದ್ದರೂ, ‘ಇದು ನನ್ನಿಂದ ಸಾಧ್ಯ’ ಎನ್ನುವ ನಂಬಿಕೆಯೊಂದಿಗೆ ಅದರೊಳಗೆ ಕಾಲಿಡಬೇಕು. ನಿಮ್ಮ ಅಂತರಂಗವೇ ನಿಮ್ಮನ್ನು ಮುನ್ನಡೆಸಬೇಕು. ನಂಬಿಕೆಯೇ ಇಲ್ಲದ ಕಾರ್ಯವಿಧಾನ ಎನ್ನುವುದು, ಸ್ಟೇರಿಂಗ್‌ವ್ಹೀಲ್ ಇಲ್ಲದ ಕಾರಿನಂತೆ. ಅದು ನಿಮ್ಮನ್ನು ಎಲ್ಲಿಗೂ ಕರೆದುಕೊಂಡು ಹೋಗಲಾರದು. ನೀವು ಮಾಡುವ ಕಾರ್ಯದಲ್ಲಿ ‘ಇದು ಸರಿ, ಇದು ತಪ್ಪು’ ಎಂದು ಜಾಗತಿಕ ವಿದ್ಯಮಾನಗಳನ್ನು ಗಮನಿಸಿ ನೋಡಿ ನಿರ್ಧಾರಗಳನ್ನು ತೆಗೆದುಕೊಳ್ಳಬೇಕು. ಗೋಡೆಯ ಮೇಲೆ ಕುಳಿತಿರುವ ಬೆಕ್ಕಿನಂತೆ ಇರುವವರು ಯಾವ ಸ್ಥಳಕ್ಕೂ ಹೋಗುವುದಿಲ್ಲ. ಸರಿಯೋ, ತಪ್ಪೋ, ಯಾವುದೋ ಒಂದು ಕಡೆ ಪ್ರಯಾಣ ಮಾಡಲು ಆರಂಭಿಸಬೇಕು.



**3. ಸಂತೃಪ್ತಿಯಿಂದ ಕಾರ್ಯಗತಗೊಳಿಸುವುದು :** ಓದಿ ಮುಗಿಸಿ, ಕೆಲಸ ಅಥವಾ ಉದ್ಯಮದಲ್ಲಿ ತೊಡಗಿಸಿಕೊಂಡ ಮೇಲೆ ನಮ್ಮ ಜೀವನದಲ್ಲಿ ದೀರ್ಘ ಕಾಲವನ್ನು ಅದಕ್ಕಾಗಿಯೇ ಮೀಸಲಿಡುತ್ತೇವೆ. ವಾರದಲ್ಲಿ ಐದಾರು ದಿನಗಳು ಪೂರ್ಣ ಸಮಯವನ್ನೆಲ್ಲ



ಅದಕ್ಕೇ ಉಪಯೋಗಿಸುತ್ತೇವೆ. ಅದರ ಬಗ್ಗೆಯೇ ಚಿಂತಿಸುತ್ತೇವೆ. ಆದರೆ, ಹಲವರು ಅರ್ಧ ಮನಸ್ಸಿನೊಂದಿಗೆ ಮಾತ್ರವೇ ತಮ್ಮ ಆ ಕೆಲಸಗಳನ್ನು ಮಾಡುತ್ತಾರೆ. ತಾವು ಮಾಡುವ ಕೆಲಸದ ಬಗ್ಗೆ ಅವರಿಗೆ ತೃಪ್ತಿಯೇ ಇರುವುದಿಲ್ಲ. 'ಹೇಗಿದ್ದೀರಿ' ಎಂದು ಸುಮ್ಮನೆ ಕೇಳಿದರೂ ಕೂಡ, 'ಹೇಗೋ ಇದ್ದೇನೆ' ಎಂದು ನಿರಾಸಕ್ತಿಯಿಂದ ಉತ್ತರಿಸುತ್ತಾರೆ. ಕಾರಣ, ಆ ಕೆಲಸವನ್ನು ಅವರು ಮುಖ್ಯವಾದ ಕೆಲಸವೆಂದು ಭಾವಿಸುವುದೇ ಇಲ್ಲ. ಆದಾಯ ದೊರಕುತ್ತದೆ ಎಂಬ ಕಾರಣದಿಂದ ಮಾತ್ರ ಅದನ್ನು ಮಾಡುತ್ತಿದ್ದೇವೆ ಎಂಬುದು ಅವರ ಭಾವನೆಯಾಗಿರುತ್ತದೆ. ಆದರೆ, ಪ್ರತಿಯೊಬ್ಬರ ಗುರುತೂ ಅವರು ಮಾಡುವ ಅವರ ಕೆಲಸವೇ ಆಗಿರುತ್ತದೆ. ಅದೇ ಅವರಿಗೆ ಮರ್ಯಾದೆಯನ್ನೂ ನೀಡುತ್ತದೆ. 'ಇದು ಇಲ್ಲದೇ ಹೋದರೆ ನಾನು ಏನಾಗಿರುತ್ತೇನೆ' ಎಂದು ಯೋಚಿಸಿ ನೋಡಿ. ಖಂಡಿತವಾಗಿಯೂ ಸಂತೃಪ್ತಿಯ ಭಾವ ಮೂಡುತ್ತದೆ.

**4. ಹೊಸತನವೂ ಕಲ್ಪನಾಶಕ್ತಿಯೂ :** ಮನುಷ್ಯರನ್ನು ಪ್ರತ್ಯೇಕವಾಗಿ ತೋರಿಸುವುದು ಅವರಲ್ಲಿನ ಕಲ್ಪನಾ ಶಕ್ತಿಯೇ.



ಪ್ರಾಣಿಗಳು, ಹಕ್ಕಿಗಳು ಎಲ್ಲವೂ ಒಂದೇ ರೀತಿಯ ಜೀವನವನ್ನೇ ಸಾಗಿಸುತ್ತವೆ. ಮನುಷ್ಯರು ಮಾತ್ರ ತಮ್ಮ ಹಿರಿಯರು ಮಾಡಿದ್ದನ್ನು ಹಾಗೆಯೇ ಮಾಡದೆ, ಹೊಸ ಬಗೆಯಲ್ಲಿ ಚಿಂತಿಸಿ, ಅದಕ್ಕಿಂತ ಭಿನ್ನವಾಗಿ ಎಲ್ಲವನ್ನೂ ಮಾಡುತ್ತಿರುತ್ತಾರೆ. ಇಂತಹ ಚಿಂತನಾ ಶಕ್ತಿಯೇ ಮನುಷ್ಯ ಸಂಕುಲವನ್ನು ನಾಗರಿಕರನ್ನಾಗಿಸಿದ್ದು. ಒಂದು ಕೆಲಸವನ್ನು ಮತ್ತೊಬ್ಬರ ಹಾಗೆಯೇ ಮಾಡದೆ, ಪ್ರತ್ಯೇಕ ಸಾಮರ್ಥ್ಯದ ಮೂಲಕ ಹೊಸ ಬಗೆಯಲ್ಲೂ, ವಿಭಿನ್ನವಾಗಿಯೂ ಮಾಡುವವರು ಸುಲಭವಾಗಿ ಜೀವನದಲ್ಲಿ ಮೇಲೆ ಬರಲು ಸಾಧ್ಯವಾಗುತ್ತದೆ. ಗುಂಪಿನಲ್ಲಿ ಒಬ್ಬರಾಗಿರದೆ ಅವರು ಪ್ರತ್ಯೇಕವಾಗಿ ಎದ್ದು ಕಾಣಿಸುತ್ತಾರೆ. ಇಂತಹವರು ತಮ್ಮ ಕಲ್ಪನಾಶಕ್ತಿಯ ಮೂಲಕ ಹಾಸ ಹಾದಿಗಳನ್ನೂ ನಿರ್ಮಿಸುತ್ತಾರೆ.

**5. ಸಮಾಜದೊಂದಿಗೆ ಸೇರಿ ಪ್ರಯಾಣಿಸುವುದು :** ಬಂಧುಗಳು, ಸ್ನೇಹಿತರು, ಪರಿಚಿತರು, ಸಹೋದ್ಯೋಗಿಗಳು, ಅಕ್ಕಪಕ್ಕ ಇರುವವರೇ... ನಮ್ಮ ಸಂತೋಷದ ಮೂಲ. ಎಲ್ಲರ ಜೊತೆಯಲ್ಲೂ ಮಧುರವಾದ ಬಾಂಧವ್ಯವನ್ನು ಬೆಳೆಸಿಕೊಂಡು, ಸಮಾಜದೊಂದಿಗೆ ಬೆರೆತು ಜೀವನ ನಡೆಸಬೇಕು. ಇತರರಿಗೆ ಸಹಾಯ ಮಾಡುವ ಮನುಷ್ಯರಿಗೇ, ಅಗತ್ಯ ಸಮಯದಲ್ಲಿ ಅವರಿಗೆ ಬೇಕಾದ ಸಹಾಯವೂ ದೊರಕುವುದು. ಯಾರ ಜೀವನ ಪ್ರಯಾಣವೂ ಒಂಟಿಯಾಗಿರುವುದಿಲ್ಲ. ಹಲವರ ಸಹಾಯದೊಂದಿಗೆ ಜೀವನದಲ್ಲಿ ಮುಂದೆ ಸಾಗುವಾಗ, ಈ ಜೀವನ ಅರ್ಥಪೂರ್ಣವಾದುದಾಗಿ ತೋರುತ್ತದೆ.



**6.ಸ್ವಗೌರವವನ್ನು ಕಳೆದುಕೊಳ್ಳದಿರುವುದು :** ಕನ್ನಡಿಯೊಳಗೆ ಕಾಣಿಸುವ ತನ್ನ ಆಕಾರವನ್ನು, ತನ್ನ ಪ್ರತ್ಯೇಕತೆಯನ್ನು ಪ್ರೀತಿಸದ ಮನುಷ್ಯರು ಸಂತೋಷವಾಗಿಯೂ, ಅರ್ಥಪೂರ್ಣವಾಗಿಯೂ ಜೀವನ ನಡೆಸಲು ಸಾಧ್ಯವೇ ಇಲ್ಲ. ತುಂಬಾ ಜನರು ತಮ್ಮ ಬಗ್ಗೆ ತಪ್ಪಾಗಿಯೇ ಯೋಚಿಸುತ್ತಾರೆ, ತಪ್ಪಾಗಿಯೇ ನಿರ್ಣಯಗಳನ್ನು ತೆಗೆದುಕೊಳ್ಳುತ್ತಾರೆ. ತಮ್ಮ ರೂಪದಲ್ಲಿ ಕಾಣಿಸುವ ಕೊರತೆಗಳು, ತಮ್ಮ ಬಲಹೀನತೆಗಳು, ತಾವು ಕಲಿತುಕೊಳ್ಳದೆ ಹೋದ ವಿಷಯಗಳು ಹೀಗೆ ನಕಾರಾತ್ಮಕ ಚಿಂತನೆಯನ್ನೇ ಮಾಡುತ್ತಿರುತ್ತಾರೆ. ತಮ್ಮ ಸಾಮರ್ಥ್ಯ ಯಾವುದು ಎಂಬುದನ್ನು ಅವರು ಅರಿತುಕೊಳ್ಳುವುದೇ ಇಲ್ಲ. ಅದನ್ನು ಕುರಿತ ಹೆಮ್ಮೆಯೂ ಅವರಲ್ಲಿರುವುದಿಲ್ಲ. ಅದಕ್ಕಾಗಿ ಕೃತಜ್ಞತೆ–ಯ ಭಾವವೂ ಅವರಲ್ಲಿರುವುದಿಲ್ಲ. ಸಕಾರಾತ್ಮಕ ಭಾವನೆಯೊಂದಿಗೆ ಯಾವುದರಲ್ಲಿ ತೊಡಗಿಸಿಕೊಂಡರೂ, ಮನಸ್ಸಿನ ತುಂಬ ಉತ್ಸಾಹ ತುಂಬಿರುತ್ತದೆ. ಅದೇ ನಮ್ಮನ್ನು ಸಾಧಿಸುವಂತೆ ಪ್ರೇರೇಪಿಸುತ್ತದೆ.



**7. ಸಾಗುವ ಹಾದಿಯಲ್ಲಿ ಸಂತೋಷ ಕಾಣುವುದು :** ಒಂದು ಪ್ರವಾಸಕ್ಕೆ ಹೋಗುತ್ತೇವೆ ಎಂದಿಟ್ಟುಕೊಳ್ಳಿ. ಆ ಸ್ಥಳಕ್ಕೆ ಹೋಗುವುದು ಮಾತ್ರವೇ ಸಂತೋಷ ನೀಡುವುದಿಲ್ಲ. ಮನೆಯಿಂದ ಹೊರಟು ಆ ಸ್ಥಳವನ್ನು ತಲುಪುವವರೆಗೆ ಮಾಡುವ ಮಾರ್ಗ ಮಧ್ಯದ



ಪ್ರಯಾಣವೂ ನಮಗೆ ಸಂತೋಷವನ್ನು ನೀಡುತ್ತದೆ. ಎಲ್ಲಾ ವಿಷಯಗಳಿಗೂ ನಾವು ಇದನ್ನು ಅನ್ವಯಿಸಿಕೊಳ್ಳಬೇಕು. ಹೊಸದಾಗಿ ಒಂದು ವಿಷಯವನ್ನು ಕಲಿತುಕೊಳ್ಳುತ್ತೀರಿ ಎಂದಿಟ್ಟುಕೊಳ್ಳಿ. ಅದರಲ್ಲಿ ಪೂರ್ಣ ಪರಿಣತಿಯನ್ನು ಪಡೆದುಕೊಂಡ ನಂತರವಷ್ಟೇ ನಿಮಗೆ ಸಂತೋಷ ದೊರಕುತ್ತದೆ ಎಂದುಕೊಳ್ಳಬೇಡಿ. ದಿನದಿನವೂ ಅದನ್ನು ಕಲಿಯುವಾಗಲೂ ಕೂಡ ನಿಮ್ಮೊಳಗೆ ಸಂತೋಷ ಮೂಡಬೇಕು. ಈ ಸಂತೋಷಕರವಾದ ಮನಸ್ಥಿತಿಯೇ ಯಾವುದರಲ್ಲೇ ಆದರೂ ನಿಮ್ಮ ಗುರಿಯನ್ನು ನೀವು ಬೇಗ ಮುಟ್ಟಲು ನಿಮಗೆ ನೆರವಾಗುತ್ತದೆ.


**8. ಜೀವನದ ಅರ್ಥವನ್ನು ತಿಳಿದುಕೊಳ್ಳುವುದು :** ಒಬ್ಬ ವ್ಯಕ್ತಿಯ ಜೀವನದಲ್ಲಿ ಎರಡು ದಿನಗಳು ತುಂಬಾ ಮುಖ್ಯವಾದವು. ಅವುಗಳಲ್ಲಿ ಒಂದು ಹುಟ್ಟಿದ ದಿನ. ನಾವು ಯಾವ ಕಾರಣಕ್ಕಾಗಿ ಜನಿಸಿದ್ದೇವೆ ಎನ್ನುವುದನ್ನು ಸರಿಯಾಗಿ ಅರ್ಥ ಮಾಡಿಕೊಳ್ಳುವ ದಿನ ಇನ್ನೊಂದು ಮುಖ್ಯವಾದ ದಿನವಾಗಿರುತ್ತದೆ. ಏನೋ ಒಂದನ್ನು ಮಾಡಿ, ಹೇಗೋ ಜೀವನ ಮುಗಿಸುವವರಿಗೆ ಯಾವುದೇ ಪ್ರತ್ಯೇಕ ಗುರುತೂ ಇರುವುದಿಲ್ಲ. ಅವರು ಹೀಗೆ ಯಾವುದನ್ನೂ ಹುಡುಕುವುದೂ ಕೂಡ ಇಲ್ಲ. 'ಇವರು ಹೀಗೆ ಜೀವಿಸುತ್ತಿದ್ದಾರೆ' ಎಂದು ಇತರರಿಗೆ ಉದಾಹರಣೆಯಾಗಿ ತೋರಿಸಿ ಹೇಳುವ ಹಾಗೆ ಬದುಕುವುದೇ ಅರ್ಥಪೂರ್ಣವಾದ ಬದುಕು. 'ಇದನ್ನು ಸಾಧಿಸುವುದಕ್ಕಾಗಿಯೇ ನಾವು ಜನಿಸಿದ್ದೇವೆ' ಎಂಬ ಹಾಗೆ ಯಾವುದೋ ಒಂದು ವಿಷಯವನ್ನು ಸಾಧಿಸಿ ಯಶಸ್ಸುಗಳಿಸಿರಿ. ಅದರಲ್ಲಿ ದೊರಕುವ ಮಾನಸಿಕ ತೃಪ್ತಿ ಬೇರಾವುದರಲ್ಲೂ ದೊರಕುವುದಿಲ್ಲ. ●




## ಕಲಿತುಕೊಳ್ಳುತ್ತೇವೆಯೇ?

ನಮಗೆ ಏನು ನಡೆಯುತ್ತಿದೆ ಎಂಬುದನ್ನು ಅವಲಂಬಿಸಿ ನಮ್ಮ ಸಂತೋಷ ಇರುವುದಿಲ್ಲ. ಆ ಸಂದರ್ಭದಲ್ಲಿ ನಾವು ಹೇಗೆ ರಿಯಾಕ್ಟ್ ಮಾಡುತ್ತೇವೆ ಎಂಬುದನ್ನು ಅವಲಂಬಿಸಿಯೇ ನಮಗೆ ಸಂತೋಷವೋ, ಶೋಕವೋ ಏರ್ಪಡುತ್ತದೆ. ಔಷಧಿಗಳ ಹಾಗೆ ಸಂತೋಷಕ್ಕೆ ಎಕ್ಸ್‌ಪಯರಿ ಡೇಟ್ ಇರುವುದಿಲ್ಲ. ಯಾವುದೋ ಒಂದು ಸಂಗತಿ ತಪ್ಪಾಗಿ ನಡೆದ ಮಾತ್ರಕ್ಕೆ, ನಮ್ಮನ್ನೋ ಇತರರನ್ನೋ ಅದಕ್ಕೆ ಗುರಿಯಾಗಿಸಿ ತಪ್ಪಾಗಿಯೇ ಮಾತನಾಡಿಕೊಂಡಿರುವುದರಲ್ಲಿ ಯಾವ ಅರ್ಥವೂ ಇಲ್ಲ. 'ಇದರಿಂದ ನಾನು ಏನು ಕಲಿತುಕೊಂಡೆ? ನಂತರ ನಾನು ತೆಗೆದುಕೊಳ್ಳಬೇಕಾದ ಸರಿಯಾದ ನಿರ್ಣಯ ಯಾವುದು?' ಎಂದು ನಮ್ಮನ್ನು ನಾವೇ ಕೇಳಿಕೊಂಡರೆ ಸಂತೋಷವನ್ನು ಮತ್ತೆ ನಾವು ವಶಪಡಿಸಿಕೊಳ್ಳಬಹುದು!

ನಾವು ತೆಗೆದುಕೊಳ್ಳುವ ನಿರ್ಣಯಗಳೇ ನಮ್ಮ ಹಾದಿಗಳನ್ನು ತೀರ್ಮಾನಿಸಬೇಕು. ಇತರರ ಕೆಲಸಗಳನ್ನು ನೋಡಿಯೋ, ಇತರರ ನಿರೀಕ್ಷೆಗಳನ್ನು ಆಧರಿಸಿಯೋ ನಮ್ಮ ಕಾರ್ಯವಿಧಾನವನ್ನು ರೂಪಿಸಿಕೊಳ್ಳಬಾರದು. ನಮ್ಮನ್ನು ಅಳೆಯುವ ಅಳತೆಗೋಲು ಇತರರ ಕೈಗಳಲ್ಲಿ ಇಲ್ಲ. ನಮಗೆ ಎಂತಹ ಜೀವನ ಬೇಕು ಎನ್ನುವುದನ್ನು ನಾವೇ ನಿರ್ಣಯಿಸಿಕೊಳ್ಳಬೇಕು. ಆ ನಿರ್ಣಯ ಸರಿಯಾಗಿದ್ದಲ್ಲಿ ಸಂತೋಷವೂ ನಿರಂತರವಾಗಿರುತ್ತದೆ.





## ಸಂತೋಷವನ್ನು ಹುಡುಕಬೇಕೇ

ಪ್ರತಿಯೊಬ್ಬರ ಪ್ರಯಾಣವೂ ಸಂತೋಷವನ್ನು ಹುಡುಕುವುದೇ ಆಗಿರುತ್ತದೆ. ಪರೀಕ್ಷೆಯಲ್ಲಿ ಒಳ್ಳೆಯ ಅಂಕಗಳನ್ನು ಗಳಿಸಿದರೆ, ಒಳ್ಳೆಯ ಕಾಲೇಜಿನಲ್ಲಿ ಪ್ರವೇಶ ದೊರಕಿದರೆ, ದೊಡ್ಡ ಸಂಸ್ಥೆಯೊಂದರಲ್ಲಿ ಕೆಲಸ ದೊರಕಿದರೆ, ಸರಿಯಾದ ಜೀವನ ಸಂಗಾತಿ ದೊರೆತರೆ... ಹೀಗೆ ಸಂತೋಷದ ಕಾರಣಗಳನ್ನು ಹಲವರು ತಮ್ಮ ಜೀವನದಲ್ಲಿ ಪೇರಿಸಿಕೊಂಡೇ ಹೋಗುತ್ತಾರೆ. ಯಾವುದಾದರೂ ಒಂದು ವಸ್ತುವೋ, ಯಾರೋ ಒಬ್ಬ ವ್ಯಕ್ತಿಯೋ ತಮ್ಮ ಜೀವನದಲ್ಲಿ ಸಂತೋಷ ತರುತ್ತಾರೆ ಎಂದು ಅವರು ಭಾವಿಸುತ್ತಾರೆ.

ಆದರೆ, ಯಾವುದೇ ಕಾರಣವೂ ಇಲ್ಲದೆ ಯಾವಾಗಲೂ ಸಂತೋಷವಾಗಿರಲು ಅಭ್ಯಾಸ ಮಾಡಿಕೊಂಡಿರುವಂತಹ ವ್ಯಕ್ತಿಗಳು ಸಂತೋಷವನ್ನು ಹುಡುಕಬೇಕಾದ ಅಗತ್ಯವೇ ಇರುವುದಿಲ್ಲ. ಏನು ನಡೆದರೂ ಅದನ್ನು ಸಹಜವಾಗಿ ಒಪ್ಪಿಕೊಳ್ಳುವ ಮನಸ್ಸು ಇದ್ದರೆ, ಮಾನಸಿಕ ಒತ್ತಡ ಏರ್ಪಡುವುದಿಲ್ಲ. ಒಳ್ಳೆಯದು ನಡೆದರೆ ಸಂತೋಷ ದೊರಕುತ್ತದೆ. ತಪ್ಪಾಗಿ ನಡೆದರೆ ಅದನ್ನು ತಿದ್ದಿಕೊಳ್ಳುವ ಬೇಕಾದ ಮಾರ್ಗ ಕಾಣಿಸುತ್ತದೆ, ಅಷ್ಟೇ!

## ಮುಂದೆ ಹಾಕಬೇಡಿ!

ಕ್ರಿಕೆಟ್ ಆಡಲು ನಿಮಗೆ ಆಸೆಯೇ? ವಯಸ್ಸಿನ ಬಗ್ಗೆ ಯಾವುದೇ ಸಂಕೋಚವನ್ನೂ ಇಟ್ಟುಕೊಳ್ಳದೆ ಪ್ರಯತ್ನ ಮಾಡಿ ನೋಡಿ. ಚಿತ್ರ ಬರೆಯಬೇಕೆನ್ನಿಸುತ್ತಿದೆಯೇ? ಇಂದಿನಿಂದಲೇ ಅಭ್ಯಾಸ ಮಾಡಲು ಆರಂಭಿಸಿ ಬಿಡಿ. ಪ್ರವಾಸ ಹೋದರೆ ಚೆನ್ನಾಗಿರುತ್ತದೆ ಎನ್ನಿಸುತ್ತಿದೆಯೇ? ಕೂಡಲೇ ಹೊರಟು ಬಿಡಿ. ಬದುಕಿನಲ್ಲಿ ಒಂದು ನಿರ್ದಿಷ್ಟ ವಯಸ್ಸಿನ ನಂತರವೋ, ನಿವೃತ್ತಿಯ ನಂತರವೋ ಮಾತ್ರವೇ ಕೆಲವು ಕೆಲಸಗಳನ್ನು ಮಾಡಿ ಸಂತೋಷ ಅನುಭವಿಸಲು ಸಾಧ್ಯ ಎಂದು ಹಲವರು ಭಾವಿಸುತ್ತಾರೆ. ಆದರೆ, ಸಂತೋಷವನ್ನು ನೀಡುವ ಯಾವ ಕಾರ್ಯವನ್ನೇ ಆಗಲಿ ಮುಂದೆ ತಳ್ಳಿ ಹಾಕಬಾರದು.

ಸಂತೋಷ ಎನ್ನುವುದು ಹಾರಿ ಹೋಗುವ ಚಿಟ್ಟೆಯಂತಹುದು. ನೀವು ಅದನ್ನು ಹಿಡಿಯಲು ಹಿಂಬಾಲಿಸಿದರೆ, ಅದು ಅಲ್ಲಿಂದ ಹಾರುತ್ತಾ ಮುಂದೆ ಸಾಗುತ್ತಲೇ ಇರುತ್ತದೆ. ಸುಮ್ಮನೆ ನಿಂತು ಅದು ಹತ್ತಿರ ಬರುವುದನ್ನು ವೀಕ್ಷಿಸುತ್ತಿದ್ದರೆ, ಅದು ನಿಮ್ಮ ತೋಳುಗಳ ಮೇಲೇ ಬಂದು ಕೂರುತ್ತದೆ.



## ನೀವೇ ಜವಾಬ್ದಾರಿ!

ನಿಮ್ಮ ಜೀವನದಲ್ಲಿ ಸಂತೋಷ ಎನ್ನುವುದು ಬೇರೆ ಯಾರಿಂದಲೋ ದೊರಕುವುದಿಲ್ಲ. ಅದಕ್ಕೆ ಸಂಪೂರ್ಣ ಜವಾಬ್ದಾರಿ ನೀವೇ ಆಗಿರುತ್ತೀರಿ. ಎಷ್ಟೆಷ್ಟೋ ಬಗೆಯ ಆಹಾರಗಳು ದೊರೆಯುತ್ತದೆಯಾದರೂ, ಅವುಗಳಲ್ಲಿ ನಮಗೆ ಇಷ್ಟವಾದ ಆಹಾರವನ್ನು ಮಾತ್ರವೇ ನಾವು ಹುಡುಕಿಕೊಂಡು ಹೋಗಿ, ಆಯ್ಕೆ ಮಾಡಿಕೊಂಡು ತಿನ್ನುತ್ತೇವಲ್ಲವೇ!? ಆಹಾರದ ಹಾಗೆಯೇ ಭಾವನೆಗಳನ್ನು ಕೂಡ ನಾವು ಸರಿಯಾಗಿ ಆಯ್ಕೆ ಮಾಡಿಕೊಳ್ಳಬೇಕು. ನಮ್ಮ ಸುತ್ತಲೂ ಏನು ನಡೆದರೂ, 'ಸಂತೋಷವನ್ನು ಮಾತ್ರವೇ ನನ್ನೊಳಗೆ ತುಂಬಿಕೊಳ್ಳುತ್ತೇನೆ' ಎಂದು ನಿರ್ಧಾರ ತೆಗೆದುಕೊಳ್ಳಿ.

ಶೋಕವನ್ನು ಹುಡುಕಿಕೊಂಡು ಹೋಗಿ ಅದನ್ನು ಸ್ವೀಕಾರ ಮಾಡಿಕೊಳ್ಳುವುದು ಹಲವರ ಸಹಜ ಸ್ವಭಾವವೇ ಆಗಿರುತ್ತದೆ. ಇದು ಒಂದು ಬಗೆಯ ರೋಗ. ಜೀವನವಿಡೀ ಸಂತೋಷದಿಂದ ಇದ್ದವರೂ ಇಲ್ಲ, ಜೀವನವಿಡೀ ಶೋಕದಿಂದ ಇದ್ದವರೂ ಇಲ್ಲ. ಎಂತಹ ಪರಿಸ್ಥಿತಿಯಲ್ಲೇ ಆದರೂ ಸಂತೋಷದಿಂದ ಇರಲು ಯಾವುದಾದರೂ ಒಂದು ಕಾರಣವನ್ನು ಕಂಡು ಹಿಡಿದು ಬಿಟ್ಟರೆ ಸಾಕು. ಇತರರ ಬಳಿ ಏನನ್ನಾದರೂ ಕೇಳಲು ಕೆಲವೊಮ್ಮೆ ನಾವು ತುಂಬಾ ಸಂಕೋಚ ಪಡುತ್ತೇವೆ. ಆದರೆ ನಮ್ಮ ಸಂತೋಷವನ್ನು ಯಾರ ಬಳಿಯೂ ನಾವು ಕೇಳಬೇಕಾಗಿಲ್ಲ.

## ಸಂತೋಷದ ಗುರುತು ಯಾವುದು?

ಹಣ ಮಾತ್ರವೇ ಸಂತೋಷವನ್ನು ನೀಡುತ್ತದೆ ಎಂದು ಹಲವರು ಭಾವಿಸುತ್ತಾರೆ. ಅದಕ್ಕಾಗಿಯೇ ಹಣದ ಹಿಂದೆ ಓಡುತ್ತಾರೆ. ಸಾಕಷ್ಟು ಹಣ ಸೇರಿಸಬೇಕೆಂದು ಹಗಲಿರುಳೂ ದುಡಿಯುತ್ತಾರೆ. ದಿನವೂ ಹಲವು ಗಂಟೆಗಳ ಕಾಲ ಕಷ್ಟಪಟ್ಟು ದುಡಿದು ದೇಹವನ್ನು ದಂಡಿಸುತ್ತಾರೆ. ಅವರಿಗೆ ಮನರಂಜನೆಗೆ ಸಮಯವಿರುವುದಿಲ್ಲ, ಗೆಳೆಯರೊಂದಿಗೆ ಮಾತನಾಡಲು ಸಮಯವಿರುವುದಿಲ್ಲ, ಅವರು ಕುಟುಂಬದ ಸದಸ್ಯರ ಜೊತೆಗೆ ಸಮಯ ಕಳೆಯುವುದಿಲ್ಲ. ಇವುಗಳೂ ಕೂಡ ಸಂತೋಷ ನೀಡುತ್ತವೆ ಎಂಬುದು ಅವರಿಗೆ ಅರ್ಥವಾಗುವುದೂ ಇಲ್ಲ. ಸಾಕಷ್ಟು ಹಣ ಸೇರಿದರೆ ಅದರೊಂದಿಗೇ ಸಂತೋಷವೂ ಬರುತ್ತದೆ ಎಂದು ಅವರು ಭಾವಿಸುತ್ತಾರೆ. ಆದರೆ, 'ಸಾಕಷ್ಟು ಹಣ' ಎಂದರೆ ಎಷ್ಟು ಎಂಬುದು ಅವರಿಗೇ ತಿಳಿದಿರುವುದಿಲ್ಲ!

ಒಂದು ಹಂತದಲ್ಲಿ ದೇಹದ ಆರೋಗ್ಯ ಕೆಟ್ಟು, ಗೆಳೆಯರನ್ನು ಕಳೆದುಕೊಂಡು, ಒಂಟಿತನದಲ್ಲಿ ಕೊರಗುವಾಗ ತಾವು ಕಳೆದುಕೊಂಡ ಸಂತೋಷದ ಕ್ಷಣಗಳು ಅವರಿಗೆ ಅರ್ಥವಾಗುತ್ತವೆ. ಆದರೆ ಅಷ್ಟು ಹೊತ್ತಿಗೆ ಸಮಯ ಮೀರಿ ಹೋಗಿರುತ್ತದೆ.





## ಯಾವುದರಲ್ಲಿ ಸಂತೋಷ ದೊರಕುತ್ತದೆ?

ಪ್ರತಿಯೊಬ್ಬರ ಸಂತೋಷವೂ ಬೇರೆ ಬೇರೆ ವಿಷಯಗಳಲ್ಲಿ ಅಡಗಿರುತ್ತದೆ. ಕೆಲವರಿಗೆ ತಮ್ಮ ಕುಟುಂಬದ ಸದಸ್ಯರ ಮುಖದಲ್ಲಿ ನಗೆಯನ್ನು ಕಂಡರೆ ಸಂತೋಷ. ಕೆಲವರಿಗೆ ಇತರರು ತಮಗೆ ಗೌರವ ನೀಡಿದರೆ ಸಂತೋಷ. ಕೆಲವರಿಗೆ ಅನುಕೂಲಕರವಾದ ಜೀವನ ನಡೆಸುವುದರಲ್ಲಿ ಸಂತೋಷ. ಕೆಲವರಿಗೆ ಔತಣ ಸೇವಿಸಿದರೆ ಸಂತೋಷ. ಕೆಲವರಿಗೆ 10 ರೂಪಾಯಿ ಆದಾಯ ದೊರೆತರೂ ಸಂತೋಷ. ಪ್ರತಿಯೊಬ್ಬರಿಗೂ ಸಂತೋಷದ ಕಾರಣಗಳು ಬದಲಾಗುತ್ತಿರುತ್ತವೆ. ಒಟ್ಟಿನಲ್ಲಿ ಎಲ್ಲರೂ ಪಡೆಯಲು ಬಯಸುವುದು ಸಂತೋಷವನ್ನೇ!

ಸಂತೋಷ ಎನ್ನುವುದು ಹುಡುಕಿಕೊಂಡು ಹೋಗಿ ಪಡೆದುಕೊಳ್ಳಬೇಕಾದ ವಸ್ತು ಅಲ್ಲ. ಅದನ್ನು ಹುಡುಕಾಡುವ ಪ್ರಯಾಣವೂ ಕೂಡ ಸಂತೋಷಕರವಾದುದೇ. 'ಸಂಗೀತ ಎಂದರೆ ಕೇವಲ ಧ್ವನಿ ಮಾತ್ರ ಅಲ್ಲ, ಧ್ವನಿಗಳ ನಡುವೆ ಸ್ಥಿರತೆಯನ್ನು ಪಡೆದುಕೊಳ್ಳುವ ಮೌನವೂ ಸಂಗೀತವೇ' ಎಂದು ಪ್ರಸಿದ್ಧ ಗಾಯಕರೊಬ್ಬರು ಹೇಳಿದ್ದಾರೆ. ಹಾಗೆಯೇ ನೋವನ್ನು ಉಂಟು ಮಾಡುವ ಎರಡು ಸಮಸ್ಯೆಗಳ ನಡುವಿನ ಅಂತರದ ತುಂಬ ಸಂತೋಷವೇ ತುಂಬಿಕೊಂಡಿದೆ. ನಾವೇ ಅದನ್ನು ಅರ್ಥ ಮಾಡಿಕೊಳ್ಳುವುದಿಲ್ಲ. ●

# ಶಾಂತಿಯನ್ನು ಹುಡುಕಿರಿ!



ಯಶಸ್ವಿಯಾಗಿ ವ್ಯಾಪಾರವನ್ನು ನಡೆಸಿಕೊಂಡು ಬರುತ್ತಿದ್ದ ಒಬ್ಬ ಯುವಕ. ಅವನಿಗೆ ದಿಢೀರನೆ ಒಂದು ಬಿಕ್ಕಟ್ಟು ಎದುರಾಯಿತು. ಅವನೊಳಗೆ ಕೋಪವೂ ಬೇಸರವೂ ತುಂಬಿಕೊಂಡಿತು. ಕಛೇರಿಯಲ್ಲಿ ಕೆಲಸ ಮಾಡುತ್ತಿದ್ದ ಎಲ್ಲ ನೌಕರರ ಮೇಲೂ ಸುಮ್ಮಸುಮ್ಮನೇ ಹರಿಹಾಯ್ದ. ಮನೆಗೆ ಬಂದ ಮೇಲೆ ಮನೆಯಲ್ಲದ್ದ ಎಲ್ಲರ ಮೇಲೂ ಅದೇ ಕೋಪ ಪ್ರದರ್ಶಿಸಿದ. 'ಏಕೆ ಹೀಗೆ ಅನವಶ್ಯಕವಾಗಿ ಕೋಪ ಮಾಡಿಕೊಳ್ಳುತ್ತಿದ್ದೀರಿ?' ಎಂದು ಕೇಳಿದರೆ ಅದಕ್ಕೂ ಕೋಪಿಸಿಕೊಂಡ.

ಎಲ್ಲರೂ ತನಗೆ ವಿರುದ್ಧವಾಗಿ ಕೆಲಸ ಮಾಡುತ್ತಿರುವುದಾಗಿ ಅವನು ಭಾವಿಸಿದ. ಕೋಟೆಯನ್ನು ಆಕ್ರಮಿಸಲು ಶತ್ರುಗಳು ಬಂದಾಗ ಎಲ್ಲ ಬಾಗಿಲುಗಳನ್ನೂ ಮುಚ್ಚಿಕೊಳ್ಳುವಂತೆ ತನ್ನ ಸುತ್ತಲೂ ತಾನೇ ಬೇಲಿಯನ್ನು ನಿರ್ಮಿಸಿಕೊಂಡ. ಇದರಿಂದ ಅವನಿಗೆ ವ್ಯಾಪಾರದಲ್ಲಿ ಇನ್ನೂ ಹೆಚ್ಚಿನ ನಷ್ಟವಾಯಿತು. ಮನೆಯಲ್ಲೂ ನೆಮ್ಮದಿ ದೊರಕಲಿಲ್ಲ.

ಕಡೆಯಲ್ಲಿ ಒಬ್ಬ ಮನೋವೈದ್ಯರ ಬಳಿಗೆ ಹೋಗಿ ಸಲಹೆ ಕೇಳಿದ. 'ನೀವು ನಿಮ್ಮ ಮನಸ್ಸಿನೊಳಗೇ ನಕಾರಾತ್ಮಕ ಚಿಂತನೆ ಮಾಡುವುದನ್ನು ಮೊದಲಿಗೆ ಬಿಟ್ಟುಬಿಡಿ. ಎಂತಹ ಪರಿಸ್ಥಿತಿಯಲ್ಲೇ ಆದರೂ ಮನಸ್ಸಿನಲ್ಲಿ ಉಲ್ಲಾಸ ತುಂಬಿರಲಿ. ನಿಮ್ಮ ಸುತ್ತಲೂ ಇರುವ ಸಂತೋಷವನ್ನು ಮೊದಲು ಅನುಭವಿಸಿ. ನಿಮ್ಮ ಜೊತೆಯಲ್ಲಿರುವವರಲ್ಲಿ ಸಂತೋಷವನ್ನು ಹರಡಿ. ನಿಮಗೆ ನಡೆಯುವ ಎಲ್ಲವನ್ನೂ ಶಾಂತವಾಗಿ ಯೋಚಿಸಿ ನೋಡಿ. ಯಾರು ಏನೇ ಹೇಳಿದರೂ ಅದನ್ನು ಸರಿಯಾಗಿ ಪೂರ್ಣವಾಗಿ ಅರ್ಥ ಮಾಡಿಕೊಂಡು ನಂತರ ನಿಮ್ಮ ಅಭಿಪ್ರಾಯವನ್ನು ತಿಳಿಸಿ. ನಿಮಗೆ ದೊರಕಿರುವ ಎಲ್ಲವುಗಳಿಗಾಗಿ ಕೃತಜ್ಞತೆಯಿಂದಿರಿ. ಎಲ್ಲವೂ ಬದಲಾಗುತ್ತದೆ' ಎಂದು ಅವರು ಅವನಿಗೆ ಸಲಹೆ ನೀಡಿದರು.

ಆ ಯುವಕನೂ ಇವೆಲ್ಲವನ್ನೂ ಬದುಕಿನಲ್ಲಿ ಅಳವಡಿಸಿಕೊಂಡು, ಅನುಸರಿಸತೊಡಗಿದ. ಒಂದೇ ತಿಂಗಳಿನಲ್ಲಿ ಅವನಲ್ಲಿ ಬದಲಾವಣೆ ಕಾಣಿಸಿತು. ವ್ಯಾಪಾರದಲ್ಲಿ ಲಾಭ ದೊರಕತೊಡಗಿತು. ಅವನ ಕುಟುಂಬದಲ್ಲೂ ಮತ್ತೆ ಸಂತೋಷ ತುಂಬಿಕೊಂಡಿತು. ನಕಾರಾತ್ಮಕ ಚಿಂತನೆಗಳನ್ನೆಲ್ಲ ದೂರ ತಳ್ಳಿ ಬಿಟ್ಟು, ಮನಸ್ಸಿನೊಳಗೆ ಶಾಂತಿಯನ್ನೂ ಸಂತೋಷವನ್ನೂ ನಿರಂತರವಾಗಿಟ್ಟುಕೊಳ್ಳುವುದು ನೆಮ್ಮದಿಯನ್ನು ನೀಡುತ್ತದೆ. ಹೀಗೆ ಶಾಂತಿಯನ್ನು ಹುಡುಕಲು ಯಾವ್ಯಾವ ದಾರಿಗಳು ಇವೆ?

- ನಿಮ್ಮನ್ನು ಮೊದಲು ಸರಿಯಾಗಿ ಅರ್ಥ ಮಾಡಿಕೊಳ್ಳಿ. ನೀವು ಯಾವುದನ್ನೆಲ್ಲ ಗೌರವಿಸುತ್ತೀರಿ, ನಿಮ್ಮ ಗುರಿಗಳು ಯಾವ್ಯಾವುವು? ಯಾವುದೆಲ್ಲ ನಿಮಗೆ ಸಂತೋಷವನ್ನು ನೀಡುತ್ತದೆ ಇತ್ಯಾದಿಗಳನ್ನೆಲ್ಲ ಗುರುತಿಸಿಟ್ಟುಕೊಳ್ಳುವುದು ತುಂಬಾ ಮುಖ್ಯ. ಆ ಸಂಗತಿಗಳೇ ನಿಮಗೆ ಶಾಂತಿಯನ್ನೂ ನೆಮ್ಮದಿಯನ್ನೂ ನೀಡುತ್ತವೆ.

- ಯಾವುದಾದರೂ ಸಮಸ್ಯೆಗಳು ಮನಸ್ಸಿನೊಳಗೆ ಆತಂಕವನ್ನು ತುಂಬಿದಾಗ, ಧ್ಯಾನ, ಯೋಗ, ಶಾಂತವಾಗಿ ವಾಕಿಂಗ್ ಹೋಗುವುದು, ಹಾಸ್ಯ ಕಾರ್ಯಕ್ರಮಗಳನ್ನು ನೋಡುವುದು, ನಿಮ್ಮೊಳಗೆ ಉತ್ಸಾಹವನ್ನು ತುಂಬುವ ಗೆಳೆಯರ ಜೊತೆ ಮಾತನಾಡುವುದು... ಇತ್ಯಾದಿಗಳ ಮೂಲಕ ನಿಮ್ಮ ಮನಸ್ಸನ್ನು ಬದಲಾಯಿಸಿ.

- ಸಮಸ್ಯೆಗಳನ್ನು ನೆನಪಿಸಿಕೊಂಡೇ ನಿದ್ರೆ ಮಾಡಲು ಹೋಗಬೇಡಿ. ಅವುಗಳಿಗಿರುವ ಪರಿಹಾರದ ಮಾರ್ಗಗಳು ಯಾವ್ಯಾವುದು ಎಂದು ಯೋಚಿಸಿ. ಪರಿಹಾರದ ಮಾರ್ಗ ಕಾಣಿಸಿದ ಮೇಲೆ ನಿದ್ರೆಯೂ ಶಾಂತಿಯೂ ತಾನಾಗಿಯೇ ಬರುತ್ತದೆ.

- ಸಂಕಟಕರವಾದ ಪರಿಸ್ಥಿತಿಗಳಲ್ಲೂ ನಿರ್ಭಯವಾಗಿ ಸತ್ಯವನ್ನು ಮಾತ್ರವೇ ಮಾತನಾಡುವುದು ಕೆಲವೊಮ್ಮೆ ತಾತ್ಕಾಲಿಕವಾದ ಸಮಸ್ಯೆಗಳನ್ನು ನಮ್ಮ ಮುಂದೆ ತಂದೊಡ್ಡಬಹುದು. ಆದರೆ, ನಿರಂತರವಾಗಿ ನಿಮಗೆ ಅದು ಒಳಿತನ್ನೇ ಉಂಟು ಮಾಡುತ್ತದೆ. 'ಇವರು ಯಾವಾಗಲೂ ಪ್ರಾಮಾಣಿಕವಾಗಿ ನಡೆದುಕೊಳ್ಳುತ್ತಾರೆ' ಎಂಬ ಗುರುತನ್ನೂ ಅದು ನಿಮಗೆ ನೀಡುತ್ತದೆ.

- ನಿಮ್ಮನ್ನು ಪ್ರೀತಿಸುವ ಮನುಷ್ಯರ ಬಳಿ ನಿಮ್ಮ ನೋವನ್ನು ಮುಕ್ತವಾಗಿ ಹಂಚಿಕೊಳ್ಳಿ. ಆದರೆ ನಿಮ್ಮ ಸಂತೋಷವನ್ನು ಎಲ್ಲರ ಜೊತೆಯಲ್ಲೂ ಹಂಚಿಕೊಳ್ಳಿ. ಕೋಪವನ್ನು ಇತರರ ಮೇಲೆ ತೋರಿಸದೆ ಏಕಾಂಗಿಯಾಗಿರುವಾಗ ಹೊರ ಹಾಕಿ. ಯಾವುದೇ ಭಾವನೆಯನ್ನೇ ಆಗಲಿ ಮನಸ್ಸಿನೊಳಗೇ ಹಾಕಿ ಹುದುಗಿಸಿಟ್ಟುಕೊಳ್ಳಬೇಡಿ.

- ಎಂತಹ ಹೀನಾಯವಾದ ಸಮಸ್ಯೆ ಎದುರಾದರೂ, ಸ್ವಲ್ಪ ಅದರಿಂದ ದೂರ ನಿಂತು ಯೋಚಿಸಿ ನೋಡಿ. ಆ ಸಮಸ್ಯೆಯಿಂದ ಹೊರಬರಬಹುದಾದ ದಾರಿಯೂ ನಿಮಗೆ ಕಾಣಿಸುತ್ತದೆ. ●




Shop Online @ www.ramrajcotton.in






Shop Online @ www.ramrajcotton.in


Kokhila®
WOMEN'S INNERWEARS
BY
RAMRAJ©


RAMRAJ ©
COTTON
WHITE SHIRTS
SCAN QR CODE FOR
STORE LOCATION
Available @ Ramraj Showrooms & All leading textile shops | Shop online @ www.ramrajcotton.in

# ಟ್ವಿಟ್ಟರ್ ಹುಡುಕಾಟ!




**@kamakshi_s.gopal**

ಅಗತ್ಯ ಬರುವವರೆಗೂ ಹುಡುಕಾಟ ಇರುವುದಿಲ್ಲ. ನಂಬಿಕೆ ಇರುವವರೆಗೂ ನಮಗೆ ಜೀವನ ಬೇಸರವೆನಿಸುವುದಿಲ್ಲ...

**@saloman.raj**

ನಿರೀಕ್ಷೆಗಳೇ ಇಲ್ಲದ ಹುಡುಕಾಟ ತುಂಬ ಸ್ವಾರಸ್ಯಕರವಾಗಿರುತ್ತದೆ, ಮತ್ತು ಅದು ಒಂದು ಬಗೆಯ ತೃಪ್ತಿಯೊಂದಿಗೆ ಮುಗಿಯುತ್ತದೆ.

**@fayazahmed**

ಇಲ್ಲದಿರುವಾಗ ಹುಡುಕಾಟ ಹೆಚ್ಚಾಗಿರುತ್ತದೆ. ಇರುವಾಗ ನಿರ್ಲಕ್ಷ್ಯ ಹೆಚ್ಚಾಗಿರುತ್ತದೆ.

**@chandrashekhar.n**

ಯಾವುದೇ ಒಂದು ಕಾರ್ಯವನ್ನೇ ಆಗಿದ್ದರೂ ಆಸಕ್ತಿ ಕಡಿಮೆಯಾಗದ ಹಾಗೆ ನಂಬಿಕೆಯೊಂದಿಗೆ ಆರಂಭಿಸಿ. ಯಶಸ್ಸು ತಾನಾಗಿಯೇ ನಿಮ್ಮನ್ನು ಹುಡುಕಿಕೊಂಡು ಬರುತ್ತದೆ.

**@prabhu.rc**

ಕೆಲವು ನೆನಪುಗಳು ಬೊಕ್ಕಸದಂತಹವು. ಆದುದರಿಂದಲೋ ನಮ್ಮ ಹುಡುಕಾಟ ಹೆಚ್ಚುತ್ತದೆ.

**@gulabi.mn**

ನಾವು ಯಾರನ್ನು ಹೆಚ್ಚಾಗಿ ಹುಡುಕಾಡುತ್ತೇವೆಯೋ ಅವರು ಹುಡುಕಾಟ ನಾವಾಗಿರುವುದಿಲ್ಲ!

**@imran.fathima**

ಒಂದೊಂದು ವಯಸ್ಸಿನಲ್ಲಿ ಒಂದೊಂದು ಹುಡುಕಾಟ... ಆದರೆ ಎಲ್ಲಾ ವಯಸ್ಸಿನಲ್ಲೂ ಪ್ರೀತಿಯ ಹುಡುಕಾಟ ಮುಂದುವರೆಯುತ್ತಲೇ ಇರುತ್ತದೆ.

**@vishwa94**

ಪ್ರೀತಿಪಾತ್ರರಾದವರು ದೂರವಾಗಿ ಹೋಗಿಲ್ಲ, ಸ್ವಲ್ಪ ದೂರದಲ್ಲಿದ್ದಾರಷ್ಟೇ! ನಿಮ್ಮ ಹುಡುಕಾಟ ಅವರು ಮಾತ್ರವೇ ಎಂದು ಅವರಿಗೆ ದೃಢಪಡಿಸಿ...!

**@sairam.shiradi**

ಬದುಕಿನಲ್ಲಿ ಹುಡುಕಾಟ ಯಾವಾಗಲೂ ಇರಬೇಕು. ಹುಡುಕಾಟ ಎಂಬುದು ಇದ್ದಲ್ಲಿ ಮಾತ್ರವೇ ಹೊಸ ಬಗೆಯ ಅನುಭವಗಳು ದೊರಕುತ್ತವೆ. ಬದುಕಿನ ಸ್ವಾರಸ್ಯವೂ ನಮಗೆ ದೊರಕುತ್ತದೆ.

**@ishani.kaavya22**

ಹುಡುಕಾಟದ ಪ್ರಯಾಣದಲ್ಲಿ ನಾವು ಹುಡಕಿದ್ದನ್ನು ಹೊರತುಪಡಿಸಿ, ಬೇರೆ ಯಾವುದೇ ದೊರೆತರೂ ಅದು ಲಾಭದ ಲೆಕ್ಕದಲ್ಲಿ ಸೇರುತ್ತದೆ. ಯಾವುದನ್ನಾದರೂ ಕಳೆದುಕೊಂಡರೆ ಅದು ದಾರಿ ಖರ್ಚಿನ ಲೆಕ್ಕಕ್ಕೆ ಸೇರುತ್ತದೆ. ಆದುದರಿಂದ ನೀವು ಹುಡುಕಾಡುವುದು ದೊರಕುವವರೆಗೂ ಪ್ರಯಾಣವನ್ನು ಮುಂದುವರೆಸಿ. ಅದೇ ಯಶಸ್ಸಿಗೆ ದಾರಿ!

**@lahari.ranjani**

ನಮ್ಮ ಜೀವನ ಹುಡುಕಾಟದಲ್ಲಿ ಅಡಗಿದೆ. ಹುಡುಕಾಡಿದ್ದು ದೊ-ರೆತರೆ, ನಂತರ ಮತ್ತೊಂದು ಹೊಸದರ ಹುಡುಕಾಟ ಆರಂಭವಾಗುತ್ತದೆ. ಮತ್ತೆ ಮತ್ತೆ ಹೀಗೆ ಹುಡುಕಾಟ ಆರಂಭವಾಗುತ್ತದೆ. ಹುಡುಕಾಟ ಮುಗಿಯುವಾಗ ಜೀವನವೂ ಮುಗಿಯುತ್ತದೆ.

**@mona.j**

ನಿನಗಾದುದನ್ನು ಹುಡುಕಾಡು... ಅದೂ ನಿನಗಾಗಿಯೇ ಕಾದಿರುತ್ತದೆ.

**@usharani.ks**

ನಿರಾಕರಣೆಯನ್ನು ಸಂಧಿಸುವಾಗ ನೆಲೆಸಿ ನಿಲ್ಲಲು ದಾರಿ ಹುಡುಕಿ. ಜೀವನದಲ್ಲಿ ನಿರಾಸೆ ಇರಲಾರದು.

**@ramesh.muthumani**

ನೀನು ರಾಜನಾಗಲು ಬಯಸಿದರೆ ರಾಣಿಯನ್ನು ಹುಡುಕಾಡಬೇಡ... ರಾಜ್ಯವನ್ನು ಹುಡುಕಾಡು!

**@raajaramani**

ದಾರಿ ಇರುವುದು ನಿಜ... ಹುಡುಕಾಡುವುದು ನಮ್ಮ ಸಾಮರ್ಥ್ಯ!

**@nakshatra_chaitanya**

ಇತರರ ಸ್ಥಿತಿಯನ್ನು ಅರಿತುಕೊಳ್ಳಲು ನೆಮ್ಮದಿಯನ್ನು ಕಳೆದುಕೊಂಡು ಅಲೆದಾಡುವುದನ್ನು ಬಿಟ್ಟು, ತನ್ನ ಸ್ಥಿತಿಯನ್ನು ಸರಿಯಾಗಿ ಅರಿತುಕೊಂಡು ಅದನ್ನು ಉತ್ತಮಪಡಿಸಿಕೊಳ್ಳುವುದು ಹೇಗೆ ಎಂದು ಅದಕ್ಕೆ ತಕ್ಕ ದಾರಿಗಳನ್ನು ಹುಡುಕುವುದು ಒಳ್ಳೆಯದು!

**@manjulashivu**

ಕಳೆದುಕೊಂಡದ್ದರ ಬಗ್ಗೆ ವಿಧಿಯ ಮೇಲೆ ಆರೋಪ ಹೊರಿಸಿ, ಸಮಾಧಾನ ಪಟ್ಟುಕೊಳ್ಳುವುದು ಒಂದು ಗುಣ. ಹೇಗೆ ಅದನ್ನು ಕಳೆದುಕೊಂಡೆವು ಎಂದು ಹುಡುಕಾಡಿ ನೋಡಿ, ಕಳೆದುಕೊಂಡದ್ದನ್ನು ಪಡೆದುಕೊಂಡು, ಯಶಸ್ಸನ್ನು ಗಳಿಸುವುದೂ ಒಂದು ಗುಣವೇ. ಆತ್ಮವಿಶ್ವಾಸವೇ ಜೀವನ.

**@i.sureshnarayani**

ಕಳೆದುಕೊಂಡ ವಸ್ತುವನ್ನು ಮತ್ತೆ ಹುಡುಕಿ ಕಂಡು ಹಿಡಿಯಬಹುದು... ಆದರೆ ಕಳೆದುಕೊಂಡ ವಸ್ತುವನ್ನು ಹುಡುಕಾಡಿ ಪಡೆದುಕೊಳ್ಳುವುದು ಅಷ್ಟೊಂದು ಸುಲಭವಲ್ಲ!

**@sagari_maheshwari**

ಯಶಸ್ಸು ಎಂಬುದು ನಮ್ಮನ್ನು ಹುಡುಕಿಕೊಂಡು ಬರುವುದಿಲ್ಲ... ಅದು ನಾವು ಹುಡುಕಾಡಿ ಪಡೆದುಕೊಳ್ಳುವುದು...!

**@saira.ramanand**

ಒಬ್ಬ ವ್ಯಕ್ತಿಯ ಬಳಿ ಪ್ರಾಮಾಣಿಕತೆಯೂ, ನಿಜವಾದ ದುಡಿಮೆಯೂ ಇದ್ದರೆ, ಖಂಡಿತವಾಗಿ ಜೀವನದ ಔನ್ನತ್ಯವನ್ನು ಅವರು ತಲುಪುತ್ತಾರೆ.

**@imran_sultanaa**

ತಾನಾಗಿಯೇ ದೊರಕುವ ವಸ್ತುವನ್ನು ಮೆದುಳೂ, ತಾನಾಗಿಯೇ ಹುಡುಕಿಕೊಂಡು ಬರುವ ಪ್ರೀತಿಯನ್ನು ಮನಸ್ಸೂ ಯಾವಾಗಲೂ ಒಪ್ಪಿಕೊಳ್ಳುವುದಿಲ್ಲ!

**@ekangi.kavitha**

ಎಲ್ಲಾ ಸ್ಥಳಗಳಲ್ಲೂ ಸಂತೋಷ ಇದ್ದೇ ಇರುತ್ತದೆ... ಅದನ್ನು ನಾವೇ ಹುಡುಕಿ ಕಂಡುಹಿಡಿಯಬೇಕು. ●



# ಬದುಕಿನ ಅರ್ಥವನ್ನು ಹುಡುಕಿರಿ!



ನೀವು ಬಯಸುವ ರೀತಿಯ ಜೀವನ ನಿಮಗೆ ದೊರೆತಿದೆಯೇ? ನಿಮ್ಮ ಮನಸ್ಸಿಗೆ ತೃಪ್ತಿ ದೊರಕಿದೆಯೇ? ಮನಸ್ಸಿಗೆ ತೃಪ್ತಿ ನೀಡುವಂತಹ ವಿಷಯಗಳನ್ನು ನೀವು ಮಾಡುತ್ತಿದ್ದೀರಾ? ಇಂತಹ ಪ್ರಶ್ನೆಗಳಿಗೆ ಸರಿಯಾದ ಉತ್ತರ ನಿಮಗೆ ದೊರೆತರೆ ಮಾತ್ರವೇ ನಿಮ್ಮ ಬದುಕಿನ ಅರ್ಥವನ್ನು ನೀವು ತಿಳಿದುಕೊಳ್ಳುವಿರಿ. ತೃಪ್ತಿಕರವಾದ ಹಾಗೂ ಸಂತೋಷಕರವಾದ ಜೀವನ ನಡೆಸಲು, ಬದುಕಿನ ಅರ್ಥವನ್ನು ಹುಡುಕಾಡಬೇಕಾದುದು ಅವಶ್ಯಕ. ಅದಕ್ಕೆ ನೀವು ಮಾಡಬೇಕಾದವುಗಳು:

- ನಿಮಗೆ ಸಂತೋಷ ನೀಡುವ ಕೆಲಸಗಳು ಯಾವುವು, ನಿಮಗೆ ತುಂಬ ಇಷ್ಟವಾದವುಗಳು ಯಾವುವು, ನಿಮಗೆ ಯಾವುದರಲ್ಲಿ ಹೆಚ್ಚು ಆಸಕ್ತಿ ಎಂದು ಒಂದು ಪಟ್ಟಿಯನ್ನು ತಯಾರಿಸಿ. ಅವು ನಿಮ್ಮ ಕೆಲಸಕ್ಕೆ ಸಂಬಂಧಿಸಿದವುಗಳಾಗಿರಬಹುದು, ಖಾಸಗಿ ಜೀವನಕ್ಕೆ ಸಂಬಂಧಿಸಿದವುಗಳೂ ಆಗಿರಬಹುದು. ಸಮಯ ಹೋಗುವುದೇ ತಿಳಿಯದೆ ಯಾವ ಯಾವ ಕೆಲಸಗಳನ್ನು ಇಷ್ಟಪಟ್ಟು ಮಾಡುತ್ತೀರಿ, ಯಾವುದನ್ನು ಮಾಡಿದರೆ ನಿಮಗೆ ಸಂತೋಷ ದೊರಕುತ್ತದೆ ಎನ್ನುವ ಆಧಾರದಲ್ಲಿ ಈ ಪಟ್ಟಿ ಇರಬೇಕು.

- ನಿಮಗೆ ನೀವೇ ಕೆಲವು ಪ್ರಶ್ನೆಗಳನ್ನು ಕೇಳಿಕೊಳ್ಳಿ. ನೀವು ಈಗೇನು ಮಾಡುತ್ತಿದ್ದೀರಿ, ಮುಂದೇನು ಮಾಡಬೇಕಾಗಿದೆ ಎನ್ನುವುದನ್ನು ಅವು ನಿಮಗೆ ಅರ್ಥ ಮಾಡಿಸುತ್ತವೆ. ನಿಮ್ಮ ಬಳಿ ಇರುವ ಯಾವುದನ್ನು ನೋಡಿ ನೀವು ಹೆಮ್ಮೆ ಪಡುತ್ತೀರಿ? ಇತರರ ಯಾವ ಗುಣಗಳನ್ನು ನೋಡಿ ನೀವು ಆಶ್ಚರ್ಯಗೊಂಡಿರಿ? ಯಾವ ಕೆಲಸವನ್ನು ಮಾಡುವಾಗ ನಿಮ್ಮೊಳಗೆ ಅತ್ಯುತ್ಸಾಹ ಮೂಡುತ್ತದೆ? ಪ್ರತಿದಿನವೂ ಎಷ್ಟರ ಮಟ್ಟಿಗೆ ಸಂತೋಷನ್ನು ನೀವು ಅನುಭವಿಸುವಿರಿ? ನಿಮ್ಮ ಅಯುಷ್ಯ ಇನ್ನು ಒಂದು ತಿಂಗಳು ಮಾತ್ರವೇ ಎಂದಾದರೆ, ಉಳಿದಿರುವ ಆ ದಿನಗಳನ್ನು ಹೇಗೆ ನೀವು ಕಳೆಯಲು ಬಯಸುವಿರಿ? ಈ ಜಗತ್ತಿನಲ್ಲಿ ಯಾವುದಾದರೂ ಒಂದನ್ನು ಸಂಪೂರ್ಣವಾಗಿ ಬದಲಾಯಿಸಬಹುದಾದ ಶಕ್ತಿ ನಿಮಗೆ ದೊರೆತದ್ದೇ ಆದರೆ ನೀವು ಯಾವುದನ್ನು ಬದಲಾಯಿಸಲು ಬಯಸುವಿರಿ? ನೀವು ನಿಮ್ಮ ಜೀವನದಲ್ಲಿ ಖಂಡಿತವಾಗಿಯೂ ಮಾಡಿಯೇ ಮಾಡಬೇಕೆಂದು ಬಯಸುವುದು ಏನನ್ನು? ಯಾವ ಬದಲಾವಣೆಯನ್ನು ಮಾಡಿದರೆ ನಿಮ್ಮ ಜೀವನ ಸಂತೋಷಕರವಾಗಿರುತ್ತದೆ? ಈ ಪ್ರಶ್ನೆಗಳಿಗೆ ಯಾವುದೇ ಮುಚ್ಚು ಮರೆಯೂ ಇಲ್ಲದೆ ಉತ್ತರವನ್ನು ಹುಡುಕಿ ಬರೆಯಿರಿ.

- ನೀವು ಯಾವ ಕೆಲಸವನ್ನು ಹೆಚ್ಚು ಇಷ್ಟಪಟ್ಟು ಮಾಡುವಿರಿ? ಯಾರ್‍ಯಾರನ್ನು ಮನಃಪೂರ್ವಕ ಪ್ರೀತಿಸುತ್ತೀರಿ? ಇವುಗಳಿಗೆ ಚೆನ್ನಾಗಿ ಯೋಚಿಸಿ ಒಂದು ಪಟ್ಟಿಯನ್ನು ತಯಾರಿಸಿ. ಆ ಕೆಲಸಗಳಿಗಾಗಿಯೂ, ಆ ವ್ಯಕ್ತಿಗಳಿಗಾಗಿಯೂ ಎಷ್ಟು ಸಮಯವನ್ನು ಮೀಸಲಿಡುತ್ತೀರಿ ಎಂದು ಯೋಚಿಸಿ ನೋಡಿ! ಆ ಸಮಯವೇ ನಿಮಗೆ ನಿಜವಾದ ಸಂತೋಷವನ್ನು ನೀಡುವ ಸಮಯವಾಗಿರುತ್ತದೆ. ಆದುದರಿಂದ ಆ ಸಮಯವನ್ನು ಹೆಚ್ಚಿಸಿಕೊಳ್ಳಿ.

- ಒಂದು ಮಗುವಿನ ಹಾಗೆ ಯಾವುದೇ ಕಟ್ಟುಪಾಡುಗಳೂ ಇಲ್ಲದೆ ಸಂತೋಷಕರವಾಗಿರುವುದು ಒಂದು ವರ. ಅಂತಹ ಸಂತೋಷ ನಿಮಗೆ ಕಡೆಯದಾಗಿ ಯಾವುದರಲ್ಲಿ ದೊರೆಯಿತು, ಯಾರ ಜೊತೆಯಲ್ಲಿರುವಾಗ ದೊರೆಯಿತು ಎಂದು ಯೋಚಿಸಿ

ನೋಡಿ. ಹೀಗೆ ನಿಮಗೆ ಸಂತೋಷವನ್ನು ನೀಡುವ ಕೆಲಸಗಳನ್ನು ಪದೇಪದೇ ಮಾಡಿ.

◖ ನಿಮಗೆ 90 ವರ್ಷಗಳಾಗಿರುವುದಾಗಿ ಕಲ್ಪಿಸಿಕೊಳ್ಳಿ. ಈಗ ನಿಮ್ಮ ಬದುಕಿನಲ್ಲಿ ನೀವು ಹಿಂದಿರುಗಿ ನೋಡಿದಾಗ ಯಾವ್ಯಾವ ವಿಷಯಗಳಲ್ಲಿ ನೀವು ಪೂರ್ಣ ತೃಪ್ತಿಯನ್ನು ಹೊಂದಿದ್ದೀರಿ? ಕುಟುಂಬದ ಸದಸ್ಯರಿಗೆ ಒಳ್ಳೆಯ ಜೀವನವನ್ನು ರೂಪಿಸಿಕೊಟ್ಟಿದ್ದು, ಸ್ವಂತ ಮನೆ ಕಟ್ಟಿಸಿದ್ದು, ವಿಶ್ರಾಂತಿ ಜೀವನದಲ್ಲೂ ಆದಾಯಕ್ಕೆ ಒಂದು ಒಳ್ಳೆಯ ದಾರಿಯನ್ನು ಮಾಡಿಕೊಂಡಿದ್ದು, ಇದೆಲ್ಲವೂ ನಿಮಗೆ ತೃಪ್ತಿಯನ್ನು ನೀಡಿವೆಯೇ? ಅಂತಹ ವಿಷಯಗಳನ್ನು ಈಗಲೇ ನೀವು ಯೋಜಿಸಿಕೊಂಡು ಕಾರ್ಯಗತಗೊಳಿಸಿ.

◖ ಜೀವನದಲ್ಲಿ ನಿಮಗೆ ರೋಲ್ ಮಾಡೆಲ್ ಆಗಿರುವವರು ಯಾರು? ಅವರ ಯಾವ ಗುಣ ನಿಮ್ಮನ್ನು ಆಕರ್ಷಿಸಿದೆ? ಅವರ ಬಳಿಯಿಂದ ಯಾವುದನ್ನು ನೀವು ಕಲಿಯಲು ಬಯಸುತ್ತೀರಿ? ಹೀಗೆ ಮನಸ್ಸಿನೊಳಗೆ ಒಂದು ಪಟ್ಟಿಯನ್ನು ಹಾಕಿಕೊಂಡು ಅದೆಲ್ಲವನ್ನೂ ಮಾಡಿರಿ. ತೃಪ್ತಿಕರವಾದ ಜೀವನ ಸಾಗಿಸಿ, ನೀವು ಕೆಲವರಿಗೆ ರೋಲ್ ಮಾಡೆಲ್ ಆಗುವಿರಿ.

◖ ತುಂಬಾ ಜನರು ತಮ್ಮ ಸುತ್ತಲೂ ಒಂದು ವೃತ್ತವನ್ನು ನಿರ್ಮಿಸಿಕೊಳ್ಳುತ್ತಾರೆ. ಅದನ್ನೇ ಸುರಕ್ಷಿತವಾದುದನ್ನಾಗಿಯೂ ಭಾವಿಸುತ್ತಾರೆ. ಅದನ್ನೂ ಮೀರಿ ಹೊರಗೆ ಹೋಗುವುದಕ್ಕೋ, ಹೊಸ ಮನುಷ್ಯರನ್ನು ಭೇಟಿಯಾಗುವುದಕ್ಕೋ ಅವರು ಬಯಸುವುದಿಲ್ಲ. ಆ ವೃತ್ತವನ್ನೂ ದಾಟಿ ಹೊರಗೆ ಹೋಗುವಾಗಲೇ ಬೇರೊಂದು



ಜಗತ್ತನ್ನು ನಿಮ್ಮಿಂದ ನೋಡಲು ಸಾಧ್ಯವಾಗುತ್ತದೆ. ನಿಮ್ಮ ಆಸಕ್ತಿಯನ್ನೂ, ಸಾಮರ್ಥ್ಯಗಳನ್ನೂ ಆ ಜಗತ್ತಿನಲ್ಲಿ ಮೌಲ್ಯಮಾಪನ ಮಾಡಿ ನೋಡಲು ಸಾಧ್ಯ. ಹೊಸ ಮನುಷ್ಯರೊಂದಿಗೆ ಬೆರೆಯುವಾಗ, ಅವರ ಬಳಿಯಿಂದ ಹೊಸಹೊಸ ವಿಷಯಗಳನ್ನು ಕಲಿತುಕೊಳ್ಳಲೂ ಸಾಧ್ಯ.

◖ ನಿಮ್ಮ ಬಲ ಯಾವುದು, ಬಲಹೀನತೆ ಯಾವುದು ಎಂದು ಗುರುತಿಸುವುದರಲ್ಲಿ ನಿಮ್ಮೊಳಗೆ ಗೊಂದಲಗಳು ಇರಬಹುದು. ನಿಮ್ಮ ಆಪ್ತ ಸ್ನೇಹಿತರ ಬಳಿ ಈ ಬಗ್ಗೆ ಚರ್ಚಿಸಿ. ನಿಮಗೆ ಸಂತೋಷ ನೀಡುವ ಕಾರ್ಯಗಳನ್ನು ಮಾಡಲು ನಿಮ್ಮ ಬಲವನ್ನು ಉಪಯೋಗಿಸಿ.

◖ 'ಈ ಒಂದು ವಿಷಯ ನಡೆದರೆ ಮಾತ್ರವೇ ನನಗೆ ಸಂತೋಷ ದೊರಕುತ್ತದೆ', 'ನನ್ನ ಭವಿಷ್ಯ ಇದರಲ್ಲೇ ಇರುವುದು' ಎಂದು ಯಾವುದೋ ಒಂದು ವಿಷಯದಲ್ಲಿ ಅಳತೆಗೆ ಮೀರಿದ ಮಹತ್ವವನ್ನು ನೀಡಬೇಡಿ. 'ಇದು ಇಲ್ಲದೇ ಇದ್ದಲ್ಲಿ ಅದು' ಎಂಬಂತೆ ಅವಕಾಶಗಳನ್ನು ಬೇರ್ಪಡಿಸಿಟ್ಟುಕೊಳ್ಳಿ. ಇಂದು ದೊಡ್ಡ ದೊಡ್ಡ ಸಂಸ್ಥೆಗಳೇ ಒಂದೇ ಸಮಯದಲ್ಲಿ ಹಲವು ಕೆಲಸಗಳನ್ನು ಮಾಡುತ್ತವೆ. ಒಂದರಲ್ಲಿ ಹಿಂದುಳಿದರೂ, ಇನ್ನೊಂದನ್ನಿಟ್ಟುಕೊಂಡು ಹೇಗೋ ನಿಭಾಯಿಸಿಕೊಳ್ಳಬಹುದು ಎಂದು ಅವರು ಭಾವಿಸುತ್ತಾರೆ.

◖ ಅದೇ ರೀತಿಯಲ್ಲೇ ನಿಮ್ಮ ಜೀವನದ ಸಂತೋಷಕ್ಕೂ ಕೂಡ ನೀವು ಯಾರೋ ಒಬ್ಬರನ್ನು ಅವಲಂಬಿಸಿರಬೇಡಿ. ಬಂಧುಗಳು, ಗೆಳೆಯರು, ಸಹೋದ್ಯೋಗಿಗಳು ಹೀಗೆ ಎಲ್ಲರ ಜೊತೆಯಲ್ಲೂ ಚೆನ್ನಾಗಿ ಬೆರೆಯಿರಿ. ಅವರನ್ನು ನೀವು ಸಂತೋಷವಾಗಿಟ್ಟುಕೊಂಡಿದ್ದರೆ ಅವರೂ ನಿಮಗೆ ಸಂತೋಷವನ್ನು ನೀಡುತ್ತಾರೆ.

◖ ನಿಮ್ಮ ಜೀವನದಲ್ಲಿ ಮುಖ್ಯವಾದ ಗುರಿ ಯಾವುದು? ಒಳ್ಳೆಯ ಕೆಲಸ, ಅನುಕೂಲಕರ ಜೀವನ, ಲಾಭ ನೀಡುವ ಒಂದು ಉದ್ಯಮ, ವಿಭಿನ್ನವಾದ ಒಂದು ವ್ಯಾಪಾರ... ಯಾವುದೇ ಆಗಿದ್ದರೂ ಅದನ್ನು ಯೋಜನೆ ರೂಪಿಸಿ, ಜೀವನವನ್ನು ಆ ಕಡೆ ತೆಗೆದುಕೊಂಡು ಹೋಗಿ. ಕಾಲ ಬದಲಾಗುವಾಗ ನಿಮ್ಮ ಗುರಿಯೂ ಬದಲಾಗಬಹುದು. ಆಗ ಬೇಕಾದರೆ ಅದಕ್ಕೆ ತಕ್ಕಂತೆ ಬದಲಾಗಿ. 'ನಾನು ಸರಿಯಾದ ದಿಕ್ಕಿನಲ್ಲೇ ಸಾಗುತ್ತಿದ್ದೇನಾ?' ಎಂಬುದನ್ನು ಪದೇಪದೇ ದೃಢಪಡಿಸಿಕೊಳ್ಳಿ. ಶಿಕ್ಷಣ, ಕೆಲಸ, ಉದ್ಯಮ, ಜೀವನ ಹೀಗೆ ಎಲ್ಲ ವಿಷಯಗಳಲ್ಲೂ ನಿಮ್ಮ ಬಹುಪಾಲು ಕಾರ್ಯಗಳು ಆ ಗುರಿಯತ್ತಲೇ ಸಾಗುವಂತಿರಬೇಕು.

◖ ನಿಮ್ಮ ಗಮನವನ್ನು ಬೇರೆಡೆಗೆ ತಿರುಗಿಸುವ ಯಾವುದೇ ವಿಷಯಕ್ಕೂ ಅವಕಾಶ ನೀಡಬೇಡಿ. ಕೆಲವೊಮ್ಮೆ ಮನರಂಜನೆಯ ವಿಷಯಗಳು, ಸಮಯ ಕಳೆಯುವ ಸಂಗತಿಗಳು ಅಗತ್ಯವಿರಬಹುದು. ಆದರೆ, 'ಹೀಗಿರುವುದೇ ಸಂತೋಷ ನೀಡುವುದು' ಎಂದು ಭಾವಿಸಿ ಅವುಗಳಲ್ಲೇ ಮುಳುಗಿ ಹೋಗಿ ಬಿಡಬೇಡಿ. ತಾತ್ಕಾಲಿಕ ಸಂತೋಷಕ್ಕೂ, ನಿರಂತರ ಸಂತೋಷಕ್ಕೂ ನಡುವೆ ವ್ಯತ್ಯಾಸವಿದೆ. ಜೀವನದಲ್ಲಿ ಸಂತೃಪ್ತಿಯನ್ನು ಅನುಭವಿಸುವುದೇ ನಿರಂತರ ಸಂತೋಷವನ್ನು ನೀಡುತ್ತದೆ.

◖ ಗುರಿಯನ್ನು ಲಕ್ಷ್ಯದಲ್ಲಿಟ್ಟುಕೊಂಡು ಜೀವನ ನಡೆಸುವಾಗ ನಿಮ್ಮ ಕಣ್ಣೆದುರೇ ಇರುವ ಹಲವು ಅವಕಾಶಗಳು ನಿಮ್ಮ ಕಣ್ಣಿಗೆ ಕಾಣಿಸುತ್ತವೆ. ನಿರ್ಣಯಗಳನ್ನು ತೆಗೆದುಕೊಳ್ಳುವುದು ಕೂಡ ಸುಲಭವಾಗುತ್ತದೆ. 'ಈ ಅವಕಾಶ ನನ್ನ ಜೀವನಕ್ಕೆ ಅರ್ಥ ತುಂಬುತ್ತದೆಯೇ? ಇದನ್ನು ಮಾಡುವ ಮೂಲಕ ನಾನು ಜೀವನದಲ್ಲಿ ಮುಂದೆ ಬರಲು ಸಾಧ್ಯವೇ?' ಎಂದು ಒಂದೊಂದನ್ನೂ ನೋಡಿ ನೋಡಿ ಮಾಡುವಿರಿ. 'ಯಾವುದನ್ನು ಮಾಡಲು ನಾನು ಬಯಸುವುದಿಲ್ಲ' ಎನ್ನುವುದನ್ನು ಕೂಡ ಸ್ಪಷ್ಟವಾಗಿ ಅರ್ಥ ಮಾಡಿಕೊಂಡು ಅದನ್ನು ಬಿಟ್ಟುಬಿಡುವಿರಿ, ಯಾವುದನ್ನು ಮಾಡಲು ಇಷ್ಟವೋ ಅದನ್ನು ಮಾಡುವಿರಿ.

●

# ಹೊಂದುವಂತಹ ಕೆಲಸ ಹುಡುಕಿರಿ!



ದೊಡ್ಡ ಕಂಪನಿಯೊಂದರಲ್ಲಿ ಒಳ್ಳೆಯ ಕೆಲಸ ದೊರಕಬೇಕು ಎಂಬುದು ಹಲವರ ಕನಸು. ಆ ಕನಸನ್ನು ನಿಜ ಮಾಡುವುದು ಹೇಗೆ ಎಂದು ಹಲವರಿಗೆ ತಿಳಿಯುವುದೇ ಇಲ್ಲ. ಕೆಲಸವನ್ನು ಹುಡುಕುವವರ ನಡುವೆ ಒಂದು ಕಡೆ ಸ್ಪರ್ಧೆ ಹೆಚ್ಚುತ್ತಿದೆ. ಅದೇ ಸಮಯದಲ್ಲಿ ಇನ್ನೊಂದು ಕಡೆ ದೊಡ್ಡ ದೊಡ್ಡ ಕಂಪನಿಗಳೂ ಕೂಡ ಸಮರ್ಥ ವ್ಯಕ್ತಿಗಳನ್ನು ಬಲೆ ಬೀಸಿ ಹುಡುಕಿ ಹುಡುಕಿ ಕಂಡು ಹಿಡಿಯುತ್ತಿವೆ. ಎಂದರೆ, ಓದಿ ಮುಗಿಸಿದವರು ತಮಗಾಗಿ ಕೆಲಸವನ್ನು ಹುಡುಕುವಂತೆಯೇ, ತಮ್ಮ ಸಂಸ್ಥೆಯಲ್ಲಿ ಕೆಲಸ ಮಾಡಲು ಅರ್ಹ ವ್ಯಕ್ತಿಗಳನ್ನು ಆ ಸಂಸ್ಥೆಗಳೂ ಹುಡುಕಾಡುತ್ತವೆ. ಆ ಹುಡುಕಾಟದಲ್ಲಿ ನಮಗೆ ಸರಿಯಾಗಿ ಹೊಂದುವ ಒಂದು ಕೆಲಸವನ್ನು ಆಯ್ಕೆ ಮಾಡಿಕೊಳ್ಳುವುದು ಕೂಡ ಒಂದು ಕಲೆ.

ತಮ್ಮ ವಸ್ತುಗಳ ಗುಣಮಟ್ಟವನ್ನು ಬ್ರಹ್ಮಾಂಡವಾಗಿ ಜಾಹೀರಾತು ಮಾಡಿ ತೋರಿಸಿ ಮಾರಾಟ ಮಾಡುತ್ತವೆ ಹಲವು ಸಂಸ್ಥೆಗಳು. ಅದೇ ರೀತಿಯಲ್ಲೇ ಕೆಲಸದ ಮಾರ್ಕೆಟ್‌ನಲ್ಲೂ ನಿಮ್ಮ ಸಾಮರ್ಥ್ಯವನ್ನು ಪ್ರಕಟಪಡಿಸಿ, ಒಬ್ಬ ವ್ಯಕ್ತಿ ತನ್ನನ್ನು ಒಳ್ಳೆಯ ಸಂಬಳದ ಕೆಲಸಕ್ಕೆ ಮಾರಿಕೊಳ್ಳಬೇಕು. 'ಕೆಲಸ ಹುಡುಕುವುದು' ಎಂಬುದರ ಸರಳವಾದ ವ್ಯಾಖ್ಯಾನ ಇದುವೇ ಆಗಿದೆ. ಅದಕ್ಕಾಗಿ ಕೆಲವು ಮಾರ್ಗಗಳನ್ನು ಅನುಸರಿಸಬೇಕು.

- 'ಯಾವ ಕೆಲಸ ನೀಡಿದರೂ ಪರವಾಗಿಲ್ಲ ಸಾರ್, ಚೆನ್ನಾಗಿ ಮಾಡುತ್ತೇನೆ' ಎಂದು ಹೇಳುವವರನ್ನು ತುಂಬ ಸಂಸ್ಥೆಗಳು ಒಪ್ಪುವುದಿಲ್ಲ. 'ನಾನು ಈ ವಿಷಯದಲ್ಲಿ ಸಮರ್ಥ. ನನಗೆ ಇದರಲ್ಲಿ ತುಂಬ ಒಳ್ಳೆಯ ಸಾಮರ್ಥ್ಯ ಇದೆ. ಈ ಕೆಲಸವನ್ನು ನಾನು ಮಾಡುವಂತೆ ಬೇರೆ ಯಾರಿಂದಲೂ ಮಾಡಲು ಸಾಧ್ಯವಿಲ್ಲ' ಎಂದು ಆತ್ಮವಿಶ್ವಾಸದಿಂದ ಒಂದು ನಿರ್ದಿಷ್ಟ ಕೆಲಸವನ್ನು ತನಗೆ ನೀಡುವಂತೆ ಕೇಳುವವರಿಗೇ ಹೆಚ್ಚು ಸ್ವಾಗತ ದೊರಕುವುದು. ಆದುದರಿಂದಲೇ, ಯಾವ ಕೆಲಸಕ್ಕೆ ಹೋಗಬೇಕು ಎಂಬ ಸ್ಪಷ್ಟತೆ ನಿಮ್ಮೊಳಗೆ ಇರಬೇಕು. ಒಬ್ಬ ವ್ಯಕ್ತಿಯ ಶಿಕ್ಷಣ, ಅವರಲ್ಲಿರುವ ಸಾಮರ್ಥ್ಯಗಳು, ಅವರ ಬಲ, ಆ ನಿರ್ದಿಷ್ಟ ವಿಷಯದಲ್ಲಿ ಉಳಿದವರಿಗಿಂತಲೂ ಹೆಚ್ಚುವರಿಯಾಗಿರುವ ತಿಳಿವಳಿಕೆ... ಮೊದಲಾದವುಗಳ ಆಧಾರದಲ್ಲಿ ಕೆಲಸವನ್ನು ಹುಡುಕಬೇಕು.

- ಒಂದು ಕೆಲಸದಲ್ಲಿ ನೀವು ಏನನ್ನು ಬಯಸುತ್ತೀರಿ ಎಂಬ ಸ್ಪಷ್ಟತೆ ಇರಬೇಕು. ಎಂತಹ ಸಂಸ್ಥೆಯಲ್ಲಿ ಕೆಲಸ, ಆ ಕೆಲಸಕ್ಕೆ ನೀವು ನಿರೀಕ್ಷಿಸುವ ಸಂಬಳ ಎಷ್ಟು, ಬಡ್ತಿ ಹಾಗೂ ವೇತನ ಹೆಚ್ಚಳ ಇತ್ಯಾದಿಗಳು ಯಾವ್ಯಾವಾಗ ದೊರಕುತ್ತವೆ, ಯಾವ ಸ್ಥಳದಲ್ಲಿ ಕೆಲಸ ಮಾಡಬೇಕಾಗಿರುತ್ತದೆ, ಆ ಕೆಲಸ ನಿಮಗೆ ಮಾನಸಿಕ ತೃಪ್ತಿಯನ್ನು ನೀಡುತ್ತದೆಯೇ ಹೀಗೆ ಎಲ್ಲವನ್ನೂ ಪರಿಶೀಲಿಸಿ. ಎ.ಸಿ., ಕೊಠಡಿಯಲ್ಲಿ ಕುಳಿತು ಮಾಡುವ ಕೆಲಸವನ್ನು ಬಯಸುವವರಿಗೆ ಮೆಷಿನ್‌ಗಳು ಸದ್ದು ಸದಾ ಕೇಳಿಸುವ ಕಾರ್ಖಾನೆಗಳಲ್ಲಿ ಕೆಲಸ ಮಾಡಬೇಕಾಗಿ ಬಂದರೆ ನೆಮ್ಮದಿ ಇರುವುದಿಲ್ಲ. ಮನೆಯ ಊಟಕ್ಕೇ ಒಗ್ಗಿ ಹೋದವರಿಗೆ, ಬೇ–ರೊಂದು ರಾಜ್ಯದಲ್ಲಿ ರುಚಿಸದ ಊಟವನ್ನು ಮಾಡಿಕೊಂಡು ಕೆಲಸ ಮಾಡುವುದು ಸಾಧ್ಯವಾಗುವುದಿಲ್ಲ.

- ಯಾವ ಸಂಸ್ಥೆಯಲ್ಲಿ ಕೆಲಸ ಮಾಡಬೇಕೆನ್ನುವುದು ನಿಮ್ಮ ಕನಸಾಗಿದೆಯೋ ಆ ಸಂಸ್ಥೆಯ ಬಗ್ಗೆ ಪರಿಶೀಲಿಸಿ ತಿಳಿದುಕೊಳ್ಳಿ. ಯಾವ ಬಗೆಯ ವ್ಯಕ್ತಿಗಳಿಗೆ ಅಲ್ಲಿ ಸುಲಭವಾಗಿ ಕೆಲಸ ದೊರಕುತ್ತದೆ? ಆ ಸಂಸ್ಥೆ ಯಾವ ಬಗೆಯ ಸಾಮರ್ಥ್ಯವನ್ನು ನಿರೀಕ್ಷಿಸುತ್ತದೆ? ಎಂತಹ ಕಾರ್ಯ ವಿಧಾನವನ್ನು ಅವರು ಬಯಸುತ್ತಾರೆ? ಹೀಗೆ ಎಲ್ಲವನ್ನೂ ಮೊದಲೇ ತಿಳಿದುಕೊಂಡು ಅದನ್ನು ನೀವೂ ರೂಢಿಸಿಕೊಳ್ಳಿ.

- ಓದಿ ಮುಗಿಸಿದ ಮೇಲೆ ಅನುಭವ ಏನೂ ಇಲ್ಲದೆ ಕಾಲೇಜಿನಿಂದ ಆಗಷ್ಟೇ ಹೊರ ಬರುವ ಯುವಕರನ್ನು ಕೆಲವು ದೊಡ್ಡ ಸಂಸ್ಥೆಗಳು ನೇರವಾಗಿ ಕೆಲಸಕ್ಕೆ ತೆಗೆದುಕೊಳ್ಳುವುದಿಲ್ಲ. ಬೇರೆ ಕೆಲವು ಚಿಕ್ಕ ಸಂಸ್ಥೆಗಳಲ್ಲಿ ಕೆಲಸ ಮಾಡುತ್ತಿರುವವರನ್ನು ಅವರು ಆಯ್ಕೆ ಮಾಡುತ್ತಾರೆ. ಅಂತಹ ಒಂದು ಚಿಕ್ಕ ಸಂಸ್ಥೆಯಲ್ಲಿ ಮೊದಲು ಕೆಲಸಕ್ಕೆ ಸೇರಿಕೊಂಡು, ಅನುಭವ ಪಡೆದುಕೊಂಡ ನಂತರ ದೊಡ್ಡ ಸಂಸ್ಥೆಯಲ್ಲಿ ಕೆಲಸಕ್ಕೆ ಪ್ರಯತ್ನಿಸಬಹುದು.

- ತುಂಬಾ ಜನರು ತಮ್ಮ ರೆಸ್ಯೂಂನಲ್ಲಿ ಗಜಿಬಿಜಿಯಾಗಿ





ಯಾವ್ಯಾವುದೋ ಸಂಗತಿಗಳನ್ನು ಬರೆದಿಟ್ಟಿರುತ್ತಾರೆ. ರೆಸ್ಯೂಂ ಯಾವಾಗಲೂ ಸರಳವಾಗಿರಬೇಕು. ನೀವು ಯಾವ ಕೆಲಸಕ್ಕೆ ಅರ್ಜಿ ಹಾಕುತ್ತೀರೋ, ಅದಕ್ಕೆ ಸರಿ ಹೊಂದುವಂತಹ ಅರ್ಹತೆ ನಿಮ್ಮಲ್ಲೇನಿದೆ, ಅದಕ್ಕೆ ಅರ್ಹ ಅನುಭವ ಏನಿದೆ ಎನ್ನುವುದನ್ನು ಅದರಲ್ಲಿ ವಿವರಿಸಿದರೆ ಸಾಕು. ಕೆಲವು ಸಂಸ್ಥೆಗಳಲ್ಲಿ ನಿಮ್ಮ ರೆಸ್ಯೂಂ ಅನ್ನು ಪರಿಶೀಲಿಸಲು ಕೆಲವು ಕ್ಷಣಗಳನ್ನು ಮಾತ್ರವೇ ಮೀಸಲಿಡುತ್ತಾರೆ. ಆ ಕೆಲವು ಕ್ಷಣಗಳ ಒಳಗೇ ನಿಮ್ಮ ರೆಸ್ಯೂಂ ಅವರನ್ನು ಇಂಪ್ರೆಸ್ ಮಾಡುವಂತಿರಬೇಕು.

● 'ನನಗೆ ಇಷ್ಟು ವರ್ಷಗಳ ಅನುಭವ ಇದೆ' ಎಂದು ರೆಸ್ಯೂಂನಲ್ಲಿ ದಾಖಲಿಸುವವರು, ತಾವು ನಿರ್ವಹಿಸಿದ ಜವಾಬ್ದಾರಿಗಳ ಪಟ್ಟಿಯನ್ನು ಮಾತ್ರವೇ ನೀಡಬಾರದು. 'ಇಷ್ಟು ಜನರಿಗೆ ಸೂಪರ್‌ವೈಸರ್ ಆಗಿ ಕಾರ್ಯ ನಿರ್ವಹಿಸಿದ್ದೇನೆ', 'ಇಷ್ಟು ವಿಭಾಗಗಳ ಮ್ಯಾನೇಜಿಂಗ್ ಮಾಡಿದ್ದೇನೆ' ಎಂದು ಬರೀ ಅಂಕೆಸಂಖ್ಯೆಗಳನ್ನು ಮಾತ್ರವೇ ನೀಡದೆ, 'ಈ ಕೆಲಸದಲ್ಲಿ ಇಂತಹ ಸಾಧನೆಯನ್ನು ಮಾಡಿದ್ದೇನೆ' ಎಂದು ಕೆಲವು ಸಂಗತಿಗಳನ್ನು ನಿರ್ದಿಷ್ಟವಾಗಿ ನಮೂದಿಸಬೇಕು. ಸಾಧಕರನ್ನು ಎಲ್ಲಾ ಸಂಸ್ಥೆಗಳೂ ಸ್ವಾಗತಿಸುತ್ತವೆ.

ಒಬ್ಬ ವ್ಯಕ್ತಿಯನ್ನು ಕೆಲಸಕ್ಕೆ ತೆಗೆದುಕೊಳ್ಳುವ ಮುನ್ನ ಅವರ ಕ್ಯಾರೆಕ್ಟರ್ ಅನ್ನು ಕೂಡ ಕೆಲವು ಸಂಸ್ಥೆಗಳು ಪರಾಮರ್ಶಿಸುತ್ತವೆ. ಫೇಸ್‌ಬುಕ್, ಇನ್‌ಸ್ಟಾಗ್ರಾಮ್ ಮೊದಲಾದ ಸಾಮಾಜಿಕ ಜಾಲತಾಣಗಳಲ್ಲಿ ಅವರು ಏನೇನು ಶೇರ್ ಮಾಡಿದ್ದಾರೆ ಎಂದು ಗಮನಿಸುತ್ತಾರೆ. ಇತರರನ್ನು ಜಗಳಕ್ಕೆಳೆಯುವಂತಹ ಮಾತುಗಳು, ತಮ್ಮ ಬೇಸರವನ್ನು ವ್ಯಕ್ತ ಪಡಿಸುವಂತಹ ನುಡಿಗಳು ಇತ್ಯಾದಿಗಳನ್ನು ಅಲ್ಲಿ ಬರೆದುಕೊಳ್ಳುವವರನ್ನು ಯಾವ ಸಂಸ್ಥೆಯೂ ಇಷ್ಟಪಡುವುದಿಲ್ಲ. 'ಕಛೇರಿಯೊಳಗೂ ಅವರು ಹೀಗೇ ನಡೆದುಕೊಳ್ಳುತ್ತಾರೋ ಏನೋ' ಎಂದು ಅವರು ಯೋಚಿಸಬಹುದು. ಅದೇ ರೀತಿಯಲ್ಲಿ ಇಮೇಯಿಲ್ ಐಡಿ ವಿಷಯದ ಬಗ್ಗೆಯೂ ಕೂಡ ಎಚ್ಚರಿಕೆಯಿಂದಿರಬೇಕು. 'ಡಾನ್', 'ಚೀಯಾನ್' ಇತ್ಯಾದಿ ಅಡ್ಡ ಹೆಸರುಗಳಿರುವ ಮೇಯಿಲ್ ಐಡಿ ಇಟ್ಟುಕೊಂಡಿರುವವರನ್ನು ಮೊದಲ ಹಂತದಲ್ಲಿಯೇ ಸೋಸಿ ಕೈಬಿಟ್ಟುಬಿಡುತ್ತಾರೆ.

● ಲಿಂಕ್ಡ್ ಇನ್‌ನಂತಹ ಸಾಮಾಜಿಕ ಜಾಲ ತಾಣಗಳು ಕೆಲಸ ಹುಡುಕುವವರಿಗೆ ತುಂಬಾ ನೆರವಾಗುತ್ತವೆ. ಇದರಲ್ಲಿ ಪ್ರತಿಯೊಬ್ಬರೂ ದಾಖಲಿಸುವ ಮಾಹಿತಿಗಳನ್ನು ನೋಡಿ ತುಂಬಾ ಕಂಪನಿಗಳು ಕೆಲಸಕ್ಕೆ ಜನರನ್ನು ತೆಗೆದುಕೊಳ್ಳುತ್ತವೆ. ದೊಡ್ಡದೊಡ್ಡ ಕಂಪನಿಗಳಲ್ಲಿ ಕೆಲಸಕ್ಕೆ ಜನರನ್ನು ತೆಗೆದುಕೊಳ್ಳುವ ಜವಾಬ್ದಾರಿಗಳಲ್ಲಿರುವವರನ್ನು ಈ ತಾಣದ ಮೂಲಕ ಸಂಪರ್ಕಿಸಹುದು.

● 'ನಿಮಗೆ ಪರಿಚಯವಿರುವವರು ಯಾರಾದರೂ ಸಮರ್ಥ ವ್ಯಕ್ತಿಗಳು ಇದ್ದರೆ ತಿಳಿಸಿ' ಎಂದು ತುಂಬಾ ಜನರ ಬಳಿ ರೆಫರೆನ್ಸ್ ಅನ್ನು ಕೆಲವು ಸಂಸ್ಥೆಗಳು ಕೇಳುತ್ತವೆ. 'ನನಗೆ ತಿಳಿದಿರುವ ಒಬ್ಬ ಹುಡುಗ ಇದ್ದಾನೆ' ಎಂದು ಕೆಲವರು ಕೂಡಲೇ ಅಗತ್ಯ ಮಾಹಿತಿಗಳನ್ನು ನೀಡುತ್ತಾರೆ. ಆದುದರಿಂದಲೇ ನೀವು ಎಲ್ಲಿ ಕೆಲಸಕ್ಕೆ ಸೇರಿಕೊಂಡರೂ ಅಲ್ಲಿರುವ ಒಳ್ಳೆಯ ವ್ಯಕ್ತಿಗಳ ಜೊತೆ ಒಳ್ಳೆಯ ಸಂಬಂಧವನ್ನು ಇಟ್ಟುಕೊಳ್ಳಿ. ನೀವು ಸಮರ್ಥವಾಗಿ ಕೆಲಸ ಮಾಡುವವರು ಎನ್ನುವುದನ್ನು ಅವರಿಗೆ ನಿರೂಪಿಸಿ ತೋರಿಸಿ. ನಂತರ ಅವರೇ ನಿಮಗೆ ಅಗತ್ಯವಾದ ಬಾಗಿಲುಗಳನ್ನು ತೆರೆದಿಡುತ್ತಾರೆ.

● ನೀವು ಯಾವ ಕೆಲಸವನ್ನು ಮಾಡುತ್ತೀರೋ, ಯಾವ ಕೆಲಸದಲ್ಲಿ ಮುಂದಿನ ಹಂತವನ್ನು ತಲುಪಬೇಕೆಂದು ಬಯಸುವಿರೋ ಅದಕ್ಕೆ ತಕ್ಕ ಅರ್ಹತೆಗಳನ್ನು ದಿನದಿನವೂ ಬೆಳೆಸಿಕೊಳ್ಳಿ.

● ಕೆಲಸವನ್ನು ಹುಡುಕುವಾಗ ಯಾವ ಹಂತದಲ್ಲೂ ನಿರಾಶೆಗೊಳ್ಳಬೇಡಿ. ಕೆಲವರಿಗೆ ಅದೃಷ್ಟವಶಾತ್ ಒಂದೇ ದಿನದಲ್ಲಿ ಕೆಲಸ ದೊರಕಬಹುದು. ಹಲವರು ದಿನಗಟ್ಟಲೆ ಕಾಯಬೇಕಾಗಿ ಬರಬಹುದು. ಕಡೆಯವರೆಗೂ ಉತ್ಸಾಹವನ್ನು ಕಳೆದುಕೊಳ್ಳದೆ ಎಲ್ಲ ಸಂದರ್ಶನಗಳಿಗೂ ಹಾಜರಾಗಿ. ನಿಮ್ಮನ್ನು ಸಂದರ್ಶಿಸುವವರಿಗೆ ಬೇಸರವೋ, ನಿರಾಶೆಯೋ ಉಂಟಾಗದ ರೀತಿಯಲ್ಲಿ ಸ್ವಾರಸ್ಯಕರವಾದ ರೀತಿಯಲ್ಲಿ ಉತ್ತರಿಸಿ. 'ನಿಮ್ಮನ್ನು ಪರಿಚಯಿಸಿಕೊಳ್ಳಿ', 'ಈ ಕೆಲಸವನ್ನು ನೀವೇಕೆ ಬಯಸುತ್ತೀರಿ' ಇತ್ಯಾದಿ ಪ್ರಶ್ನೆಗಳಿಗೆ ಕೂಡ ಸ್ವಾರಸ್ಯವಾಗಿ ಉತ್ತರಿಸಿ. ಸಂದರ್ಶನ ಮುಗಿದ ಕೂಡಲೇ, ಮರೆಯದೆ ಧನ್ಯವಾದಗಳನ್ನು ಅರ್ಪಿಸಿ. ಪ್ರಾಮಾಣಿಕವಾಗಿ ನೀವು ಸಂದರ್ಶನವನ್ನು ಎದುರಿಸಿದರೆ ಯಶಸ್ಸು ಖಂಡಿತ ದೊರಕುತ್ತದೆ. ●









# ನಿಮ್ಮೊಳಗೆ ಇರುವ ಮಗುವನ್ನು ಹುಡುಕಿರಿ!

ಅಮ್ಮನ ಹೊಟ್ಟೆಯಿಂದ ಮಗು ಮೊದಲ ಬಾರಿಗೆ ಈ ಜಗತ್ತಿಗೆ ಪ್ರವೇಶಿಸಿದಾಗ, ಅದು ಮೊದಲು ಮಾಡುವ ಕೆಲಸವೆಂದರೆ ಅಳುವುದು! ಅಮ್ಮನ ಕರುಳಬಳ್ಳಿಯ ಸಂಬಂಧ ಕಡಿದು ಹೋದ ಭಯ, ಹೊಸ ಸ್ಥಳಕ್ಕೆ ಬಂದಿದ್ದೇವೆ ಎನ್ನುವ ಭಯ ಅದಕ್ಕೆ. ಮಗು ಹೀಗೆ ಅಳದೇ ಹೋದರೆ ಡಾಕ್ಟರ್ ಅದರ ಬೆನ್ನಿನ ಮೇಲೆ ಕೈಯಿಂದ ತಟ್ಟಿ ಅದು ಅಳುವಂತೆ ಮಾಡುತ್ತಾರೆ.

ಹೀಗೆ ಜೀವನವಿಡೀ ಪ್ರತಿಯೊಂದು ಹಂತದಲ್ಲೂ ಯಾವುದೋ ಒಂದು ವಿಷಯ ನಮ್ಮನ್ನು ತಟ್ಟಿ ಬೆಳೆಸುತ್ತದೆ. ಸ್ವಲ್ಪ ಬೆಳೆದು ಈ ಜಗತ್ತು ಏನೆಂದು ಅರ್ಥವಾಗಲು ಆರಂಭಿಸಿದ ಮೇಲೆ, ಹಲವಾರು ಜನರು ತಮ್ಮೊಳಗೆ ಇರುವ ಬಾಲ್ಯದ ಸಹಜತೆಯನ್ನು ಕಳೆದುಕೊಳ್ಳುತ್ತಾರೆ.

ಆದರೆ ಆ ಬಾಲ್ಯವನ್ನು ತಮ್ಮೊಳಗೆ ಬೊಕ್ಕಸದಂತೆ ರಕ್ಷಿಸಿಟ್ಟುಕೊಳ್ಳುವವರಲ್ಲಿ ತುಂಬಾ ಜನರು ಭವಿಷ್ಯದಲ್ಲಿ ಅತಿ ದೊಡ್ಡ ಸಾಧಕರಾಗಿ ಬದಲಾಗಿದ್ದಾರೆ.

ಲಿಯೊನಾರ್ಡೋ ಡಾ ವಿಂಚಿ ಚಿಕ್ಕಂದಿನಲ್ಲೇ ಚಿತ್ರಕಲೆಯಲ್ಲಿ ಪರಿಣತಿಯನ್ನು ಸಾಧಿಸಿ ಅದ್ಭುತವಾದ ಚಿತ್ರಗಳನ್ನು ರಚಿಸತೊಡಗಿದರು. ರೆಕ್ಕೆಗಳನ್ನು ಹೊಂದಿರುವ ಯಂತ್ರಗಳನ್ನು ಕಲ್ಪಿಸಿಕೊಂಡು ಅದರ ಚಿತ್ರವನ್ನು ಅವರು ಆಗಲೇ ರಚಿಸಿದರು. ನಂತರ ವಿಮಾನಗಳನ್ನು ಕಂಡು ಹಿಡಿದವರಿಗೆ ಈ ಚಿತ್ರಗಳು ನೆರವಾದವು.

ಚಾರ್ಲ್ಸ್ ಡಾರ್ವಿನ್ ತಮ್ಮ ಬಾಲ್ಯದಲ್ಲೇ ಗಿಡಮರಗಳು ಆವರಿಸಿದ್ದ ಕಾಡುಗಳೊಳಗೆ ಹೋಗಿ ತುಂಬ ಶೋಧನೆ ಮಾಡುವುದನ್ನು ರೂಢಿಸಿಕೊಂಡಿದ್ದರು. ಬಂಡೆಗಲ್ಲುಗಳ ಮೇಲೆ ಆಟವಾಡುವ ಸಮಯದಲ್ಲಿ ಸುತ್ತಲೂ ಇರುವ ವೃಕ್ಷ ಸಂಕುಲವನ್ನೂ, ಪ್ರಾಣಿ ಸಂಕುಲವನ್ನೂ ಅವರು ಪರಿಶೋಧಿಸುತ್ತಿದ್ದರು. ಇವೆಲ್ಲದರ ಪರಿಣಾಮವಾಗಿ ಮುಂದೆ ಅವರು ಜೀವಸಂಕುಲಗಳ ವಿಕಾಸ ಸಿದ್ಧಾಂತವನ್ನು ರೂಪಿಸಲು ಸಾಧ್ಯವಾಯಿತು.

ಚಿಕ್ಕ ವಯಸ್ಸಿನಲ್ಲಿ ದೇವಾಲಯಗಳಲ್ಲಿ ಹಾಡಿ ಹಾಡಿ ಅಭ್ಯಾಸ ಮಾಡುತ್ತಿದ್ದ ಹಾಗೂ ಹೀಗೆ ಹಾಡುವುದೇ ತನ್ನ ಜೀವನದ ಸಾರ್ಥಕತೆ ಎಂದು ಭಾವಿಸಿದ್ದ ಮೊಸಾರ್ಟ್ ಮುಂದೆ ಅತಿ ದೊಡ್ಡ ಸಂಗೀತಗಾರನಾಗಿ ಪ್ರಸಿದ್ಧನಾದ. ಇದೇ ರೀತಿಯಾಗಿ ಸಂಗೀತದ ಕ್ಯಾಸೆಟ್‌ಗಳನ್ನು ತುಂಬ ಆಸಕ್ತಿಯಿಂದ ಸಂಗ್ರಹಿಸುತ್ತಿದ್ದ ಮೈಕೇಲ್ ಜಾಕ್‌ಸನ್, ಅವುಗಳನ್ನು ಕೇಳಿ ಕೇಳಿ ತನ್ನ ಸಂಗೀತ ಜ್ಞಾನವನ್ನು ಸರಿಯಾಗಿ ಗುರುತಿಸಿಕೊಂಡರು. ಮುಂದೆ ಜಗತ್ತಿನ ಅತಿ ಶ್ರೇಷ್ಠ ಹಾಗೂ ಪ್ರಸಿದ್ಧ ಸಂಗೀತಗಾರನಾಗಿ ಇವರು ಹೆಸರು ಗಳಿಸಿದರು.

ಮಗುವಾಗಿದ್ದಾಗ ಬಂಡೆಗಲ್ಲಿನ ಚೂರುಗಳನ್ನು ತೆಗೆದುಕೊಂಡು ಮೇರಿ ಕ್ಯೂರಿ ಆಟವಾಡುತ್ತಿದ್ದಳು. ಅವುಗಳಲ್ಲಿ ಕೆಲವು ಕಲ್ಲುಗಳು ಮಾತ್ರ ಏಕೆ ಸೂರ್ಯನ ಬೆಳಕನ್ನು ಒಳಗೆ ತೆಗೆದುಕೊಳ್ಳುತ್ತವೆ, ಕೆಲವು ಕಲ್ಲುಗಳ ಸೂರ್ಯನ ಬೆಳಕನ್ನು ಏಕೆ ಪ್ರತಿಫಲಿಸುತ್ತವೆ ಎಂದು ಅವಳಿಗೆ ಕುತೂಹಲವಾಗುತ್ತಿತ್ತು. ಅವಳಲ್ಲಿ ಮೂಡಿದ ಈ ಪ್ರಶ್ನೆಯೇ ಮುಂದೆ ಅವಳು ನೊಬೆಲ್ ಪ್ರಶಸ್ತಿಯನ್ನು ಪಡೆಯುವ ಒಬ್ಬ ಉತ್ತಮ

ವಿಜ್ಞಾನಿಯನ್ನಾಗಿ ಅವಳನ್ನು ಪರಿವರ್ತಿಸಿದ್ದು. ವಿವಿಧ ಬಗೆಯ ಅಕ್ಷರಗಳ ಸ್ವರೂಪಗಳ ಮೇಲೆ ಸ್ಟೀವ್ ಜಾಬ್ಸ್‌ಗೆ ಇದ್ದ ಆಸಕ್ತಿಯೇ ಆತ ಆಪಲ್ ಕಂಪ್ಯೂಟರ್‌ನ ವಿನ್ಯಾಸವನ್ನು ರೂಪಿಸುವಂತೆ ಮಾಡಿದ್ದು.

ಇವರೆಲ್ಲರೂ ತಮ್ಮ ಆಸಕ್ತಿಯನ್ನು ಬಾಲ್ಯದಲ್ಲಿಯೇ ಅರಿತುಕೊಂಡಿದ್ದರು. ತಾವು ಬೆಳೆಯುತ್ತಾ ಹೋದಂತೆ ತಮ್ಮ ಆಸಕ್ತಿಯನ್ನೂ ಬೆಳೆಸಿಕೊಂಡರು. ತಮ್ಮೊಳಗೆ ಇದ್ದ ಶಿಶುತನವನ್ನು ಯಾವಾಗಲೂ ಅವರು ಜೀವಂತವಾಗಿಟ್ಟುಕೊಂಡಿದ್ದರು. ತಮ್ಮೊಳಗೆ ಇರುವ ಬಾಲ್ಯವೇ ತಮ್ಮನ್ನು ಸರಿಯಾದ ಹಾದಿಯಲ್ಲಿ ಕರೆದುಕೊಂಡು ಹೋಗುತ್ತದೆ ಎನ್ನುವುದನ್ನೂ ಅವರು ಅರ್ಥ ಮಾಡಿಕೊಂಡಿದ್ದರು.

ನಮ್ಮಲ್ಲಿ ತುಂಬಾ ಜನರು ಬೆಳೆಯುತ್ತಾ ಹೋದಂತೆ ತಮ್ಮೊಳಗಿನ ಬಾಲ್ಯವನ್ನು ಕಳೆದುಕೊಂಡು ಬಿಡುತ್ತಾರೆ. ಈ ಸಮಾಜ ಕೂಡ ನಮ್ಮನ್ನು, 'ಮಗುವಿನ ಹಾಗೆ ನಡೆದುಕೊಳ್ಳಬೇಡ. ನಿನ್ನ ವಯಸ್ಸಿಗೆ ತಕ್ಕಂತೆ ಇರು' ಎಂದು ಒತ್ತಾಯ ಮಾಡುತ್ತಲೇ ಇರುತ್ತದೆ. ಜವಾಬ್ದಾರಿಗಳು, ಹೊರೆಗಳು, ಸಮಸ್ಯೆಗಳು, ಚಿಂತೆಗಳು ಹೀಗೆ ಎಲ್ಲವೂ ನಮ್ಮನ್ನು ಆವರಿಸಿಕೊಳ್ಳುವಾಗಲೇ ನಾವು ವಯಸ್ಸಾದುದನ್ನು ಕಡ್ಡಾಯವಾಗಿ ಅರಿಯುವಂತೆ ಮಾಡುತ್ತವೆ. ಅದು ನಮ್ಮೊಳಗಿನ ಮಗುತನವನ್ನು ಹೊಸಕಿ ಹಾಕಿಬಿಡುತ್ತದೆ.

ಮಗುವಿನಲ್ಲಿರುವ ಆಸಕ್ತಿಯೂ, ದೊಡ್ಡವರಲ್ಲಿರುವ ಅನುಭವವೂ ಒಟ್ಟಿಗೇ ಸೇರುವಾಗ ನಾವು ಯಶಸ್ಸಿನ ಹಾದಿಯಲ್ಲಿ ಹೆಜ್ಜೆಯಿಡುತ್ತೇವೆ. ನಮ್ಮೊಳಗೆ ಇರುವ ಮಗುತನವನ್ನು ಹುಡುಕಿ ಸುರಕ್ಷಿತವಾಗಿಟ್ಟುಕೊಳ್ಳುವುದು ಹೇಗೆ ?



**ಆಟೋಟಗಳು :** ಪ್ರತಿದಿನವೂ ಕೆಲವು ನಿಮಿಷಗಳಾದರೂ ಯಾವುದಾದರೂ ಒಂದು ಆಟವಾಡಿ. ಹೀಗೆ ಆಟವಾಡುವಾಗ ಅದರಿಂದ ನಿಮಗೆ ಸಂತೋಷ ದೊರಕಬೇಕಾದುದು ಮುಖ್ಯ. ಆಟದಲ್ಲಿ ಸೋತು ಹೋಗಿ ಅದರಿಂದ ಇನ್ನಷ್ಟು ಮಾನಸಿಕ ಒತ್ತಡಕ್ಕೆ ಈಡಾಗುವುದು ಬೇಡ. ಯಶಸ್ಸು, ಸೋಲುಗಳ ಬಗ್ಗೆ ಯೋಚಿಸದೆ ಕೇವಲ ಆಟದ ಕಡೆ ಮಾತ್ರ ಗಮನವನ್ನು ಕೇಂದ್ರೀಕರಿಸಿ.

**ವಿಶ್ರಾಂತಿ :** ದಿನವೂ ಸ್ವಲ್ಪ ಹೊತ್ತು ವಿಶ್ರಾಂತಿ ತೆಗೆದುಕೊಳ್ಳುವುದು ತುಂಬಾ ಮುಖ್ಯ. ಆ ಸಮಯವನ್ನು ಯಾವುದನ್ನಾದರೂ ಯೋಚಿಸಲು ಮೀಸಲಾಗಿಡಿ.

ಐನ್‌ಸ್ಟೀನ್ ಮೊದಲು ಒಂದು ವಿಮಾ ಕಂಪನಿಯಲ್ಲಿ ಕ್ಲರ್ಕ್ ಉದ್ಯೋಗವನ್ನು ಮಾಡುತ್ತಿದ್ದರು. ಅಲ್ಲಿ ವಿಶ್ರಾಂತಿಯ ಸಮಯದಲ್ಲಿ ಅವರು ಯೋಚಿಸಿ ಸೃಷ್ಟಿಸಿದವುಗಳೇ ಅವರನ್ನು ಮನುಷ್ಯ ಕುಲದ ಅತಿಶ್ರೇಷ್ಠ ವಿಜ್ಞಾನಿಯನ್ನಾಗಿ ಪರಿವರ್ತಿಸಿದ್ದು. ಶ್ರೇಷ್ಠ ಗಣಿತ ತಜ್ಞನೂ ಸಾಹಿತಿಯೂ ಆದ ಅಡಾ ಲೌಲೇಸ್, ಕಂಪ್ಯೂಟರನ್ನು ಕಂಡು ಹಿಡಿಯುವ 120 ವರ್ಷಗಳ ಮೊದಲೇ ಅದರ ಬಗ್ಗೆ ತನ್ನ ಕೃತಿಗಳಲ್ಲಿ ಬರೆದಿದ್ದ! ಆತ ಮನೆಯಲ್ಲಿ ವಿಶ್ರಾಂತಿ ತೆಗೆದುಕೊಳ್ಳುವ ಸಮಯದಲ್ಲಿ ಇದರ ಬಗ್ಗೆ ಯೋಚಿಸಿ ಯೋಚಿಸಿ ಬರೆದವುಗಳು ಅವು.

**ಪ್ರಶ್ನೆಗಳು :** ಮಕ್ಕಳು ಯಾವಾಗಲೂ ಪ್ರಶ್ನೆ ಕೇಳಲು ಹಿಂಜರಿಯುವುದಿಲ್ಲ. ದೊಡ್ಡವರು ಬಾಯಿ ತೆರೆದು ಮಾತನಾಡಲು ಹಿಂದೇಟು ಹಾಕುವಂತಹ ಪ್ರಶ್ನೆಗಳನ್ನು ಅವರು ಸರ್ವೇಸಾಧಾರಣವಾಗಿ ಕೇಳಿ ಬಿಡುತ್ತಾರೆ. ಅವರಿಗೆ ಅಗತ್ಯ ಉತ್ತರಗಳು ಅಷ್ಟೇ. ಉತ್ತರ ದೊರೆಯುವವರೆಗೆ ಅವರು ನಮ್ಮ ಪ್ರಾಣ ಹಿಂಡಿ ಬಿಡುತ್ತಾರೆ. ದೊಡ್ಡವರಾದ ಮೇಲೆ ಅವರೇ ಕೆಲವು ಊಹೆಗಳನ್ನು ಮಾಡಿಕೊಂಡು ಪ್ರಶ್ನೆ ಕೇಳುವುದನ್ನು ನಿಲ್ಲಿಸಿ ಬಿಡುತ್ತಾರೆ. ಒಂದು ದ್ವೀಪದಲ್ಲಿ ವಾಸಿಸುವ ಜೀವಿಗಳಿಗೂ, ಅದರ ಪಕ್ಕದ ದ್ವೀಪದಲ್ಲಿ ವಾಸಿಸುವ ಜೀವಿಗಳಿಗೂ ನಡುವೆ ಯಾವ ಬಗೆಯ ವ್ಯತ್ಯಾಸಗಳಿರುತ್ತವೆ ಎಂದು ತಮ್ಮೊಳಗೆ ಸದಾ ಏಳುತ್ತಿದ್ದ ಪ್ರಶ್ನೆಗೆ ಡಾರ್ವಿನ್ ಕಡೆಗೂ ಉತ್ತರ ಕಂಡುಕೊಂಡ. ಆತನ ಈ ಸಂಶೋಧನೆ ಜೀವ ಸಂಕುಲದ ವಿಕಾಸವನ್ನು ಈ ಜಗತ್ತಿಗೆ ಪರಿಚಯ ಕೊಟ್ಟಿತು. ಆದುದರಿಂದಲೇ ನಿಮ್ಮ ಪ್ರಶ್ನೆಗಳಿಗೂ ಉತ್ತರ ಕಂಡುಹಿಡಿಯುವುದನ್ನು ಬಿಡಬೇಡಿ.

**ಸ್ನೇಹ:** ಮಕ್ಕಳು ಎಲ್ಲರ ಬಳಿಯೂ ತುಂಬ ಸುಲಭವಾಗಿ ಸ್ನೇಹವನ್ನು ಗಳಿಸಿಕೊಳ್ಳುತ್ತಾರೆ. ಯಾವಾಗಲೂ ಅವರು ಸಂಕೋಚದಿಂದ ಒಂಟಿಯಾಗಿ ಇರಲು ಬಯಸುವುದಿಲ್ಲ. ಬಾಲ್ಯದಿಂದಲೂ ನಮಗೆ ದೊರಕುವ ಸ್ನೇಹವನ್ನು ಕಳೆದುಕೊಳ್ಳದೆ ಬೆಳೆಯಬೇಕು. ಸ್ಟೀವ್ ಜಾಬ್ಸ್, ಸ್ಟೀವ್ ವೋಸ್ನಿಯಾಕ್ ಇಬ್ಬರೂ ದೀರ್ಘ ಕಾಲದ ಸ್ನೇಹಿತರು. ಆ ಸ್ನೇಹವೇ ಅವರು ಜೊತೆಯಾಗಿ ಸೇರಿ ಆಪಲ್ ಸಂಸ್ಥೆಯನ್ನು ಸ್ಥಾಪಿಸಲು ಕಾರಣವಾಗಿತ್ತು.

**ಆಸಕ್ತಿ :** ವಿದ್ಯುಚ್ಛಕ್ತಿಯನ್ನು ಕಂಡು ಹಿಡಿಯಲು ಬೆಂಜಮಿನ್ ಫ್ರಾಂಕ್ಲಿನ್ ಆಸಕ್ತಿಯಿಂದ ಗಾಳಿಪಟವನ್ನು ಏರಿಸಿ ಆಟವಾಡಿ ನೋಡಿದರು. ಒಂದು ಕಲ್ಲನ್ನೂ, ರೆಕ್ಕೆಯನ್ನೂ ಮೇಲಿನಿಂದ ಕೆಳಗೆ ಹಾಕಿದರೆ ಯಾವುದು ಮೊದಲು ಕೆಳಗೆ ಬೀಳುತ್ತದೆ ಎಂಬುದನ್ನು ಪರಿಶೀಲಿಸಿ ನೋಡಿ ಭೂಮಿಯ ಗುರುತ್ವಾಕರ್ಷಣ ಶಕ್ತಿಯನ್ನು ಗುರುತಿಸಿದ ಗೆಲಿಲಿಯೋ. ಆಸಕ್ತಿಯೇ ಹೊಸ ಪ್ರಯತ್ನಗಳಿಗೆ ಆಧಾರವಾಗಿರುತ್ತದೆ.

**ಕನಸು :** ಈ ಪರೀಕ್ಷೆಯಲ್ಲಿ ಅಂಕಗಳು ಕಡಿಮೆಯಾದರೆ ಏನಾಗುತ್ತದೆ? ಈ ತಿಂಗಳು ವ್ಯಾಪಾರ ಕಡಿಮೆಯಾಗಿದೆ, ಆ ನಷ್ಟವನ್ನು ಹೇಗೆ ಸರಿದೂಗಿಸುವುದು? ಕಛೇರಿಯಲ್ಲಿ ಮುಗಿಸದೇ ಬಿಟ್ಟ ಕೆಲಸಕ್ಕಾಗಿ ಬೈಸಿಕೊಳ್ಳಬೇಕಾಗಿ ಬರುತ್ತದೋ ಏನೋ? ಅವರ ಬಳಿ ಸಾಲ ಕೇಳಿದ್ದೆ, ಅದು ಬಾರದೆ ಹೋದರೆ ಏನು ಮಾಡುವುದು? ಹೀಗೆ ತಲೆಯೊಳಗೆ ಹಲವು ಸಮಸ್ಯೆಗಳು ಸುಳಿದಾಡುತ್ತಿದ್ದರೂ, ಇನ್ನೊಂದು ಕಡೆ ಕನಸು ಕಾಣುವುದನ್ನು ನಿಲ್ಲಿಸಬೇಡಿ. ವರ್ತಮಾನದ ಸಮಸ್ಯೆಗಳನ್ನೂ ಮೀರಿ ಭವಿಷ್ಯಕ್ಕೆ ಸಂಬಂಧಿಸಿದ ನಂಬಿಕೆಗೆ ಕನಸುಗಳೇ ಬಾಗಿಲನ್ನು ತೆರೆದಿಡುವುದು.



# ಹುಡುಕಾಡಿ ಜಯಿಸಿದ ಹೀರೋಗಳು!

'ಈ ಕ್ಷೇತ್ರದಲ್ಲಿ ನಾನು ಸಾಧಿಸಲು ಬಯಸುತ್ತೇನೆ' ಎಂದು ಅದರೊಳಗೆ ಹುಡುಕಾಡಲು ಬಯಸುವವರು ಕೆಲವರು. ಕೆಲವೊಮ್ಮೆ ಸಮಸ್ಯೆಗಳು ಬಂದು ಅವರ ಕಾಲಿನ ಸರಪಳಿಯಂತೆ ಸುತ್ತಿಕೊಳ್ಳಬಹುದು. ಸೋಲುಗಳು ತಲೆಯ ಮೇಲೆ ಬಂಡೆಗಲ್ಲುಗಳಂತೆ ಬಂದು ಬೀಳಬಹುದು. ಇವುಗಳ ಹೊರೆಯನ್ನು ತಾಳಲಾರದೆ ತುಂಬಾ ಜನ ಸೋತು ಹೋಗುತ್ತಾರೆ. ಆದರೆ, 'ನನ್ನಿಂದ ಸಾಧ್ಯ' ಎಂದು ದೃಢವಾಗಿ ನಿಂತುಕೊಂಡರೆ ಯಾವುದನ್ನೇ ಆಗಲಿ ಸಾಧಿಸಬಹುದು. ಹಾಗೆ ಸಾಧಿಸಿ ತೋರಿಸಿದ ಕೆಲವು ಆದರ್ಶ ವ್ಯಕ್ತಿಗಳು ಇದೋ ಇಲ್ಲಿದ್ದಾರೆ:




**ವುಡಿ ಅಲೆನ್ :** ಹಾಲಿವುಡ್ ಚಲನಚಿತ್ರಗಳನ್ನು ನೋಡುವವರಿಗೆ ಈತನ ಹೆಸರು ತಿಳಿದಿರದೆ ಇರಲು ಸಾಧ್ಯವೇ ಇಲ್ಲ. ಕಾಲಚಕ್ರ ಅಳಿಸಿ ಹಾಕಲು ಸಾಧ್ಯವೇ ಇಲ್ಲದಂತಹ ಚಿತ್ರಗಳನ್ನು ಈತ ನಿರ್ಮಿಸಿದ್ದಾನೆ. ನಾಲ್ಕು ಸಲ ಆಸ್ಕರ್ ಪ್ರಶಸ್ತಿಯನ್ನು ಗಳಿಸಿದ ಸಾಧನೆ ಈತನದು. ಆದರೆ, ಈತ ತನ್ನ ಯೌವನದಲ್ಲಿ ನ್ಯೂಯಾರ್ಕ್ ವಿಶ್ವವಿದ್ಯಾಲಯದಲ್ಲಿ ಚಲನಚಿತ್ರ ಪದವಿಗಾಗಿ ವ್ಯಾಸಂಗ ಮಾಡುವಾಗ ಪರೀಕ್ಷೆಯಲ್ಲಿ ಹಲವು ಸಲ ಫೇಲ್ ಆಗಿದ್ದ. ಒಂದು ಹಂತದಲ್ಲಿ ಕಾಲೇಜಿನಿಂದ ಈತನನ್ನು ಹೊರ ಹಾಕಲಾಯಿತು. ಓದಿ ಮುಗಿಸಿ ಪದವಿ ಗಳಿಸದೇ ಹೋದರೂ ಕೂಡ ಈತ ತಾನು ಅಂದುಕೊಂಡಿದ್ದನ್ನು ಸಾಧಿಸಿ ತೋರಿಸಿದ ಮಹಾನ್ ಸಾಧಕ.



**ಗೇಬ್ರಿಯಲ್ ಜೀಸಸ್ :** ಬ್ರೆಸಿಲ್ ದೇಶದ ಪ್ರಸಿದ್ಧ ಕಾಲ್ಚೆಂಡು ಆಟಗಾರನೀತ. ಬಾಲ್ಯದಲ್ಲಿ ರಸ್ತೆಗಳಲ್ಲಿ ಕಾಲ್ಚೆಂಡು ಆಟ ಅಭ್ಯಾಸ ಮಾಡುತ್ತಿದ್ದ ಈತನಿಗೆ ತನ್ನ ದೇಶಕ್ಕಾಗಿ ಕಾಲ್ಚೆಂಡು ಸ್ಪರ್ಧೆಯಲ್ಲಿ ಭಾಗವಹಿಸಿ ಜಯಿಸಬೇಕು ಎಂಬ ಅತಿ ದೊಡ್ಡ ಕನಸಿತ್ತು. 2014ರಲ್ಲಿ ವಿಶ್ವ ಕಪ್ ಕಾಲ್ಚೆಂಡು ಸ್ಪರ್ಧೆ ಬ್ರೆಜಿಲ್ ದೇಶದಲ್ಲಿ ನಡೆದಾಗ, ಬರಿಗಾಲಿನಲ್ಲಿ ಬೀದಿಗಳಲ್ಲಿ ಈತ ಪೆಯಿಂಟ್ ಬಳಿಯುವ ಕೆಲಸವನ್ನು ಮಾಡಿದ. ಕಾಲ್ಚೆಂಡು ಸ್ಪರ್ಧೆಗಳನ್ನು ಯಾರ್‍ಯಾರದೋ ಮನೆಯ ಟಿ.ವಿ.ಗಳಲ್ಲಿ ಆಸಕ್ತಿಯಿಂದ ನೋಡಿದ. ನಿರಂತರ ಪ್ರಯತ್ನದ ಮೂಲಕ ತನ್ನ ಸಾಮರ್ಥ್ಯವೇನು ಎಂಬುದನ್ನು ನಿರೂಪಿಸಿ ತೋರಿಸಿ ಬ್ರೆಜಿಲ್ ತಂಡದೊಳಗೆ ಸ್ಥಾನ ಗಳಿಸಿದ. ಇಂದು ಈತ ವರ್ಷಕ್ಕೆ 38 ಕೋಟಿ ಆದಾಯ ಗಳಿಸುತ್ತಿದ್ದಾನೆ.



**ಹೋವರ್ಡ್ ಷಲ್ಸ್ :** ಸ್ಟಾರ್ ಬಕ್ಸ್ ಸಂಸ್ಥೆಯು ಆರಂಭದಲ್ಲಿ ಕೇವಲ ಕಾಫಿ ಬೀಜಗಳನ್ನು ಮಾತ್ರ ಮಾರುವ ಒಂದು ಕಂಪೆನಿಯಾಗಿತ್ತು. ಅಲ್ಲಿಗೆ ಬರುವ ಗ್ರಾಹಕರು ಆರಾಮವಾಗಿ ಕುಳಿತು ಕಾಫಿ ಕುಡಿಯಲು ಅನುವಾಗುವಂತೆ ಅಲ್ಲೇ ಒಂದು ಕಾಫಿ ಷಾಪ್ ಅನ್ನೂ ಆರಂಭಿಸಬೇಕು ಎನ್ನುವುದು ಹೋವರ್ಡ್ ಷಲ್ಸ್‌ನ ಕನಸು. ಆದರೆ ಆತ ಆ ಸಮಯದಲ್ಲಿ ಆ ಕಂಪನಿಯಲ್ಲಿ ಒಬ್ಬ ನೌಕರ ಮಾತ್ರ. ಈತನ ಸಲಹೆಯನ್ನು ನಿರ್ವಾಹಕರು ಒಪ್ಪಲಿಲ್ಲ. ಇದರಿಂದಾಗಿ ಆ ಕಂಪನಿಯನ್ನೇ ಬಿಟ್ಟು ಹೊರಬಂದು ತಾನೇ ಸ್ವತಃ ಒಂದು ಕಂಪನಿಯನ್ನು ಆರಂಭಿಸಿದ. ಎರಡೇ ವರ್ಷಗಳಲ್ಲಿ ಆತ ಸ್ಟಾರ್ ಬಕ್ಸ್ ಕಂಪನಿಯನ್ನೇ ಕೊಂಡುಕೊಂಡ. ಇಂದು ಅಮೇರಿಕಾದಲ್ಲಿ ಮಾತ್ರವೇ ಅಲ್ಲದೆ ಜಗತ್ತಿನಾದ್ಯಂತ ಸ್ಟಾರ್‌ಬಕ್ಸ್ ಅತಿ ದೊಡ್ಡ ಕಾಫಿ ಷಾಪ್ ಆಗಿದೆ. ಎಲ್ಲೆಡೆಯೂ ಇದರ ಶಾಖೆಗಳಿವೆ.



**ಸ್ಟ್ಯಾನ್ಲಿ ಸ್ಮಿತ್ :** ಅಮೇರಿಕಾದ ವಿಶ್ವಪ್ರಸಿದ್ಧ ಟೆನ್ನಿಸ್ ಆಟಗಾರನೀತ. ಡೇವಿಸ್ ಕಪ್ ಅನ್ನು ಅಮೇರಿಕಾದ ತಂಡ ಎಂಟು ಸಲ ಗೆಲ್ಲಲು ಕಾರಣನಾಗಿದ್ದವನು ಇವನೇ. ಆದರೆ, ಬಾಲ್ಯದಲ್ಲಿ ಈತನಿಗೆ ಆಟದ ಮೈದಾನದೊಳಗೆ ಪ್ರವೇಶಿಸುವುದಕ್ಕೇ ತಡೆ ವಿಧಿಸಲಾಗಿತ್ತು. 'ಸರಿಯಾದ ಸಮಯಕ್ಕೆ ಬರುವುದಿಲ್ಲ. ಆಟದ ಕಡೆ ಸರಿಯಾದ ಗಮನವನ್ನೂ ನೀಡುವುದಿಲ್ಲ' ಎಂದು ಹೇಳಿ ಈತನನ್ನು ನಿರಾಕರಿಸಲಾಯಿತು. ಇತರರು ಆಟವಾಡುವ ಸಮಯದಲ್ಲಿ ಮೈದಾನದ ಹೊರಗೆ ನಿಂತು ಚೆಂಡನ್ನು ತೆಗೆದುಕೊಡುವುದಕ್ಕೂ ಕೂಡ ಈತನಿಗೆ ಅನುಮತಿ

ದೊರಕಲಿಲ್ಲ. ಆದರೆ, ತನ್ನ ಹುಡುಕಾಟ ಇರುವುದು ಟೆನ್ನಿಸ್‌ನಲ್ಲೇ ಎಂಬುದನ್ನು ಈತ ಸಾಧನೆಯ ಮೂಲಕ ಜಗತ್ತಿಗೇ ತೋರಿಸಿದ.



**ಹಾರಿಸನ್ ಫೋರ್ಡ್ :** ವಿಶ್ವಪ್ರಸಿದ್ಧ ನಟನಾದ ಈತನ ಹೆಸರನ್ನು ಕೇಳದವರೇ ಇಲ್ಲ ಎನ್ನಬಹುದು. ಚಿಕ್ಕಂದಿನಲ್ಲಿ ಈತ ಅನುಭವಿಸದ ಕಷ್ಟಗಳೇ ಇಲ್ಲ. ಚಿಕ್ಕಂದಿನಲ್ಲಿ ಈತ ಚಿಕ್ಕ ಪುಟ್ಟ ಪಾತ್ರಗಳಲ್ಲಿ ನಟಿಸುತ್ತಿದ್ದ. ಆದರೆ ಈತನಿಗೆ ದೊರಕುತ್ತಿದ್ದ ಅವಕಾಶಗಳೂ ಆದಾಯವೂ ತುಂಬ ಕಡಿಮೆ. ಒಂದು ಹಂತದಲ್ಲಿ ಹೆಂಡತಿ ಮತ್ತು ಮಕ್ಕಳನ್ನು ಕಾಪಾಡುವುದಕ್ಕಾಗಿ ಕಾರ್ಪೆಂಟರ್ ಕೆಲಸವನ್ನೂ ಮಾಡಿದ್ದುಂಟು. ಆದರೂ, ಸಿನಿಮಾದ ಬಗೆಗಿನ ತನ್ನ ಹುಡುಕಾಟವನ್ನು ಮಾತ್ರ ಈತ ನಿಲ್ಲಿಸಲಿಲ್ಲ. ಮತ್ತೆ ಮತ್ತೆ ತನ್ನ ಅವಕಾಶಗಳಿಗಾಗಿ ಹುಡುಕಾಟವನ್ನು ಮುಂದುವರೆಸಿ ತನ್ನ ಪ್ರತಿಭೆ ಏನೆಂಬುದನ್ನು ತೋರಿಸಿದ. ಅದರ ನಂತರ ಅವರ ಕೀರ್ತಿಯ ಕಾಂತಿ ಕುಂದಲೇ ಇಲ್ಲ.



**ಅಮಾಂಜಿಯೋ ಒರ್ಟೆಗಾ :** ಸ್ಪೈಯಿನ್ ದೇಶದಲ್ಲಿ ಒಬ್ಬ ಸಾಮನ್ಯ ರೈಲ್ವೇ ಉದ್ಯೋಗಿಗೆ ಇವರು ಮಗನಾಗಿ ಜನಿಸಿದರು. ಕುಟುಂಬದ ಆರ್ಥಿಕ ಪರಿಸ್ಥಿತಿಯ ಕಾರಣದಿಂದಾಗಿ ಈತ ತನ್ನ ವಿದ್ಯಾಭ್ಯಾಸವನ್ನು ಮುಂದುವರೆಸಲಾಗಲಿಲ್ಲ. ಅಂಗಿಗಳನ್ನು ಹೊಲಿಯುವ ಒಂದು ಚಿಕ್ಕ ಅಂಗಡಿಯಲ್ಲಿ ಈತ ಕೆಲಸಕ್ಕೆ ಸೇರಿಕೊಂಡ. ಅಲ್ಲಿದ್ದಾಗ ಈತ ದೇಶದಾದ್ಯಂತ ಅಂಗಿಗಳನ್ನು ಮಾರಾಟ ಮಾಡುವ ಅಂಗಡಿಗಳನ್ನು ತೆರಯಬೇಕೆಂದು ಕನಸು ಕಾಣುತ್ತಿದ್ದ. ಕಠಿಣ ಪರಿಶ್ರಮದ ನಂತರ ಈತ ತನ್ನ ಕನಸನ್ನು ನನಸಾಗಿಸಿಕೊಂಡ. ಇಂದು ಅವರ 'ಝಾರಾ' ಸಂಸ್ಥೆಯ ಷೋರೂಮ್‌ಗಳು ಜಗತ್ತಿನಾದ್ಯಂತ ಹರಡಿವೆ. ಯೂರೋಪ್‌ನ ಮೂರನೇ ದೊಡ್ಡ ಶ್ರೀಮಂತ ವ್ಯಕ್ತಿಯೆಂದು ಇವರನ್ನು ಪರಿಗಣಿಸಲಾಗಿದೆ.



**ರೇಮಂಡ್ ಕ್ರಾಕ್ :** ಕೌಟುಂಬಿಕ ಆರ್ಥಿಕ ಸಂಕಷ್ಟದ ಕಾರಣದಿಂದ ಚಿಕ್ಕ ವಯಸ್ಸಿನಲ್ಲೇ ಪೇಪರ್ ಕಪ್‌ಗಳು, ಮಿಲ್ಕ್ ಷೇಕ್ ಇತ್ಯಾದಿ ವಸ್ತುಗಳನ್ನು ಬೀದಿಯಲ್ಲಿ ಮಾರಾಟ ಮಾಡುತ್ತಿದ್ದ ರೇಮಂಡ್ ಕ್ರಾಕ್. ಆಗಲೇ ಈತ ವಿಶ್ವದಾದ್ಯಂತ ಪ್ರಸಿದ್ಧಿ ಗಳಿಸುವಂತಹ ಒಂದು ಸಂಸ್ಥೆಯನ್ನು ಸ್ಥಾಪಿಸಬೇಕು ಎಂದು ಕನಸು ಕಾಣುತ್ತಿದ್ದ. ತನ್ನ 52ನೇ ವಯಸ್ಸಿನಲ್ಲಿ ಮ್ಯಾಕ್ ಡೊನಾಲ್ಡ್ ಸಂಸ್ಥೆಯನ್ನು ಈತ ಕೊಂಡುಕೊಂಡ. ಅಮೇರಿಕಾದ ಒಂದು ಚಿಕ್ಕ ಅಂಗಡಿಯಾಗಿದ್ದ ಅದನ್ನು ಈತ ಜಗತ್ತಿನಾದ್ಯಂತ ವಿಸ್ತರಿಸಿ, ರೆಸ್ಟೋರೆಂಟ್ ನಡೆಸುವ ಒಂದು ಅತಿದೊಡ್ಡ ಸಂಸ್ಥೆಯನ್ನಾಗಿ ಪರಿವರ್ತಿಸಿದ.



**ಸೊಯ್ಚಿರೋ ಹೋಂಡಾ :** ಬಡಕುಟುಂಬದಲ್ಲಿ ಜನಿಸಿ, ಚಿಕ್ಕಂದಿನಲ್ಲೇ ತಂದೆಗೆ ಸಹಾಯಕನಾಗಿ ಕೆಲಸ ಮಾಡಲು ಆರಂಭಿಸಿದವರು ಹೋಂಡಾ. ಬಾಲ್ಯದಲ್ಲಿ ಅಲ್ಪಸ್ವಲ್ಪ ವಿದ್ಯಾಭ್ಯಾಸದಲ್ಲಿ ಆಸಕ್ತಿ ಹೊಂದಿದ್ದ ಈತ, ಕುಟುಂಬಕ್ಕೆ ಸಹಾಯವಾಗಲಿ ಎಂದು ಒಂದು ಮೆಕ್ಯಾನಿಕ್ ಷಾಪ್‌ನಲ್ಲಿ ಕೆಲಸಕ್ಕೆ ಸೇರಿಕೊಂಡ. ಒಂದು ಮೋಟಾರ್ ಸೈಕಲ್ ನಿರ್ಮಿಸಬೇಕು ಎಂಬುದು ಆಗ ಈತನ ಕನಸಾಗಿತ್ತು. ಸೈಕಲ್‌ಗಳಲ್ಲಿ ಹಳೆಯ ಮೋಟಾರ್‌ಗಳನ್ನು ಜೋಡಿಸಿ ಓಡಿಸಿ ನೋಡಿ ತನ್ನ ತಿಳಿವಳಿಕೆಯನ್ನು ಈತ ಕೊಂಚಕೊಂಚವೇ ವಿಸ್ತರಿಸಿಕೊಂಡ. ಹಂತಹಂತವಾಗಿ ಬೆಳೆದು ಹೋಂಡಾ ಕಂಪನಿಯನ್ನು ಆರಂಭಿಸಿದ. ಇಂದು ಈ ಸಂಸ್ಥೆಯ ಹೆಸರನ್ನು ಕೇಳದವರೇ ಜಗತ್ತಿನಲ್ಲಿ ಯಾರೂ ಇಲ್ಲ.

●


RAMRAJ

ಬಿಳುಪು

ಭಾವನೆಗಳು

**ಸಂಚಿಕೆ 7 ಸಂಪುಟ 1**
**ಜೂನ್ 2024**

ಪ್ರಕಾಶಕರು ಮತ್ತು ಪ್ರಧಾನ ಸಂಪಾದಕರು
**ಕೆ.ಆರ್. ನಾಗರಾಜನ್**

ಲೇಖಕರು
**ತ.ಸೆ. ಜ್ಞಾನವೇಲ್**

ಗೌರವ ಸಂಪಾದಕರು ಮತ್ತು
ಕನ್ನಡಾನುವಾದ
**ಡಾ. ತಮಿಳ್ ಸೆಲ್ವಿ**
ಎಂ.ಎ., ಪಿಎಚ್.ಡಿ., ಡಿ.ಲಿಟ್.,
ಪ್ರಾಧ್ಯಾಪಕರು ಮತ್ತು ಮುಖ್ಯಸ್ಥರು
ಕನ್ನಡ ವಿಭಾಗ
ಮದ್ರಾಸ್ ವಿಶ್ವವಿದ್ಯಾಲಯ, ಚೆನ್ನೈ.

ರಚನೆ ಮತ್ತು ವಿನ್ಯಾಸ
**ತರು ಮೀಡಿಯಾ (ಪ್ರೈ) ಲಿ.,**
10/55, ರಾಜು ಸ್ಟ್ರೀಟ್
ವೆಸ್ಟ್ ಮಾಂಬಳಂ
ಚೆನ್ನೈ 600 033



ಈ ಸಂಚಿಕೆಯಲ್ಲಿರುವ ಯಾವುದೇ ಭಾಗವನ್ನಾಗಲೀ ವಿಷಯಗಳನ್ನಾಗಲೀ ಸಂಪಾದಕರ ಲಿಖಿತ ಪೂರ್ವ ಅನುಮತಿ ಪಡೆಯದೆ ಮರುಪ್ರಕಟಣೆ ಮಾಡುವುದಾಗಲೀ, ಅಂತರ್‌ಜಾಲ ತಾಣಗಳಲ್ಲಿ ಪುನರ್‌ದಾಖಲಿಸುವುದಾಗಲೀ ಮಾಹಿತಿ ಹಕ್ಕು ಕಾನೂನು ಬಾಹಿರ ಪ್ರಕ್ರಿಯೆಯಾಗಿರುತ್ತದೆ.



Published by
K.R. NAGARAJAN,
Published from
10, Sengunthapuram, Mangalam Road,
TIRUPUR - 641 604.
Ph: 0421-4304106



# ಹುಡುಕಾಟದ ನುಡಿಗಳು!

- ಯಾವುದನ್ನು ನೀನು ಹುಡುಕುತ್ತಿರುವೆಯೋ ಅದು ನಿನ್ನನ್ನು ಹುಡುಕುತ್ತಿದೆ!

- ನೆಮ್ಮದಿಯನ್ನು ಹುಡುಕುತ್ತಾ ಎಲ್ಲೆಲ್ಲಿಗೋ ಪ್ರಯಾಣ ಮಾಡುವವರು ಕಡೆಯಲ್ಲಿ ಮನೆಗೆ ಹಿಂದಿರುಗಿದ ಕೂಡಲೇ ಅಲ್ಲೇ ಅದನ್ನು ಕಂಡು ಹಿಡಿಯುತ್ತಾರೆ.

- ಪ್ರತಿಯೊಂದು ಸೋಲೂ ಒಂದು ಅನುಭವ; ಒಂದೊಂದು ನಷ್ಟವೂ ಒಂದು ಲಾಭ; ಪ್ರತಿಯೊಂದು ಬದಲಾವಣೆಯೂ ಒಂದು ಎಚ್ಚರಿಕೆ; ಒಂದೊಂದೂ ಕಾಣದೇ ಹೋಗುವುದೂ ಒಂದು ಹುಡುಕಾಟ.

- ಜೀವನದ ಹಾದಿಯಲ್ಲಿ ಹುಡುಕಾಟಕ್ಕೆ ಅಂತ್ಯವೆಂಬುದೇ ಇಲ್ಲ... ಬದುಕಿನ ಪ್ರತಿಯೊಂದು ಹಂತದಲ್ಲೂ ಮನುಷ್ಯ ಯಾವುದೋ ಒಂದನ್ನು ಹುಡುಕಾಡುತ್ತಾನೆ. ಅದನ್ನು ಗಳಿಸಿದ ನಂತರ ಇನ್ನೊಂದನ್ನು ಹುಡುಕಾಡಲು ತೊಡಗುತ್ತಾನೆ. ಅಂತ್ಯವೇ ಇಲ್ಲದ ಹುಡುಕಾಟ ನಮ್ಮನ್ನು ಬೆಳೆಸುತ್ತದೆ.

- ಒಂದು ಪಟ್ಟು ಸಾಮರ್ಥ್ಯ, ಒಂದು ಪಟ್ಟು ಹುಡುಕಾಟ, ಎರಡು ಪಟ್ಟು ತಾಳ್ಮೆ... ಹೀಗೆ ನಿಮ್ಮನ್ನು ನೀವೇ ಸಿದ್ಧಪಡಿಸಿಕೊಂಡರೆ ಮಾತ್ರವೇ ನಿಮ್ಮ ಗುರಿಯನ್ನು ಮುಟ್ಟಲು ನಿಮ್ಮಿಂದ ಸಾಧ್ಯ.

- ಹುಡುಕಿ ಹುಡುಕಿ ಕೆಲಸವನ್ನು ಮಾಡಿ ಮುಗಿಸುವವರೆಗೂ 'ಇದು ಸಾಧ್ಯವೇ ಇಲ್ಲ' ಎಂದು ಕೆಲವರು ಕಡೆಯವರೆಗೂ ನಕಾರಾತ್ಮಕ ಚಿಂತನೆಯಲ್ಲೇ ಮಾತನಾಡುತ್ತಿರುತ್ತಾರೆ.

- ಪ್ರತಿದಿನವೂ ಮುಂದೆ ಸಾಗುವುದೇ ನಿಜವಾದ ಹುಡುಕಾಟ.

- ನಂಬಿಕೆಯೊಂದಿಗೆ ಹುಡುಕಾಟವನ್ನು ಮುಂದುವರೆಸಿದರೆ, ಅ ನಂಬಿಕೆಯೇ ನಿಮ್ಮನ್ನು ಅರ್ಧ ದೂರ ಕರೆದುಕೊಂಡು ಹೋಗಿ ಬಿಡುತ್ತದೆ.

- ಸೋಲುಗಳು ನಿಮ್ಮ ಹುಡುಕಾಟಕ್ಕೆ ತಡೆ ಹಾಕಬಾರದು. ಅವು ನಿಮಗೆ ದಾರಿ ತೋರಿಸುವಂತಿರಬೇಕು.

- ಇಂದು ಕಠಿಣವಾದ ದಿನವಾಗಿರಬಹುದು. ನಾಳೆ ಅದಕ್ಕಿಂದ ಕೆಟ್ಟ ದಿನವಾಗಿರಬಹುದು. ಅದರ ನಂತರ ನಂಬಿಕೆಯ ಆಶಾಕಿರಣ ನಿಮ್ಮ ಕಣ್ಣುಗಳಿಗೆ ಕಾಣಿಸತೊಡಗುತ್ತದೆ. ಆದುದರಿಂದಲೇ ಹುಡುಕಾಟವನ್ನು ಕೈಬಿಡಬೇಡಿ.

- ಜೀವನದಲ್ಲಿ ಕೆಲವೊಮ್ಮೆ ಕೆಲವು ಪ್ರಯತ್ನಗಳನ್ನು ನೀವು ಕೈಬಿಡಬೇಕಾಗಿ ಬರಬಹುದು. ಆದರೆ, ಒಮ್ಮೆಯೂ ನಿಮ್ಮ ಹುಡುಕಾಟವನ್ನು ಮಾತ್ರ ನಿಲ್ಲಿಸಬೇಡಿ. ಅದೇ ನಿಮ್ಮ ಜೀವನಕ್ಕೆ ನಿಜವಾದ



ಅರ್ಥವನ್ನು ನೀಡುವುದು.

ನಿಮ್ಮ ಇಂದಿನ ಪರಿಸ್ಥಿತಿ ಹೇಗೆ ಬೇಕಾದರೂ ಇರಲಿ. ಕೊನೆಯಲ್ಲಿ ಒಂದು ದಿನ ನೀವು ಹುಡುಕಾಡಿದ್ದನ್ನು ಪಡೆಯುವಿರಿ. ಎಷ್ಟೊಂದು ಕತ್ತಲಾದ ಗುಹೆಯಲ್ಲಿ ಸಿಲುಕಿಕೊಂಡರೂ ಅದರ ತುದಿಯಲ್ಲಿ ಬೆಳಕು ಕಾಣಿಸಿಯೇ ಕಾಣುತ್ತದೆ.

ಸಮರ್ಥ ವ್ಯಕ್ತಿಗಳು ಮಾತ್ರವೇ ತಾವು ಹುಡುಕಾಡಿದ್ದನ್ನು ಪಡೆದುಕೊಳ್ಳುವರು ಎಂದು ಭಾವಿಸಬೇಡಿ. ಹೋರಾಡುವ ಗುಣದೊಂದಿಗೆ ನಿಲ್ಲದೆ ಹುಡುಕಾಡುತ್ತಲೇ ಇರುವವರೇ ತಾವು ಅಂದುಕೊಂಡದ್ದನ್ನು ಸಾಧಿಸಿ ತೋರಿಸಬಲ್ಲರು.

ಜೀವನದಲ್ಲಿ ಸೋತು ಹೋದ ಹಲವರು ಪ್ರಯತ್ನವನ್ನೇ ಮಾಡದವರೇನೂ ಅಲ್ಲ. ತಾವು ಹುಡುಕಾಡಿದ್ದನ್ನು ಸಮೀಪಿಸುವ ಸಮಯದಲ್ಲಿ ತಮ್ಮ ಹುಡುಕಾಟವನ್ನು ಕೈಬಿಟ್ಟುಬಿಡುವವರೇ ಸೋತು ಹೋಗುವುದು.

ನೀವು ಯಾವುದನ್ನು ಹುಡುಕಾಡುತ್ತಿದ್ದೀರೋ ಅದಕ್ಕೆ ಅಗತ್ಯವಾದ ದುಡಿಮೆಯನ್ನೂ ನೀಡಿ. ಅದು ಖಂಡಿತವಾಗಿ ನಿಮಗೆ ದೊರೆಯುತ್ತದೆ. ಆದುದರಿಂದಲೇ ಪ್ರಯತ್ನವನ್ನು ಕೈಬಿಡಬೇಡಿ.

ನೀವು ನಿಧಾನವಾಗಿ ಮುಂದೆ ಸಾಗುತ್ತಿದ್ದೀರಾ, ವೇಗವಾಗಿ ಸಾಗುತ್ತಿದ್ದೀರಾ ಎಂಬುದು ಮುಖ್ಯ ಅಲ್ಲವೇ ಅಲ್ಲ. ಪ್ರಯಾಣವನ್ನು ನಿಲ್ಲಿಸದೆ ಇದ್ದರೆ ಸಾಕು. ಖಂಡಿತವಾಗಿಯೂ ಗುರಿಯನ್ನು ಮುಟ್ಟಬಹುದು.

ಒಂದು ಹುಡುಕಾಟದಲ್ಲಿ ಸೋಲು ಎಂಬುದು ನಿಮ್ಮನ್ನು ಕುಗ್ಗಿಸಿ ಬಿಡಬಾರದು. ಅದು ಒಂದು ಅವಕಾಶ. ಮತ್ತೊಮ್ಮೆ ಇನ್ನೊಂದು ಅವಕಾಶದಲ್ಲಿ ಸರಿಯಾದ ಪ್ರಯತ್ನ ನಡೆಸಿ ಯಶಸ್ಸನ್ನು ಗಳಿಸಲು ಸಾಧ್ಯವಿದೆ.

ಜೀವನದಲ್ಲಿ ಹಲವು ಸೋಲುಗಳನ್ನು ಸಂಧಿಸುತ್ತಲೇ ಇರುವ ಒಬ್ಬ ವ್ಯಕ್ತಿಗೆ ಸೋತು ಹೋದವರು ಎಂಬ ಮುದ್ರೆಯೇನೂ ಬೀಳುವುದಿಲ್ಲ. ಅವರೊಳಗೆ ಹುಡುಕಾಟದ ಗುಣ ಇದ್ದರೆ ಖಂಡಿತಾ ಅವರು ಜಯಿಸಲು ಸಾಧ್ಯ.

ನಿನ್ನ ಸಂತೋಷವನ್ನು ಇತರರ ಬಳಿ ಹುಡುಕುವುದು ಬೇಡ. ಅದು ನಿನಗೆ ಏಕಾಂಗಿತವನ್ನು ನೀಡಬಹುದು. ನಿನ್ನ ಸಂತೋಷವನ್ನು ನಿನ್ನೊಳಗೇ ಹುಡುಕು. ಸಂತೋಷವಾಗಿರುವೆ!

ಹುಡುಕಾಟದ ಗುಣ ಇರುವ ಜೀವಿಗಳಿಗಷ್ಟೇ ದಿನವೂ ಹಸಿವಾಗುವುದು. ಹುಡುಕಾಟ ಎನ್ನುವುದು ಇರುವವರೆಗೆ ಬದುಕಿನಲ್ಲಿ ರುಚಿಯೂ ಇರುತ್ತದೆ. ನಾವು ಯಾವುದನ್ನು ಹುಡುಕುತ್ತೇವೆಯೋ ಅದಾಗಿಯೇ ನಾವು ರೂಪುಗೊಳ್ಳುತ್ತೇವೆ.

ಜೀವನದಲ್ಲಿ ಹುಡುಕಾಟ ಇಲ್ಲದೇ ಹೋದರೆ ಮಡುಗಟ್ಟಿದ ನೀರಿನಂತೆ ಪಾಚಿಗಟ್ಟಿ ಉಪಯೋಗಕ್ಕೆ ಬಾರದಂತಾಗಿ ಹೋಗುತ್ತೇವೆ. ನದಿಯ ನೀರಿನಂತೆ ಸದಾ ಚಲನಶೀಲವಾಗಿದ್ದರೆ ಜೀವಂತಿಕೆಯಿಂದಿರಬಹುದು. ಆಗಲೇ ಜೀವನದಲ್ಲಿ ವಸಂತದ ಗಾಳಿ ಬೀಸುವುದು.

ಬದುಕೇ ಹುಡುಕಾಟಮಯವಾದುದು. ಹಾಲಿನಲ್ಲಿದ್ದರೆ ಟಿ.ವಿ. ರಿಮೋಟ್ ಹುಡುಕಬೇಕು, ರೂಮಿನಲ್ಲಿದ್ದರೆ ಎ.ಸಿ. ರಿಮೋಟ್ ಹುಡುಕಬೇಕು. ಹೊರಗೆ ಹೊರಟರೆ ಬೈಕ್ ಕೀ ಹುಡುಕಬೆಕು. ಏನನ್ನು ಹುಡುಕುತ್ತಿದ್ದೇವೆ ಎಂದು ಅರ್ಥ ಮಾಡಿಕೊಂಡು ಸರಿಯಾಗಿ ಹುಡುಕಿದರೆ ನೆಮ್ಮದಿಯ ಜೀವನ ನಡೆಸಬಹುದು.

ಅದರ ಹೆಸರು ಹುಡುಕಾಟ ಅಲ್ಲ, ಮುಂದಿನ ಹಂತ. ಅದನ್ನು 'ಬೆಳವಣಿಗೆ' ಎಂದೂ ಹೇಳಬಹುದು. ಅದನ್ನೇ ನಾವು ಹುಡುಕುವುದು. ಸರಿಯಾದ ಹಾದಿಯಲ್ಲಿ ಎಚ್ಚರಿಕೆಯಿಂದ ಗಮನ ತಪ್ಪದಂತೆ ಸಾಗಿದರೆ ಹುಡುಕಾಡಿದ್ದನ್ನು ಪಡೆದುಕೊಳ್ಳಬಹುದು.

ಈ ಜೀವನವೇ ಒಂದು ಹುಡುಕಾಟ. ಅದನ್ನು ಹುಡುಕಿ ಹುಡುಕಿ ಹುಡುಕುವ ಮನಸ್ಸೇ ಇಲ್ಲದಾಗಿ ಹೋಗಿದೆ!

ಹುಡುಕಾಟ ಎಂಬುದು ಇದ್ದರಷ್ಟೇ ಜೀವನ ಮುಂದೆ ಸಾಗುವುದು. ಹುಡುಕಾಟವೇ ಇಲ್ಲದ ಜೀವನ, ಸಾಗರದಲ್ಲಿ ಬಿಟ್ಟ ಕಾಗದದ ದೋಣಿಯಂತೆ ದಿಕ್ಕು ತಿಳಿಯದ ಹಾಗೆ ಮುಳುಗಿ ಹೋಗುತ್ತದೆ.

ಹುಡುಕಾಟ ಇರುವವರೆಗೆ ಮಾತ್ರವೇ ಈ ಜೀವನದ ಹಲವು ಸುಂದರ ಕ್ಷಣಗಳನ್ನು ಅನುಭವಿಸಲು ನಮ್ಮಿಂದ ಸಾಧ್ಯ. ಹುಡುಕಾಟ ಬದಲಾಗುತ್ತಲೇ ಇರುತ್ತದೆ. ಹುಡುಕಾಟ ಒಂದೇ ನಿರಂತರವಾದುದು.

ಹುಡುಕು, ಹುಡುಕು... ನಿನ್ನ ಎಲ್ಲೆ ಯಾವುದು ಎಂದು ತಿಳಿಯುವವರೆಗೆ ಓಡು. ಗೆಲುವು ನಿನ್ನನ್ನು ಅಪ್ಪಿಕೊಳ್ಳುವವರೆಗೆ ಹುಡುಕುತ್ತಲೇ ಇರು. ಗೆಲುವು ತುಂಬ ದೂರದಲ್ಲೇನೂ ಇಲ್ಲ. ಬೆಳಗು ಮೂಡುವಾಗ ಗೆಲುವಿನೊಂದಿಗೆ ಬೆಳಕು ಹರಡಲಿ.

ಯಾವುದೋ ಒಂದನ್ನು ಕಳೆದುಕೊಳ್ಳುವ ಮೂಲಕ ಇನ್ಯಾವುದೋ ಒಂದನ್ನು ಪಡೆದುಕೊಳ್ಳಲಿದ್ದೇವೆ ಎಂದು ಸಮಾಧಾನ ಪಟ್ಟುಕೊಳ್ಳುವ ಮನಸ್ಸಿರುವಾಗ, ಕಳೆದುಕೊಂಡದ್ದರ ಬಗ್ಗೆ ಅಂತಹ ಬೇಸರವೇನೂ ಮೂಡುವುದಿಲ್ಲ. ನಂಬಿಕೆಯೆಂಬುದು ಚಿಗುರಿ ಮತ್ತೆ ಹುಡುಕಾಟ ಮುಂದುವರೆಯುತ್ತದೆ.

ಯಾವುದು ನಮ್ಮ ಹುಡುಕಾಟವಾಗಿರುತ್ತದೆಯೋ, ಅದರಲ್ಲೇ ನಾವು ಕರಗಿ ಹೋಗುತ್ತೇವೆ. ಹುಡುಕಾಟದಲ್ಲಿ ಕರಗಿ, ಹುಡುಕಾಟಕ್ಕೆ ಬದಲಾಗಿ ನಾವೇ ಅದಾಗಿ ಬದಲಾಗಿ ಹೋಗುವುದೇ ನಮ್ಮ ಜೀವನದಲ್ಲಿ ನಾವು ತಿಳಿದುಕೊಳ್ಳದೇ ಹೋಗುವ ವಿಷಯ.

ಕಣ್ಣುಗಳು ಹುಡುಕಾಡುವ ಹುಡುಕಾಟದಲ್ಲಿ ನಮ್ಮ ಜೀವನ ಅಡಗಿಲ್ಲ; ನೋವಿನ ಹುಡುಕಾಟದಲ್ಲಿ ಅಡಗಿದೆ ಜೀವನ.

ಹುಡುಕಾಡುವುದನ್ನು ನಿಲ್ಲಿಸುವಾಗ ನೀವು ಇಷ್ಟಪಟ್ಟಿದ್ದು ದೊರಕಿರಬೇಕು. ●

# ಅರಿವನ್ನು ಹುಡುಕಿರಿ!

ಒಬ್ಬ ಯುವಕ ನದಿಯ ದಡದಲ್ಲಿ ಪ್ರಯಾಣ ಮಾಡುತ್ತಿದ್ದ. ನಡು ಮಧ್ಯಾಹ್ನದಲ್ಲಿ ಸುಡುಬಿಸಿಲಿನಲ್ಲಿ ಒಂದು ಮರದ ಕೆಳಗೆ ಆಯಾಸ ಪರಿಹಾರಕ್ಕಾಗಿ ವಿಶ್ರಮಿಸಿದ. ಆ ಮರದ ಬಳಿ ಒಬ್ಬ ಸನ್ಯಾಸಿ ಇದ್ದ. ಯುವಕ ಚೆನ್ನಾಗಿ ಹಸಿದಿರುವುದನ್ನು ಅರಿತ ಸನ್ಯಾಸಿ, ತನ್ನ ಚೀಲದಿಂದ ಆಹಾರವನ್ನು ತೆಗೆದುಕೊಂಡು ಅವನೊಂದಿಗೆ ಹಂಚಿಕೊಂಡು ಸೇವಿಸಿದ.

ಆಗ ಆ ಯುವಕ ಸನ್ಯಾಸಿಯ ಚೀಲದಲ್ಲಿ ಬೆಲೆಬಾಳುವ ವಜ್ರವಿರುವುದನ್ನು ಗಮನಿಸಿದ. ಸನ್ಯಾಸಿಗೆ ಇದು ಏಕೆ ಬೇಕು ಎಂದು ಅವನಿಗೆ ಆಶ್ಚರ್ಯವಾಯಿತು. "ಸ್ವಾಮಿ, ನಾನು ಬದುಕನ್ನು ಅರಸಿ ಪರ ಊರಿಗೆ ಹೋಗುತ್ತಿದ್ದೇನೆ. ಆ ಕಲ್ಲನ್ನು ನನಗೆ ಕೊಟ್ಟರೆ ನಾನು ನೆಮ್ಮದಿಯಿಂದ ಬದುಕುತ್ತೇನೆ" ಎಂದು ವಿನಂತಿಸಿಕೊಂಡ.

ಸನ್ಯಾಸಿ ಯಾವುದೇ ಯೋಚನೆಯನ್ನೂ ಮಾಡದೆ ಅದನ್ನು ತೆಗೆದು ಅವನಿಗೆ ಕೊಟ್ಟು, "ನನಗೆ ಇದರ ಅಗತ್ಯವಿಲ್ಲ. ದಾರಿಯಲ್ಲಿ ಬಿದ್ದಿತ್ತು. ಯಾವುದಕ್ಕೂ ಇರಲಿ ಎಂದು ಅದನ್ನು ತೆಗೆದು ಚೀಲಕ್ಕೆ ಹಾಕಿಕೊಂಡಿದ್ದೆ" ಎಂದು ಹೇಳಿದ. ಆ ಒಂದು ವಜ್ರವನ್ನು ಮಾರಿದರೆ ಸಾಕು, ಊರಿನಲ್ಲಿರುವ ಎಲ್ಲಾ ಜಮೀನನ್ನೂ ಅವನೇ ಕೊಳ್ಳಬಹುದು. ಊರಿನಲ್ಲಿ ಎಲ್ಲರಿಗಿಂತ ಅತ್ಯಂತ ಶ್ರೀಮಂತ ವ್ಯಕ್ತಿ ಆಗಬಹುದು. ಯುವಕ ಸಂತೋಷದಿಂದ ಸನ್ಯಾಸಿಗೆ ಧನ್ಯವಾದಗಳನ್ನು ಸಲ್ಲಿಸಿ ಅಲ್ಲಿಂದ ಹೊರಟ.

ಆದರೆ ಕೆಲವೇ ನಿಮಿಷಗಳಲ್ಲಿ ಅವನು ಹಿಂತಿರುಗಿ ಬಂದು, ಸನ್ಯಾಸಿಯ ಪಾದಗಳಿಗೆ ಬಿದ್ದು ನಮಸ್ಕರಿಸಿ ಹೇಳಿದ: "ನನಗೆ ಈ ವಜ್ರ ಬೇಡ ಸ್ವಾಮಿ. ನಾನು ಕೇಳಿದ ಕೂಡಲೇ ಯಾವುದೇ ಹಿಂಜರಿಕೆಯೂ ಇಲ್ಲದೆ ನೀವು ಇದನ್ನು ತೆಗೆದು ನನಗೆ ಕೊಟ್ಟು ಬಿಟ್ಟಿರಿ! ಆ ಮನಸ್ಸು ಇದಕ್ಕಿಂತ ಹೆಚ್ಚು ಮೌಲ್ಯಯುತವಾದುದು. ಅದನ್ನು ಸಾಧಿಸುವ ಮಾರ್ಗವನ್ನು ಮಾತ್ರ ಹೇಳಿ ಕೊಡಿ" ಎಂದು ವಿನಂತಿಸಿಕೊಂಡ!


ಸನ್ಯಾಸಿ ಮುಗುಳ್ನಕ್ಕ. "ನೀನು ಮರಳಿ ಬರುವೆ ಎಂದು ನಾನು ಅಂದುಕೊಂಡೆ. ನೀನು ತುಂಬ ಸರಿಯಾಗಿ ಯೋಚಿಸಿದ್ದೀಯ. ಈ ಕಲ್ಲಿಗಿಂತಲೂ ನಿನ್ನ ಮೆದುಳು ಬೆಲೆ ಬಾಳುವಂತಹುದು ಎಂಬುದನ್ನು ನೀನು ಅರ್ಥ ಮಾಡಿಕೊಂಡಿದ್ದೀಯ" ಎಂದು ಹೇಳಿ, ಅವನಿಗೆ ಜ್ಞಾನವನ್ನು ಹುಡುಕುವ ಮಾರ್ಗವನ್ನು ಹೇಳಿಕೊಟ್ಟ.

"ಪುಸ್ತಕದಿಂದ ಕಲಿಯುವುದು ಮಾತ್ರ ಜ್ಞಾನವಲ್ಲ. ಜೀವನದಲ್ಲಿ ಕಲಿತ ಎಲ್ಲವನ್ನೂ ಬದುಕಿನಲ್ಲಿ ಅಳವಡಿಸಿಕೊಳ್ಳುವಾಗ ಜ್ಞಾನವು ಸಂಪೂರ್ಣವಾಗುತ್ತದೆ. ಅದೊಂದು ದೀರ್ಘ ಪ್ರಯಾಣ. ಅದರಲ್ಲಿ ನಿಮ್ಮ ಸ್ವಂತ ಆಯ್ಕೆಗಳನ್ನು ಇಟ್ಟುಕೊಳ್ಳಬೇಕು. ಅದು ನೋವು ಮತ್ತು ಹೋರಾಟಗಳಿಂದ ತುಂಬಿರುತ್ತದೆ.

ಜೀವನವೆಂಬ ಶಾಲೆಯಲ್ಲಿ ಬೇಸರ, ನಿರಂತರ ಪ್ರಯತ್ನ, ದಣಿವರಿಯದ ಮುಂದುವರೆಯುವ ಗುಣ ಇರುತ್ತವೆ. ಇವು ಪ್ರಗತಿಗೆ ಕಾರಣವಾಗುತ್ತವೆ. ಹಿಂಜರಿಕೆ, ವೈಫಲ್ಯದ ಭಯ, ಇತರರ ಅಪಹಾಸ್ಯ ಮತ್ತು ಅಸೂಯೆಯ ನುಡಿಗಳನ್ನು ನಿರ್ಲಕ್ಷಿಸಿ ನಮ್ರತೆಯಿಂದ ಈ ಪ್ರಯಾಣವನ್ನು ಮುಂದುವರೆಸಬೇಕು. ಸಕಾರಾತ್ಮಕ ಮನೋಭಾವವೂ ತೀರದ ದಾಹವೂ ಇದ್ದರೆ ಅಮೂಲ್ಯವಾದ ಜ್ಞಾನವನ್ನು ಪಡೆಯಬಹುದು. ಜ್ಞಾನವನ್ನು ಪಡೆಯಲು ಯಾವುದೇ ಸಮಯದ ಅಥವಾ ಕಾಲದ ಮಿತಿಯಿಲ್ಲ. ನಾವು ಎಷ್ಟು ಜ್ಞಾನವನ್ನು ಪಡೆದುಕೊಂಡಿದ್ದೇವೆ ಎಂಬುದನ್ನು ಅಳೆಯಲು ಯಾವುದೇ ಉಪಕರಣಗಳೂ ಇಲ್ಲ.

ಅನೇಕ ಹೋರಾಟಗಳು ಮತ್ತು ಕೆಲವು ವೈಫಲ್ಯಗಳನ್ನು ಎದುರಿಸಿದ ನಂತರವಷ್ಟೇ ಸಂಪೂರ್ಣ ಜ್ಞಾನವನ್ನು ಪಡೆಯಲು ಸಾಧ್ಯ. ತಪ್ಪುಗಳನ್ನು ಮಾಡದಿರುವುದು ಹೇಗೆ ಎಂದು ಶಾಲೆಗಳಲ್ಲೂ ಕಾಲೇಜುಗಳಲ್ಲೂ ಹೇಳಿಕೊಡುತ್ತಾರೆ. ಆದರೆ ಜೀವನವು ನಮಗೆ ತಪ್ಪುಗಳನ್ನು ಮಾಡಿ ಅದರಿಂದ ಕಲಿಯುವುದು ಹೇಗೆ ಎಂದು ತಿಳಿಸಿ ಕೊಡುತ್ತದೆ. ಜ್ಞಾನದ ಹುಡುಕಾಟದಲ್ಲಿ ದಾರಿಯುದ್ದಕ್ಕೂ ಬಹಳಷ್ಟು ಕಲಿಯುತ್ತಿರುವಾಗ, ತಪ್ಪುಗಳೂ ವೈಫಲ್ಯಗಳೂ ಕಡಿಮೆಯಾಗುತ್ತಾ ಹೋಗುತ್ತವೆ.

ಈ ಜಗತ್ತಿನಲ್ಲಿ ಹಣದಿಂದ ಖರೀದಿಸಬಹುದಾದ ಚಿನ್ನ, ವಜ್ರಗಳಿಗಿಂತ ಜ್ಞಾನ ಶ್ರೇಷ್ಠವಾದುದು. ಇದು ಇದ್ದರೆ ಏನನ್ನು ಬೇಕಾದರೂ ಸಾಧಿಸುವ ಶಕ್ತಿ ನಿನ್ನದಾಗುತ್ತದೆ" ಎಂದು ತಿಳಿಸಿದ. ●



# ಗೆಲುವನ್ನು ಹುಡುಕಿರಿ!

ಜೀವನದಲ್ಲಿ ಯಶಸ್ಸು ಎಂದರೆ ಏನು? ಪ್ರತಿಯೊಬ್ಬರೂ ಇದಕ್ಕೆ ಬೇರೆ ಬೇರೆ ಅಳತೆಗೋಲನ್ನು ಇಟ್ಟುಕೊಂಡಿರುತ್ತಾರೆ.

- ಒಂದು ಪರೀಕ್ಷೆ. ಅದರಲ್ಲಿ ಎಲ್ಲ ವಿಷಯಗಳಲ್ಲೂ ಕಷ್ಟಪಟ್ಟು ಒದ್ದಾಡಿ ಒಬ್ಬ ವಿದ್ಯಾರ್ಥಿ 35 ಅಂಕಗಳನ್ನು ಪಡೆದುಕೊಂಡು ಅದು ಹೇಗೋ ಉತ್ತೀರ್ಣನಾಗುತ್ತಾನೆ. ಅವನ ಇಡೀ ಕುಟುಂಬವೇ ಸಡಗರದಿಂದ ಸಂತೋಷವಾಗಿ ಅವನ ಗೆಲುವನ್ನು ಕೊಂಡಾಡುತ್ತದೆ. ಬೀದಿಯಲ್ಲಿರುವ ಎಲ್ಲರಿಗೂ ಸಿಹಿತಿಂಡಿಗಳನ್ನು ಹಂಚಿ ಅವನು ತನ್ನ ವಿಜಯವನ್ನು ಸಂಭ್ರಮದಿಂದ ಆಚರಿಸುತ್ತಾನೆ. ಏಕೆಂದರೆ ಅವನ ಕುಟುಂಬದಲ್ಲಿ ಇದಕ್ಕೂ ಮುನ್ನ ಯಾರೂ ಇಷ್ಟರ ಮಟ್ಟಿಗೆ ಕೂಡ ವಿದ್ಯಾಭ್ಯಾಸ ಮಾಡಿರುವುದಿಲ್ಲ. ಆದರೆ ಅದೇ ರಸ್ತೆಯಲ್ಲಿ ಮತ್ತೊಬ್ಬ ವಿದ್ಯಾರ್ಥಿ ಶೇಕಡಾ 96ರಷ್ಟು ಅಂಕ ಪಡೆದು ಉತ್ತೀರ್ಣನಾಗಿದ್ದಾನೆ. ಆದರೂ ಅವನ ಮನೆಯಲ್ಲಿ ಎಲ್ಲರೂ ದುಃಖಿತರಾಗಿದ್ದಾರೆ. ಅವನು ಆ ರಾಜ್ಯದ ಅತಿ ಶ್ರೇಷ್ಠ ಮಟ್ಟದ ಕಾಲೇಜಿಗೆ ಸೇರಿ ವಿದ್ಯಾಭ್ಯಾಸ ಮುಂದುವರೆಸುವ ಆಸೆಯಲ್ಲಿದ್ದ. ಇನ್ನೂ ಎರಡು ಅಂಕಗಳನ್ನು ಗಳಿಸಿದ್ದರೆ ಅದು ಸಾಧ್ಯವಾಗುತ್ತಿತ್ತು. ಆ ಎರಡು ಅಂಕಗಳು ಕಡಿಮೆಯಾಗಿರುವ ಕಾರಣದಿಂದ ಅವನ ಆಸೆಯೆಲ್ಲ ನಿರಾಸೆಯಾಗಿ ಬಿಟ್ಟಿದೆ. ಆದುದರಿಂದಲೇ ಅಷ್ಟೊಂದು ಅಂಕಗಳನ್ನು ಗಳಿಸಿಯೂ ಅವನಿಗೆ ಸಂತೋಷವಿಲ್ಲ. ಹಾಗಾದರೆ ಇವುಗಳಲ್ಲಿ ಯಾವುದು ನಿಜವಾದ ಗೆಲುವು?

- ನಾಗರಿಕ ಲೋಕಸೇವಾ ಪರೀಕ್ಷೆಯಲ್ಲಿ ಮೂರು ಹಂತದ ಪರೀಕ್ಷೆಗಳಲ್ಲಿ ಉತ್ತೀರ್ಣರಾದವರು ಮಾತ್ರವೇ ಹೆಮ್ಮೆಯ ಹಾಗೂ ಹಿರಿಯ ಅಧಿಕಾರಿಗಳಾಗಿ ಆಯ್ಕೆಯಾಗುತ್ತಾರೆ. ಒಟ್ಟಾರೆ ಆ ಪರೀಕ್ಷೆಯಲ್ಲಿ ಹೆಚ್ಚು ಅಂಕ ಗಳಿಸಿದವರು ಐಎಎಸ್ ಅಧಿಕಾರಿಗಳಾಗುತ್ತಾರೆ. ಅದರ ನಂತರದ ಸ್ಥಾನ ಗಳಿಸಿದವರು, ಐ.ಪಿ.ಎಸ್. ಮತ್ತು ಐ.ಎಫ್.ಎಸ್ ಹುದ್ದೆಗಳನ್ನು ಪಡೆಯುತ್ತಾರೆ. ಶ್ರೇಯಾಂಕ ಕ್ರಮದಲ್ಲಿ ಈ ರೀತಿ ಹಂತಹಂತವಾಗಿ ಹುದ್ದೆಗಳನ್ನು ನೀಡಲಾಗುವುದು. 700, 800 ರ್‍ಯಾಂಕ್‌ಗಳ ಕೆಳಗೆ ಇರುವವರಿಗೆ ಹೆಚ್ಚಿನ ಮಹತ್ವವೇನೂ ಇಲ್ಲದ ಸೇವಾ ವಲಯಗಳಲ್ಲಿ ಉದ್ಯೋಗ ನೀಡಲಾಗುವುದು. 700ಕ್ಕಿಂತ ಕಡಿಮೆ ಅಂಕ ಗಳಿಸಿದ ಅನೇಕ ಜನರು ತಮಗೆ ದೊರೆತ ಕೆಲಸಕ್ಕೆ ಸಂತೋಷದಿಂದ ಸೇರಿಕೊಳ್ಳುವರು. ಆದರೆ ನೂರನೇ ರ್‍ಯಾಂಕ್ ಗಳಿಸಿದವರು ಮುಂದಿನ ವರ್ಷ ಮತ್ತೆ ಪ್ರಯತ್ನಿಸುತ್ತಾರೆ. ಏಕೆಂದರೆ ಅವರಿಗೆ ಅದಕ್ಕಿಂತ ಹೆಚ್ಚಿನ ಹುದ್ದೆಯನ್ನು ಪಡೆಯುವುದೇ ಯಶಸ್ಸು ಎಂದು ಕಾಣಿಸುತ್ತದೆ.

- ಚುನಾವಣಾ ನಿಯಮಗಳಲ್ಲಿ ಹೆಚ್ಚು ಸ್ಥಾನಗಳನ್ನು ಗೆದ್ದ ಒಂದು ಪಕ್ಷ ಅಧಿಕಾರಕ್ಕೆ ಬರಬೇಕಾದರೆ ಅವರಿಗೆ ಕೆಲವೇ ಕೆಲವರ ಬೆಂಬಲ ಮಾತ್ರ ಬೇಕಾಗಿರುತ್ತದೆ. ಆದರೆ ಎರಡನೇ ಮತ್ತು ಮೂರನೇ ಸ್ಥಾನದಲ್ಲಿರುವ ಪಕ್ಷಗಳು ಒಟ್ಟುಗೂಡಿ ಮೈತ್ರಿ ಮಾಡಿಕೊಂಡು ಅಧಿಕಾರಕ್ಕೆ ಬಂದು ಆಡಳಿತ ನಡೆಸುತ್ತವೆ. ಇಂತಹ ಸಾಕಷ್ಟು ಸಂಗತಿಗಳು ಸಂಭವಿಸಿವೆ. ಇಲ್ಲಿ ಅಗ್ರಸ್ಥಾನ ಗಳಿಸಿದವರಿಗೆ ಜಯವೇ? ಎರಡನೇ, ಮೂರನೇ ಸ್ಥಾನ ಪಡೆದವರಿಗೆ ಜಯವೇ?

- ಕ್ರಿಕೆಟ್ ಆಟದಲ್ಲಿ ಫೈನಲ್‌ಗೆ ಹೋಗಿ ಸೋತ ತಂಡಕ್ಕೆ ದುಃಖವಾಗುತ್ತದೆ. ಎರಡನೇ ಸ್ಥಾನವನ್ನೇ ಅವರು ಸಹಿಸಿಕೊಳ್ಳಲಾಗುವುದಿಲ್ಲ. ಆದರೆ ನಾಲ್ಕನೇ ಸ್ಥಾನ ಪಡೆದ ತಂಡ ಹೆಚ್ಚು ಉತ್ಸಾಹದಿಂದಿರುತ್ತದೆ. ಸೆಮಿಫೈನಲ್ ಸುತ್ತಿಗೆ ಬಂದು ತಲುಪಿದ್ದೇ ತಮ್ಮ ಪಾಲಿಗೆ ದೊಡ್ಡ ಸಾಧನೆ ಎಂದು ಅವರು ಭಾವಿಸುತ್ತಾರೆ.

ಈ ಉದಾಹರಣೆಗಳು ತಿಳಿಸುವ ಸತ್ಯವೇನೆಂದರೆ, ಯಶಸ್ಸು ಎಂಬುದನ್ನು ಪ್ರತಿಯೊಬ್ಬರೂ ವಿಭಿನ್ನವಾಗಿ ನೋಡುತ್ತಾರೆ. ನಾವು ಏನನ್ನು ನಿರೀಕ್ಷಿಸುತ್ತೇವೆಯೋ ಅದು ನಡೆದು ಬಿಟ್ಟರೆ ಅದೇ ಯಶಸ್ಸು. ನಿರೀಕ್ಷೆಯಂತೆ ಅದು ಸಂಭವಿಸದಿದ್ದರೆ ಅದು ವೈಫಲ್ಯ. ಆದ್ದರಿಂದಲೇ ನಿಮ್ಮ ಸಾಧನೆಗಳನ್ನು ನಿಮ್ಮ ನಿರೀಕ್ಷೆಗಳ ಮೂಲಕ ಅಳೆಯಿರಿ.

ಕೆಲವರು, ಸುಲಭವಾಗಿ ಗೆದ್ದರೆ ಅದೃಷ್ಟ ಎನ್ನುತ್ತಾರೆ. ಆದರೆ ಸೋಲುಗಳ ನಂತರ ಕಷ್ಟಪಟ್ಟು ಮತ್ತೆ ಪ್ರಯತ್ನಿಸಿ ಪಡೆದ ಗೆಲುವೇ ಹೆಚ್ಚು ರುಚಿ. ದೊಡ್ಡ ಮತ್ತು ಸಣ್ಣ ಪ್ರಮಾಣದ ಅನೇಕ ಯಶಸ್ಸುಗಳು ಮತ್ತು ವೈಫಲ್ಯಗಳಿಂದ ತುಂಬಿದುದೇ ಜೀವನ. ಹಳೆಯ ವೈಫಲ್ಯಗಳನ್ನು ನೆನಪಿಸಿಕೊಂಡು ಕೊರಗದೆ, ಹಳೆಯ ವಿಜಯಗಳನ್ನು ಮೆಲುಕು ಹಾಕುತ್ತಾ ಉಲ್ಲಾಸವನ್ನು ಹೊಂದಿರಿ. ಹೊಸ ಗೆಲುವುಗಳನ್ನು ಹುಡುಕಿರಿ.





# ಕನಸನ್ನು ಹುಡುಕಿರಿ!

ಜೀವನದಲ್ಲಿ ಪ್ರತಿಯೊಬ್ಬರಿಗೂ ಒಂದು ಮಹತ್ತಾದ ಕನಸು ಇರುತ್ತದೆ. ಅಲ್ಲದೆ ಇನ್ನೂ ಕೆಲವು ಚಿಕ್ಕ ಕನಸುಗಳೂ ಇರುತ್ತವೆ. ಕನಸುಗಳನ್ನು ನನಸಾಗಿಸಿಕೊಳ್ಳಲು ಮಾಡುವ ಜೀವನ ಪ್ರಯಾಣವೇ ಒಬ್ಬ ವ್ಯಕ್ತಿ ಜೀವಮಾನವಿಡೀ ಉತ್ಸಾಹದಿಂದ ಕೆಲಸ ಮಾಡುವಂತೆ ನೋಡಿಕೊಳ್ಳುತ್ತದೆ. ಹೋರಾಟದ ಶಕ್ತಿಯನ್ನೂ ನೀಡುತ್ತದೆ. ನಾವು ಹತ್ತಿರವಾಗುತ್ತಿದ್ದಂತೆಲ್ಲಾ ಅದು ನಮ್ಮ ಕೈಯಿಂದ ಜಾರಿ ಹೋಗುವುದನ್ನೂ ಕೆಲವೊಮ್ಮೆ ನಮ್ಮ ಕಣ್ಣಾರೆ ಕಾಣಲು ಸಾಧ್ಯವಾಗುತ್ತದೆ. ನಿರಂತರ ಪ್ರಯತ್ನ ಮಾಡಲಾರದವರು ಅದನ್ನು ನಡುವೆಯೇ ಬಿಟ್ಟುಬಿಡುತ್ತಾರೆ. ಅವರ ಕನಸು ನಿರಾಶೆಯಲ್ಲಿ ಮುಗಿಯುತ್ತದೆ. ಅದರ ನಂತರ ಅವರ ಜೀವನ ಅರ್ಥಹೀನವಾದುದಾಗಿ ಬದಲಾಗಿ ಹೋಗುತ್ತದೆ.

ನಮ್ಮ ಕನಸುಗಳನ್ನು ನನಸಾಗಿಸಿಕೊಳ್ಳುವುದನ್ನು ತಡೆಯುವ ಶಕ್ತಿಗಳು ಅಥವಾ ಶತ್ರುಗಳು ಹೊರಗೇನೂ ಹೆಚ್ಚಾಗಿಲ್ಲ. ಒಬ್ಬ ವ್ಯಕ್ತಿಯಲ್ಲಿ ಅಡಗಿರುವ ಸೋಮಾರಿತನ, ಅನುಮಾನ, ಭಯ, ಹಿಂಜರಿಕೆ, ಅನಿರ್ದಿಷ್ಟತೆ, ನಿರ್ಧಾರವನ್ನು ತೆಗೆದುಕೊಳ್ಳಲಾಗದ ಮನಸ್ಥಿತಿ ಇವೇ ಅವನ ನಿಜವಾದ ಶತ್ರುಗಳು. ಈ ಶತ್ರುಗಳನ್ನು ತೊಡೆದು ಹಾಕಲು ಸಾಧ್ಯವಾದರೆ, ಯಾವುದೇ ಕನಸಾಗಿದ್ದರೂ ಕೈಗೆಟುಕವ ಅಂತರದಲ್ಲೇ ಅದು ಇರುತ್ತದೆ.

ನಮ್ಮ ಎಲ್ಲಾ ಕನಸುಗಳು ನನಸಾಗಿ ಬಿಟ್ಟರೆ ನಾವಿನ್ನು ಬದುಕಿನಲ್ಲಿ ನೆಮ್ಮದಿಯಿಂದ ಇರಬಹುದು ಎಂದು ನಾವು ಅಂದುಕೊಳ್ಳುತ್ತೇವೆ. ಆದರೆ, ನಾವು ಸರಿಯಾದ ಕನಸನ್ನು ಆರಿಸಿದರೆ ಮಾತ್ರವೇ ಅದು ಸಾಧ್ಯವಾಗುವುದು. ಇಲ್ಲದಿದ್ದರೆ, ಅನಾಹುತಗಳು ಸಂಭವಿಸುತ್ತವೆ. ಈ ಕಥೆಯಲ್ಲಿ ಬರುವ ಹುಡುಗಿ ಅದಕ್ಕೊಂದು ಉದಾಹರಣೆ:

ಒಂದು ಹಳ್ಳಿಯಲ್ಲಿ ಒಬ್ಬ ಬಡ ಯುವತಿ ಇದ್ದಳು. ಶ್ರೀಮಂತ ಮನೆಗಳಲ್ಲಿರುವ ಯುವತಿಯನ್ನು ನೋಡಿ ಒಂದು ಬಗೆಯ ಆತಂಕ ಹಾಗೂ ಹಂಬಲದ ಮನಸ್ಸನ್ನು ಅವಳು ಬೆಳೆಸಿಕೊಂಡಳು. ತನಗೆ ಆರಾಮದಾಯಕ ಮನೆ ಇಲ್ಲ, ಒಳ್ಳೆಯ ಬಟ್ಟೆ ಇಲ್ಲ, ಅಲಂಕಾರಿಕ ವಸ್ತುಗಳಿಲ್ಲ ಇಷ್ಟಪಟ್ಟ ಆಹಾರವನ್ನು ತಿನ್ನಲು ಸಾಧ್ಯವಿಲ್ಲ, ನಕ್ಕು ಹರಟಲು ಸ್ನೇಹಿತರೂ ಇಲ್ಲ. ಇದನ್ನೆಲ್ಲ ಯೋಚಿಸಿ ಯೋಚಿಸಿ ಅವಳು ಯಾವಾಗಲೂ ದುಃಖಿಸುತ್ತಿದ್ದಳು.

ಒಬ್ಬ ದೇವತೆ ಇದನ್ನು ಗಮನಿಸಿ ಅವಳ ಮುಂದೆ ದರ್ಶನ ನೀಡಿ, "ನಾನು ನಿನಗೆ ಒಂದು ವರವನ್ನು ಕೊಡುತ್ತೇನೆ. ನಿನಗೇನು ಬೇಕು ಕೇಳು" ಎಂದಳು. ದೇವತೆಯನ್ನು ನೋಡಿ ಅವಳು ತುಂಬಾ ಭಾವಪರವಶಳಾದಳು. ಅವಳಿಗೆ ತುಂಬ ಆನಂದವಾಯಿತು. ದೇವತೆಗೆ ನಮಸ್ಕರಿಸಿ, ಕೃತಜ್ಞತೆಯನ್ನೂ ಸಲ್ಲಿಸಿದ ನಂತರ ಯಾವ ವರವನ್ನು ಕೇಳೋಣ ಎಂದು ಅವಳು ಯೋಚಿಸಿದಳು. ಮನೆ, ಆಭರಣ, ಬಟ್ಟೆ, ಅನುಕೂಲಕರ ವಸ್ತುಗಳು... ಎಲ್ಲವೂ ಅವಳಿಗೆ ಬಹು ಮುಖ್ಯವಾದವುಗಳು ಎನಿಸಿತು. ಎಷ್ಟು ಹೊತ್ತು ಯೋಚಿಸಿದರೂ ಯಾವ ವರ ಕೇಳುವುದು ಎಂದು ಅವಳಿಗೆ ತಿಳಿಯದಾಯಿತು.

ದೇವತೆಗೆ ಹುಡುಗಿಯ ಪರಿಸ್ಥಿತಿ ಅರ್ಥವಾಯಿತು. ಆದ್ದರಿಂದ ಅದು ಹೇಳಿತು: "ಚಿಂತೆ ಮಾಡಬೇಡ. ನಿನಗೆ ನಾನು ಒಂದು ವಿಭಿನ್ನವಾದ ವರ ನೀಡುತ್ತೇನೆ. ಅದರಂತೆ ಪ್ರತಿ ದಿನವೂ ನೀನು ಇಷ್ಟ ಪಡುವ ನಿನ್ನ ಒಂದು ಆಸೆ ಈಡೇರುತ್ತದೆ. ನೀನು ಪ್ರತಿದಿನ ನಿದ್ದೆಯಿಂದ ಎದ್ದಾಗ ಏನನ್ನು ಬಯಸುವೆಯೋ ಅದು ನೆರವೇರುತ್ತದೆ" ಎಂದು ವರ ಕೊಟ್ಟು ದೇವತೆ ಮಾಯವಾದಳು.

ಹುಡುಗಿ ಬಹಳ ಸಂತೋಷದಿಂದ ಮರುದಿನ ಬೆಳಗಾಗುವುದನ್ನೇ ಕಾಯುತ್ತಿದ್ದಳು. ಬೆಳಿಗ್ಗೆ ಎಚ್ಚರವಾದ ಕೂಡಲೇ, 'ಊರಿನ ಸಮೀಪದಲ್ಲಿರುವ ನಗರದಲ್ಲಿ ಒಂದು ಮಹಡಿ ಮನೆ ಬೇಕು' ಎಂದು ಅವಳು ಕೇಳಿಕೊಂಡಳು. ಹೀಗೆ ಪ್ರತಿದಿನವೂ ನಾನಾ ಬಗೆಯ ಸೌಲಭ್ಯಗಳು ಬಂದು ಸೇರತೊಡಗಿದವು. ಹೀಗೆ ಎಲ್ಲಾ ಬಗೆಯ ಸಕಲ ಸೌಕರ್ಯಗಳೊಂದಿಗೆ ಐಷಾರಾಮಿ ಮಹಲಿನಲ್ಲಿ ಅವಳು ತನ್ನ ಕುಟುಂಬದವರ ಜೊತೆ ವಾಸಿಸತೊಡಗಿದಳು. ದಿನದಿಂದ ದಿನಕ್ಕೆ ಹೊಸ ಬಗೆಯ ಸೌಲಭ್ಯಗಳು ಅವಳನ್ನು ಬಂದು ಸೇರುತ್ತಿದ್ದವು. ಮೊದಮೊದಲು ಇದೆಲ್ಲ ಅವಳಿಗೆ ಸಂಭ್ರಮವನ್ನು ನೀಡುತ್ತಿತ್ತು.

ದಿನಗಳು ಕಳೆದಂತೆ ಆಕೆ ಅನೇಕ ಸಮಸ್ಯೆಗಳನ್ನು ಎದುರಿಸತೊಡಗಿದಳು. ಮನೆಯಲ್ಲಿ ಕೆಲಸ ಮಾಡುವವರು ತಮಗೆ ಬೇಕು ಬೇಕಾದ್ದನ್ನೆಲ್ಲ ಕದ್ದೊಯ್ದರು. ಸಂಬಂಧಿಕರು ಅವಳ ಬಗ್ಗೆ ಏನೇನೋ ಕಥೆ ಕಟ್ಟಿ ಮಾತನಾಡ ತೊಡಗಿದರು. ಹೊಸದಾಗಿ ದೊರೆತ ಸ್ನೇಹಿತೆಯರು ಅವಳಿಂದ ಅನೇಕ ಉಡುಗೊರೆಗಳನ್ನು ಬಯಸಿದರು. ಕೆಲವು ಪ್ರಭಾವಿ ವ್ಯಕ್ತಿಗಳು ಬಂದು, 'ನಾಳೆ ನನಗಾಗಿ ಈ ವರವನ್ನು ಕೇಳು' ಎಂದು ಆದೇಶಿಸತೊಡಗಿದರು. ಇದೆಲ್ಲ ಅವಳಿಗೆ ಹೊಸದು. ಹೀಗೆ ದಿನದಿನವೂ ಹೊಸ ಸಮಸ್ಯೆಗಳನ್ನು ಅವಳು ಎದುರಿಸತೊಡಗಿದಳು. ಇವೆಲ್ಲವುಗಳ ಕಾರಣದಿಂದ ಅವಳ ನೆಮ್ಮದಿ ಪೂರ್ಣವಾಗಿ ಹಾಳಾಗಿ ಹೋಯಿತು. ಇದರಿಂದ ಪ್ರತಿ ದಿನ ಬೆಳಗಾಗುವಾಗ ಅವಳಿಗೆ ಸಂತೋಷದ ಬದಲು ನಡುಕ ಏರ್ಪಡತೊಡಗಿತು.

ಅಂತಿಮವಾಗಿ ಒಂದು ದಿನ ಆಕೆ ತನಗೆ ವರ ನೀಡಿದ ದೇವತೆಯನ್ನು ಪ್ರಾರ್ಥಿಸಿ ಅವಳನ್ನು ಬರುವಂತೆ ಕರೆದಳು. "ನನಗೆ ಒಂದೇ ಒಂದು ವರವನ್ನು ಮಾತ್ರ ಕೊಡು. ಇದಕ್ಕೆ ಮುನ್ನ ನಾನು ಹೇಗೆ ನೆಮ್ಮದಿಯ ಶಾಂತಿಯುತವಾದ ಜೀವನವನ್ನು ನಡೆಸುತ್ತಿದ್ದೆನೋ ಆ ನೆಮ್ಮದಿಯ ಬದುಕನ್ನು ಮತ್ತೆ ನನಗೆ ಕೊಡು. ನನ್ನ ಕನಸುಗಳೆಲ್ಲವೂ ಕನಸಾಗಿಯೇ ಇದ್ದು ಬಿಡಲಿ, ಪರವಾಗಿಲ್ಲ' ಎಂದು ಹೇಳಿದಳು. ಅವಳು ಕೇಳಿದಂತೆಯೇ ದೇವತೆ 'ಹಾಗೆಯೇ ಆಗಲಿ" ಎಂದು ಹೇಳಿ ಮಾಯವಾದಳು.

ಸರಿಯಾದ ಕನಸುಗಳನ್ನು ಹುಡುಕದಿದ್ದರೆ, ಸಮಸ್ಯೆಗಳಷ್ಟೇ ಎದುರಾಗುವುದು. ಅಂತೆಯೇ ಅವು ಇತರರ ಜೊತೆ ಸಂಘರ್ಷವನ್ನುಂಟು ಮಾಡದ ಕನಸುಗಳಾಗಿರಬೇಕು. ಹಾಗಿಲ್ಲದೇ ಇದ್ದುದರಿಂದ ಒಬ್ಬ ರಾಜ ಅನೇಕ ಸಮಸ್ಯೆಗಳನ್ನು ಎದುರಿಸಬೇಕಾಯಿತು.

ಆ ರಾಜನ ಕನಸಿನಲ್ಲೂ ಒಬ್ಬ ದೇವತೆ ಬಂದು, "ನಿನಗೆ ನಾನು ಒಂದು ವರವನ್ನು ಕೊಡುತ್ತೇನೆ. ನಾಳೆಯೊಳಗೆ ನೀನು ಯಾವ ವರ ಬೇಕು ಎಂದು ನಿರ್ಧಾರ ಮಾಡಿಕೊಂಡು, ಕಣ್ಣುಗಳನ್ನು ಮುಚ್ಚಿಕೊಂಡು ನನ್ನನ್ನು ಪ್ರಾರ್ಥಿಸಿದರೆ ಅದು ನಡೆಯುತ್ತದೆ" ಎಂದು ಹೇಳಿದಳು.


ಬೆಳಗಾದ ಕೂಡಲೇ ಆತ ತನ್ನ ಮಂತ್ರಿಗಳನ್ನು ಕರೆದು ಅವರೊಂದಿಗೆ ಈ ಬಗ್ಗೆ ಸಮಾಲೋಚಿಸಿದ. ಅವರಲ್ಲಿ ಒಬ್ಬೊಬ್ಬರೂ ಅವನಿಗೆ ಒಂದೊಂದು ಬಗೆಯ ಉಪಾಯ ಹೇಳಿದರು. ಪ್ರಧಾನಮಂತ್ರಿಯು, "ನನಗೆ ಒಂದು ಉಪಾಯ ತೋರುತ್ತಿದೆ ಅರಸಾ! 'ನಮ್ಮ ದೇಶದ ಪ್ರಜೆಗಳೆಲ್ಲರೂ ಏನನ್ನು ಕೇಳುತ್ತಾರೋ ಅದೆಲ್ಲವೂ ನಡೆಯಲಿ' ಎಂದು ವರವನ್ನು ಕೇಳಿ. ನಮ್ಮ ದೇಶದ ಎಲ್ಲಾ ಪ್ರಜೆಗಳಿಗೂ ಅವರು ಕೇಳಿದ್ದೆಲ್ಲವೂ ದೊರಕುತ್ತದೆ. ಇಡೀ ದೇಶ ಸುಭಿಕ್ಷವಾಗುತ್ತದೆ. ಅಂದುಕೊಂಡಿದ್ದೆಲ್ಲ ನಡೆಯುವ ವಿಶ್ವದ ಏಕೈಕ ದೇಶ ಎಂಬ ಹೆಗ್ಗಳಿಕೆ ನಮಗೆ ಸಿಗುತ್ತದೆ" ಎಂದು ಸಲಹೆ ನೀಡಿದ.

ಹೊಸದಾಗಿ ನೇಮಕಗೊಂಡ ಒಬ್ಬ ಸಚಿವ ಹೀಗೆ: "ಹಾಗೆ ವರವನ್ನು ಕೇಳಬೇಡ ರಾಜ! ಕಡೆಗೆ ಅದು ವಿಪರೀತಕ್ಕೆ ಬಂದು ನಿಲ್ಲಬಹುದು" ಎಂದ. ಆದರೆ ಇತರ ಮಂತ್ರಿಗಳು ಅವನನ್ನು ತಡೆದರು. "ನೀನು ಸುಮ್ಮನಿರು. ನೀನು ಹೊಸಬ. ನಿನಗೇನು ತಿಳಿಯತ್ತದೆ?" ಎಂದು ಅವನನ್ನು ಗದರಿಸಿದರು. ಅಷ್ಟರೊಳಗೆ ರಾಜ ಕೂಡ ಕಣ್ಣು ಮುಚ್ಚಿಕೊಂಡು ಆ ವರವನ್ನು ಕೇಳಿಬಿಟ್ಟ!

ಆ ನಂತರ ದೇಶಾದ್ಯಂತ ಹಲವು ಬದಲಾವಣೆಗಳಾದವು. ಇದ್ದಕ್ಕಿದ್ದಂತೆ ಕೆಲವು ಗುಡಿಸಲುಗಳು ಮಹಲುಗಳಾದವು. ಅನೇಕರ ಮೈಯಲ್ಲೆಲ್ಲ ಚಿನ್ನಾಭರಣಗಳು ಹೊಳೆಯುತ್ತಿದ್ದವು. ವೃದ್ಧರು ಯುವಕರಾದರು. ರೋಗಿಗಳು ಸುಖವಾಗಿ ಓಡಾಡತೊಡಗಿದರು. ಒಣ ಭೂಮಿಗಳು ಫಲವತ್ತಾಗಿ, ಅದರಲ್ಲಿ ಬೆಳೆಗಳು ಬೆಳೆಯಲ್ಪಟ್ಟವು. ಕೆಲವರಿಗೆ ರೆಕ್ಕೆಗಳು ಮೊಳೆತು ಅವರು ಹಾರಲು ಪ್ರಾರಂಭಿಸಿದರು. ಎಲ್ಲರಿಗೂ, ನಾವು ಅಂದುಕೊಂಡಿದ್ದೆಲ್ಲಾ ನಡೆಯುತ್ತದೆ ಎಂಬುದು ತಿಳಿದು ಹೋಯಿತು.

ಅದರ ನಂತರ ಅನೇಕ ವಿಪರೀತಗಳೂ ದುರಂತಗಳೂ ಸಂಭವಿಸತೊಡಗಿದವು. ಅಸೂಯೆಯಿಂದ ಕೆಲವರು, 'ನನ್ನ ಶತ್ರುವಿನ ಮನೆ ಕೆಡವಿ ಬೀಳಬೇಕು' ಎಂದುಕೊಂಡರು. ಅನೇಕ ಮಹಲುಗಳು ಕುಸಿದವು. ಕೆಲವರು ಇದ್ದಕ್ಕಿದ್ದಂತೆ ಬೀದಿಗೆ ಬಿದ್ದು ಭಿಕ್ಷುಕರಾಗಿ ಬದಲಾದರು. ಹಲವರು ನಾನಾ ಬಗೆಯ ರೋಗಗಳಿಗೆ ಒಳಗಾದರು. ಎಲ್ಲೆಡೆಯೂ ದ್ವೇಷ ಮತ್ತು ಅಸೂಯೆಗಳ ಫಲಗಳು ತಾಂಡವವಾಡಿದವು. ರಾಜನಿಗೆ ಅಂತಹ ವರವನ್ನು ಕೇಳಲು ಸಲಹೆ ನೀಡಿದ ಪ್ರಧಾನಮಂತ್ರಿ ರಾಜನನ್ನು ಓಡಿಸಿ ತಾನು ರಾಜನಾಗುವಂತೆ ವರ ಕೇಳಿದ. ಅದೂ ಕೂಡ ನಡೆಯಿತು. ಬದುಕಿದರೆ ಸಾಕು ಎಂದು ಭಾವಿಸಿದ ರಾಜ ಅರಮನೆಯಿಂದ ಓಡಿ ಹೋದ. 'ಅಂತಹ ವರವನ್ನು ಕೇಳುವುದು ಬೇಡ' ಎಂದು ರಾಜನನ್ನು ತಡೆದಿದ್ದ ಹೊಸ ಮಂತ್ರಿ ರಾಜನನ್ನು ರಕ್ಷಿಸಿ ಕರೆದುಕೊಂಡು ಹೋದ. "ರಾಜಾ! 'ಯಾರು ಅಂದುಕೊಂಡದ್ದೂ ನಡೆಯಬಾರದು. ಎಲ್ಲವೂ ಹಳೆಯ ಸ್ಥಿತಿಗೇ ಬಂದು ತಲುಪಬೇಕು' ಎಂದು ಕಣ್ಣುಗಳನ್ನು ಮುಚ್ಚಿಕೊಂಡು ಮತ್ತೊಮ್ಮೆ ವರ ಕೇಳು. ಆ ದೇವತೆಗೆ ಎಲ್ಲ ಪರಿಸ್ಥಿತಿ ತಿಳಿದಿರುತ್ತದೆ. ಅದು ನಿನ್ನ ವರವನ್ನು ಈಡೇರಿಸುತ್ತದೆ" ಎಂದು ಹೇಳಿಕೊಟ್ಟ. ಅವನು ಹೇಳಿದಂತೆಯೇ ಎಲ್ಲ ನಡೆಯಿತು.

ಯಾರ ಜೀವನದಲ್ಲೇ ಆಗಲಿ ಇತರರಿಗೆ ತೊಂದರೆಯನ್ನು ನೀಡದ, ನಕಾರಾತ್ಮಕ ಚಿಂತನೆಗಳಿಲ್ಲದ ಕನಸುಗಳಿರಬೇಕು. ಅವೇ ಸುಂದರವಾದವು ಹಾಗೂ ನನಸಾಗಲು ಅರ್ಹವಾದವು.



RAMRAJ ನಿಮ್ಮ ಮನೆಗೇ ಬರಬೇಕೇ?

# ಬಿಳುಪು

## ಚಂದಾದಾರರಾಗಿ!



'ಉನ್ನತವಾಧ ಭಾವನೆಗಳು ಈ ಜಗತ್ತಿನಾದ್ಯಂತ ಹೋಗಿ ಸೇರಬೇಕು' ಎನ್ನುವ ಉನ್ನತವಾದ ದೃಷ್ಟಿಯಿಂದ ಮಹತ್ವಪೂರ್ಣವಾದ ಲೇಖನಗಳನ್ನು ನಿರಂತರವಾಗಿ ಪ್ರಕಟಿಸುತ್ತಿದೆ 'ಬಿಳುಪು' ಮಾಸಿಕ ಸಂಚಿಕೆ. ಈ ತಿಂಗಳ ವಿಶೇಷ ಸಂಚಿಕೆಯು ಪ್ರತಿಯೊಂದು ಕುಟುಂಬದಲ್ಲೂ ರಕ್ಷಿಸಿಡಬೇಕಾದ ಬೊಕ್ಕಸವಾಗಿದೆ.

**ವಾರ್ಷಿಕ ಚಂದಾ ರೂ. 200**
**ದ್ವೈವಾರ್ಷಿಕ ಚಂದಾ ರೂ. 380**

ಚೆಕ್/ಡಿಡಿ ಮೂಲಕ ಹಣ ಸಂದಾಯ ಮಾಡಬಹುದು. **VENMAII** ಎನ್ನುವ ಹೆಸರಿನಲ್ಲಿ ಚೆಕ್/ಡಿಡಿ ಕಳಿಸಬಹುದು. ಹಿಂಭಾಗದಲ್ಲಿ ನಿಮ್ಮ ಹೆಸರು, ವಿಳಾಸ ಬರೆದಿರಬೇಕು.

ಇಲ್ಲವೇ

VENMAII ಬ್ಯಾಂಕ್ ಖಾತೆ (A/C No: 1809135000000299 Karur Vysya Bank, Tirupur SR Nagar Branch - IFSC: KVBL0001809) ಗೆ ಹಣ ಸಂದಾಯ ಮಾಡಿ, ಅದರ ಸ್ವೀಕೃತಿ ಪತ್ರದ ನಕಲು ಪ್ರತಿಯನ್ನು ಕಳಿಸಿ ಕೊಡಬೇಕು.

- ಮನಿಯಾರ್ಡರ್‌ಗಳನ್ನು ಸ್ವೀಕರಿಸುವುದಿಲ್ಲ.
- ಎಲ್ಲಾ ರಾಮ್‌ರಾಜ್ ಷೋರೂಮ್‌ಗಳಲ್ಲೂ ಚಂದಾ ಕಟ್ಟಬಹುದು.

**ವಿಳಾಸ** : Bilupu
Ramraj V tower
10, Sengundapuram, Mangalam Road
Thirupur 641604.
Ph. 0421-4304106, 9842274137
email: venmaii@ramrajcotton.net

ಚಂದಾ ಸಲ್ಲಿಸಲೂ, ಒಟ್ಟಾಗಿ 'ಬಿಳುಪು' ಸಂಚಿಕೆಗಳನ್ನು ಕೊಳ್ಳಲೂ ಈ ಸಂಖ್ಯೆಯನ್ನು ಸಂಪರ್ಕಿಸಿ.

**ಫೋನ್ : 0421-4304106, 9842274137.**

## ಒಂದೇ ನಿಮಿಷದಲ್ಲಿ ಬಿಳುಪು ಚಂದಾದಾರರಾಗಬಹುದು!

ನಿಮ್ಮ ಚಂದಾ ಹಣವನ್ನು PhonePe G Pay Net transfer ಮೂಲಕವೂ ಸಲ್ಲಿಸಬಹುದು.

UPI ಪರಿವರ್ತನೆಯ ಮೂಲಕವೂ ಮೊಬೈಲ್ ಫೋನ್ ನಲ್ಲಿ ಬಿಳುಪು ಸಂಚಿಕೆಯ ಬ್ಯಾಂಕ್ ಖಾತೆಗೆ ಚಂದಾ ಹಣವನ್ನು ಸಲ್ಲಿಸಬಹುದು. ಬಿಳುಪು UPI id: kvbupiqr.75626@kvb

Bharat QR code ಅನುಕೂಲವಿರುವ ಮೊಬೈಲ್ ಬ್ಯಾಂಕಿಂಗ್ ಆಪ್ ಇರುವವರು, ಅದರಲ್ಲಿ ಇಲ್ಲಿರುವ ಬಿಳುಪು ಖಾತೆಯ QR code ಅನ್ನು ಸ್ಕ್ಯಾನ್ ಮಾಡಿ ಚಂದಾ ಸಲ್ಲಿಸಬಹುದು.

ಹಣ ಸಂದಾಯ ಮಾಡಿರುವುದಕ್ಕೆ ಸಂಬಂಧಿಸಿದ ಬ್ಯಾಂಕಿನ ಮಾಹಿತಿಯನ್ನು Forward ಮಾಡಿರಿ.

ಜೊತೆಗೆ ನಿಮ್ಮ ಪೂರ್ಣ ವಿಳಾಸವನ್ನು ದೂರವಾಣಿ ಸಂಖ್ಯೆಯ ಜೊತೆಗೆ ವಾಟ್ಸ್ ಆಪ್ ಮಾಡಿ. ದೂರವಾಣಿ ಸಂಖ್ಯೆ 98422 74137.


**ಬ್ಯಾಂಕ್ ಖಾತೆಯ ವಿವರ Venmaii**
**A/C No: 1809135000000299**
**Karur Vysya Bank, Tirupur SR Nagar Branch**
**IFSC Code: KVBL0001809.**



## ವಿದ್ಯಾರ್ಥಿಗಳಿಗೆ ವಿಶೇಷ ರಿಯಾಯಿತಿ

(ಆರನೇ ತರಗತಿಯ ನಂತರ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಮಾತ್ರ ಈ ರಿಯಾಯಿತಿ ಲಭ್ಯ. ಚಂದಾ ಹಣ ಪಾವತಿಸುವಾಗ, ವಿದ್ಯಾರ್ಥಿಗಳು ತಮ್ಮ ಗುರುತಿನ ಚೀಟಿಯ ಪ್ರತಿಯನ್ನು ಲಗತ್ತಿಸಬೇಕು).

| ವಾರ್ಷಿಕ ಚಂದಾ | | ದ್ವೈವಾರ್ಷಿಕ ಚಂದಾ | |
|---|---|---|---|
| ರೂ.~~೨೦೦~~ | ರೂ.125 ಮಾತ್ರ | ರೂ.~~೩೮೦~~ | ರೂ.250 ಮಾತ್ರ |



## ಹಿರಿಯ ನಾಗರಿಕರಿಗೆ ವಿಶೇಷ ರಿಯಾಯಿತಿ

(60 ವರ್ಷಗಳಿಗಿಂತ ಮೇಲ್ಪಟ್ಟವರು ಮಾತ್ರ ಈ ರಿಯಾಯಿತಿಯನ್ನು ಪಡೆದುಕೊಳ್ಳಬಹುದು. ತಾವು ಹುಟ್ಟಿದ ದಿನಾಂಕದ ಮಾಹಿತಿ ಇರುವ ಆಧಾರ್ ಕಾರ್ಡ್‌ನ ನಕಲನ್ನು ಇದರೊಂದಿಗೆ ಲಗತ್ತಿಸಬೇಕು).

| ವಾರ್ಷಿಕ ಚಂದಾ | | ದ್ವೈವಾರ್ಷಿಕ ಚಂದಾ | |
|---|---|---|---|
| ರೂ.~~೨೦೦~~ | ರೂ.125 ಮಾತ್ರ | ರೂ.~~೩೮೦~~ | ರೂ.250 ಮಾತ್ರ |

**ರಾಮ್‌ರಾಜ್ ಷೋರೂಂಗಳಲ್ಲಿ ರೂ. 10,000ಕ್ಕಿಂತ ಹೆಚ್ಚಾಗಿ ಕೊಳ್ಳುವವರಿಗೆ ಒಂದು ವರ್ಷದ ಚಂದಾ ಉಚಿತ.**



Owned, Published by K.R. NAGARAJAN, Published from 10, Sengunthapuram Mangalam Road, TIRUPUR - 641 604 & Printed by B. ASHOK KUMAR at RATHNA OFFSET PRINTERS, 40, Peters Road, Royapettah, Chennai - 600 014. Editor : T.J. GNANAVEL

Inners for Winners

RAMRAJ ©

VESTS

BRIEFS • TRUNKS

# ನಿಮ್ಮ ಚೈತನ್ಯವನ್ನು ನಿಮ್ಮೊಳಗಿಂದ ಹೊರತನ್ನಿ



ಸವಾಲುಗಳು ಮತ್ತು ಆಚರಣೆಗಳ ಮೂಲಕ,
ದಿನವಿಡೀ ಆರಾಮ ಮತ್ತು ಆತ್ಮವಿಶ್ವಾಸವನ್ನು ಅನುಭವಿಸಿ.
ರಾಮ್‌ರಾಜ್ ಬನಿಯನ್ಸ್‌ನೊಂದಿಗೆ ನಿಮ್ಮ
ನೈಜವ್ಯಕ್ತಿತ್ವವನ್ನು ಬಹಿರಂಗಪಡಿಸಿ.

Shreyas Iyer - Cricketer

SCAN QR CODE FOR STORE LOCATION

SUKRA® SUPER FINE COTTON VESTS | RISE-UP® Premium Banians | ROMEX® BANIANS | BRIEF | TRUNKS | COMPACT® PREMIUM COTTON RIB VESTS | Breeze® Eye Let Vests | WinStripe® STRIPED BANIANS | ARCHERY® Gym Vest | ACOSTE® BANIANS | BRIEF | TRUNKS

suriya® RICH COTTON BRIEF | udaya® RICH COTTON BRIEF | minar® FINE COTTON BRIEF | merc® MERCERISED BRIEF | target® FINE TRUNKS | softex® FINE TRUNKS | imaxs® RIB TRUNKS | ARROW® RIB TRUNKS | VINTRACK® FINE TRUNKS

Available @ Ramraj Showrooms & All leading textile shops | Shop online @ www.ramrajcotton.in

Bilupu Monthly - Postal Registration No. TN/TRU/30/2024-26. Registered with the Registrar of Newspapers for India under No. TNKAN/2017/74564. Day of Publishing: 01-06-2024 Posted at Tirupur BPC on 5th of every month.

